

# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

# Karnataka Scout & Guide

Monthly Magazine


| Vol -65 | Issue-03 | March 2024 | Pages: 36 | Annual Subscription: ₹ 100/- |
| --- | --- | --- | --- | --- |
| ಸಂಪುಟ: 65 | ಸಂಚಿಕೆ: 03 | ಮಾರ್ಚ್ 2024 | ಪುಟಗಳು: 36 | ವಾರ್ಷಿಕ ಚಂದ ರೂ. 100/- |


## ನೀರು ಉಳಿಸಿ ಮನುಕುಲ ಉಳಿಸಿ



## ನೀರು ಉಳಿಸಿ ಜೀವ ಉಳಿಸಿ



ಮಾರ್ಚ್ 15 ರಂದು ರಾಯಚೂರು ಜಿಲ್ಲಾ ಸಂಸ್ಥೆಯಿಂದ ಜಿಲ್ಲಾ ಸ್ಕೌಟ್ ಭವನದಲ್ಲಿ 2023–24ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮ್ಯಾಕ್ರೋ ಯೋಜನೆಯಡಿಯಲ್ಲಿ **"ಜಿಲ್ಲಾ ಸ್ಕೌಟ್ಸ್–ಗೈಡ್ಸ್ ತರಬೇತಿ ಕೇಂದ್ರದ ಕಟ್ಟಡ"** ಕಾಮಗಾರಿಯ ಭೂಮಿ ಪೂಜೆಯನ್ನು ಶ್ರೀ ಎನ್.ಎಸ್. ಬೋಸರಾಜು, ಮಾನ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಜಿಲ್ಲಾ ಸಂಸ್ಥೆ, ರಾಯಚೂರು ಇವರು ಮಾರ್ಚ್ 15 ರಂದು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಬಸವರಾಜ ಗದಗಿನ, ಜಿಲ್ಲಾ ಕಾರ್ಯದರ್ಶಿ, ಶ್ರೀಮತಿ ಎಸ್. ದಾನಮ್ಮ, ಜಿಲ್ಲಾ ಖಜಾಂಚಿ, ಶ್ರೀ ರುದ್ರಪ್ಪ ಅಂಗಡಿ, ಜಿಲ್ಲಾ ಸ್ಥಾನಿಕ ಆಯುಕ್ತರು (ಸ್ಕೌ), ಶ್ರೀ ಜಯಣ್ಣ, ಶ್ರೀ ಮಹಮ್ಮದ್ ಶಾಲಾಮ್, ಶ್ರೀ ವಿಶ್ವನಾಥ ಪಾಟೀಲ ಅತ್ತಾನೂರು, ಜಿಲ್ಲಾ ಸ್ಥಾನಿಕ ಆಯುಕ್ತರು(ಸ್ಕೌ), ಶ್ರೀ ಹನುಮಂತಪ್ಪ ಗವಾಯಿ, ನಿವೃತ್ತ ಜಿಲ್ಲಾ ಶಿಕ್ಷಣಾಧಿಕಾರಿ, ಶ್ರೀ ಜಯಪ್ರಕಾಶ್ ರೆಡ್ಡಿ, ನಿವೃತ್ತ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ, ಶ್ರೀಮತಿ ಲಲಿತಾ ಬಸವನಗೌಡ, ಸಹಾಯಕ ಜಿಲ್ಲಾ ಆಯುಕ್ತರು(ಗೈ), ಶ್ರೀ ಆರ್.ಎಚ್. ಸಾಗರ್, ಅಧ್ಯಕ್ಷರು, ಸ್ಥಳೀಯ ಸಂಸ್ಥೆ, ಶ್ರೀ ಎನ್. ಶೇಖರ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ, ಶ್ರೀಮತಿ ಶಕುಂತಲಾ, ಜಿಲ್ಲಾ ತರಬೇತಿ ಆಯುಕ್ತರು(ಗೈ), ಶ್ರೀ ನಾಗಭೂಷಣ, ಎಚ್.ಎಂ., ಸಹಾಯಕ ಜಿಲ್ಲಾ ತರಬೇತಿ ಆಯುಕ್ತರು(ಸ್ಕೌ), ಶ್ರೀ ಲಿಂಗನಾಯಕ, ಜಿಲ್ಲಾ ಗಣತಿ ಸಂಯೋಜಕರು, ಶ್ರೀ ಶರಣಪ್ಪ, ಸ್ಕೌಟ್ ಮಾಸ್ಟರ್, ಶ್ರೀ ಸಿ.ಎಸ್. ಪ್ರಸನ್ನ ಕುಮಾರ್, ಸ್ಕೌಟ್ ಮಾಸ್ಟರ್, ಶ್ರೀ ಅಂಬಣ್ಣ ನಾಯಕ ಮ್ಯಾಕಲ್, ಎಸ್.ಜಿ.ವಿ. ಇತರರು ಉಪಸ್ಥಿತರಿದ್ದರು.



ಮಾರ್ಚ್ 25 ರಿಂದ 28ರ ವರೆಗೆ ಉಡುಪಿ ಜಿಲ್ಲೆಯ ಕಾರ್ಕಳದ ಭುವನೇಂದ್ರ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ "ರೋವರ್ಸ್–ರೇಂಜರ್ಸ್‌ಗಳ ರಾಜ್ಯ ಮಟ್ಟದ ಜಲಸಾಹಸ, ವಿಪತ್ತು ನಿರ್ವಹಣೆ ಹಾಗೂ ಪ್ರಕೃತಿ ಅಧ್ಯಯನ ಶಿಬಿರ"ದ ಸಮಾರೋಪ ಸಮಾರಂಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಶುಭಕೋರಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ॥ ಮಂಜುನಾಥ್ ಕೋಟ್ಯಾನ್, ಶಿಬಿರದ ನಾಯಕರುಗಳಾದ ಡಾ॥ ಈಶ್ವರ ಭಟ್, ಶ್ರೀಮತಿ ಸ್ವಾತಿ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ ಭಟ್, ಜಿಲ್ಲಾ ಗೈಡ್ಸ್ ಆಯುಕ್ತೆ ಶ್ರೀಮತಿ ಜ್ಯೋತಿ ಜೆ.ಪೈ., ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ ಅಡಿಗ, ಶ್ರೀ ಕೆ.ಎಸ್. ಪ್ರತೀಮ್ ಕುಮಾರ್ ಮತ್ತು ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಪೋಷಕರು**
ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**
ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**
ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**
ಕೆ. ಗಂಗಪ್ಪಗೌಡ

**ಸಹಸಂಪಾದಕರು**
ಎನ್. ಶ್ರೀನಿವಾಸನ್

**ಸಂಚಾಲಕರು**
ಬಿ.ಎಸ್. ರವೀಂದ್ರ

**ಸದಸ್ಯರು**
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್‍ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 65 Issue : 03 March 2024

## ಯುಗಾದಿ ಮತ್ತು ರಂಜಾನ್ ಹಬ್ಬದ ಶುಭಾಶಯಗಳು

**ಒಳಪುಟಗಳಲ್ಲಿ...**

ರಾಜ್ಯ ಮುಖ್ಯ ಆಯುಕ್ತರ ನುಡಿ 04
2023-24ರ ಸಾಲಿನ ಅಂಕಿ ಅಂಶಗಳ ಪಟ್ಟಿ 06
ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ 07
National Level Advocacy Workshop 09
ಗೈಡ್ ಆಯುಕ್ತರುಗಳ ರಾಷ್ಟ್ರ ಮಟ್ಟದ ಸಮಾವೇಶ 10
ರಾಜ್ಯ ಮಟ್ಟದ ಬ್ಯೂಟಿಷಿಯನ್ ತರಬೇತಿ ಶಿಬಿರ 11
ರಾಜ್ಯ ಮಟ್ಟದ ಜಲ ಸಾಹಸ, ವಿಪತ್ತು ನಿರ್ವಹಣೆ ಹಾಗೂ ಪ್ರಕೃತಿ ಅಧ್ಯಯನ ಶಿಬಿರ 11
ಅಭಿನಂದನೆಗಳು 12
ಜಿಲ್ಲಾ ವಾರ್ತೆಗಳು 14
ಎಪ್ರಿಲ್ 2024ರ ಮಾಹೆಯ ಮಕ್ಕಳ ಮತ್ತು ವಯಸ್ಕ ನಾಯಕರ ಕಾರ್ಯಕ್ರಮ ಮತ್ತು ಚಟುವಟಿಕೆಗಳು 32
ಶ್ರದ್ಧಾಂಜಲಿ 34

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್-ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ಚಾಂದ್ರಮಾನ ಯುಗಾದಿ ಹಾಗೂ ರಂಜಾನ್ ಹಬ್ಬದ ಹಾರ್ದಿಕ ಶುಭಾಶಯಗಳು. ಈ ಯುಗಾದಿ ಮತ್ತು ರಂಜಾನ್ ಹಬ್ಬಗಳು ಪ್ರತಿಯೊಬ್ಬರ ಜೀವನದಲ್ಲಿ ಸುಖ, ಶಾಂತಿ, ಸಮೃದ್ಧಿಯನ್ನುಂಟುಮಾಡಲಿ ಹಾಗೂ ರಾಜ್ಯದಲ್ಲಿ ಸ್ಕೌಟ್ಸ್–ಗೈಡ್ಸ್ ಚಳುವಳಿಗೆಗೆ ಮತ್ತಷ್ಟು ಚೈತನ್ಯ ತರಲಿ ಎಂದು ಆಶಿಸುತ್ತೇನೆ.

2023–24ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳು ಮುಕ್ತಾಯದ ಹಂತದಲ್ಲಿವೆ. ರಾಜ್ಯದ ಪಠ್ಯಕ್ರಮ ಅನುಸರಿಸುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5, 8, 9 ಮತ್ತು 11ನೇ ತರಗತಿಗಳ ಬೋರ್ಡ್ ಪರೀಕ್ಷೆಗಳಿಗೆ ಇದ್ದ ಗೋಜಲಿಗೆ ತೆರೆ ಬಿದ್ದಿದ್ದು, ಅರ್ಧಕ್ಕೆ ಮೊಟಕುಗೊಂಡಿದ್ದ ಪರೀಕ್ಷೆಗಳು ಮುಂದುವರೆದಿವೆ. ಮಾರ್ಚ್ 25 ರಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಗಳೂ ಪ್ರಾರಂಭಗೊಂಡಿವೆ. ಪರೀಕ್ಷೆಗಳನ್ನು ಎದುರಿಸುವ ಎಲ್ಲ ಮಕ್ಕಳಿಗೂ ನಮ್ಮ ಸಂಸ್ಥೆ ಶುಭ ಹಾರೈಸುತ್ತದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮಹತ್ವಾಕಾಂಕ್ಷಿ ಮತ್ತು ದೂರದೃಷ್ಟಿಯ ಯೋಜನೆಯಾದ OYMS (ಆನ್‌ಲೈನ್ ಯುವ ನಿರ್ವಹಣಾ ವ್ಯವಸ್ಥೆ)ಗೆ ನಮ್ಮ ರಾಜ್ಯದಲ್ಲಿ ಸದಸ್ಯರನ್ನು ನೋಂದಾಯಿಸುವ ಪ್ರಕ್ರಿಯೆಯಲ್ಲಿ ಸಾಧ್ಯವಾದಷ್ಟು ಪ್ರಗತಿ ಸಾಧಿಸಿದ್ದೇವೆ. ಇದರ ಜೊತೆಗೆ 2023–24ನೇ ಸಾಲಿಗೆ 6.7 ಲಕ್ಷಕ್ಕೂ ಮೀರಿ ಗಣತಿಯನ್ನು ಸಂಗ್ರಹಿಸುವ ಮೂಲಕ ಉತ್ತಮ ಸಾಧನೆ ಮಾಡಿದ್ದೇವೆ. ಈ ಎರಡೂ ಕಾರ್ಯಕ್ರಮಗಳಿಗೆ ಶ್ರಮವಹಿಸಿರುವ ನಮ್ಮ ರಾಜ್ಯ ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳಿಗೆ, ಶಿಕ್ಷಕರುಗಳಿಗೆ, ವಿಶೇಷವಾಗಿ ನಮ್ಮ ಎಲ್ಲ ಸಿಬ್ಬಂದಿಗೆ ಹೃತಪೂರ್ವಕವಾದ ಅಭಿನಂದನೆಗಳು. ಮುಂದಿನ ವರ್ಷದಲ್ಲಿ ಗಣತಿಗೆ ಸಂಬಂಧಿಸಿದಂತೆ ಗುರಿಯನ್ನು ನಿಗದಿತ ಅವಧಿಯೊಳಗೆ ಪೂರೈಸಲು ಜೂನ್ ತಿಂಗಳಿನಿಂದಲೇ ಕಾರ್ಯೋನ್ಮುಖರಾಗುವುದು ಸೂಕ್ತ.

ರಾಜ್ಯದಲ್ಲಿ ಈ ಶೈಕ್ಷಣಿಕ ವರ್ಷ ಸ್ಕೌಟ್ಸ್–ಗೈಡ್ಸ್ ಚಳುವಳಿಗೆ ಧನಾತ್ಮಕ ವರ್ಷವಾಗಿದೆ. ಈ ಸಾಲಿನಲ್ಲಿ ನಾವು ಪ್ರಪ್ರಥಮ ಕಲ್ಯಾಣ ಕರ್ನಾಟಕದ ಮಿನಿ ಜಾಂಬೋರೇಟ್ ಅನ್ನು ಬೀದರ್‌ನಲ್ಲಿ ಆಯೋಜಿಸಿ ಯಶಸ್ವಿಗೊಳಿಸಿದ್ದೇವೆ. ಕೇಂದ್ರ ಸಂಸ್ಥೆಯಿಂದ ನೀಡಲಾದ ಹಲವು ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿದ್ದೇವೆ. ತರಬೇತಿ ವಿಭಾಗದಲ್ಲಿ ತೃಪ್ತಿದಾಯಕ ಸಾಧನೆಯನ್ನು ಮಾಡಿದ್ದೇವೆ. ರಾಜ್ಯ ಸರ್ಕಾರ ಮತ್ತು ಶಿಕ್ಷಣ ಇಲಾಖೆಯ ನಿರಂತರ ಸಹಕಾರ, ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರೋತ್ಸಾಹ, ಬದ್ಧತೆಯನ್ನು ಪ್ರದರ್ಶಿಸುತ್ತಿರುವ ಸ್ಕೌಟ್ಸ್–ಗೈಡ್ಸ್‌ನ ಎಲ್ಲ ಹಂತದ ಪದಾಧಿಕಾರಿಗಳು ಹಾಗೂ ಶಿಕ್ಷಕರುಗಳ ಅವಿರತ ಶ್ರಮದಿಂದ ಈ ಯಶಸ್ಸು ಸಾಧ್ಯವಾಗಿದೆ. ಅದಕ್ಕಾಗಿ ಎಲ್ಲರಿಗೂ ನಮ್ಮ ಸಂಸ್ಥೆ ಆಭಾರಿಯಾಗಿರುತ್ತದೆ. ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಸ್ಕೌಟ್ಸ್–ಗೈಡ್ಸ್‌ನ ಯಶಸ್ವಿ ಅನುಷ್ಠಾನಕ್ಕೆ ಇದೇ ರೀತಿಯ ಸಹಕಾರವನ್ನು ಅಪೇಕ್ಷಿಸುತ್ತೇನೆ.

ನಮ್ಮ ಸಂಸ್ಥೆಯ ವತಿಯಿಂದ ಪ್ರತಿವರ್ಷ ನಡೆಸಿಕೊಂಡು ಬರುತ್ತಿರುವ ಬೇಸಿಗೆ ಶಿಬಿರಗಳಿಗೆ ಸಿಗುತ್ತಿರುವ ಸ್ಪಂದನೆ ಮತ್ತು ಯಶಸ್ಸಿನ ಪ್ರೇರಣೆಯೊಂದಿಗೆ, ಈ ವರ್ಷವೂ ಸಹ ಕ್ಲಸ್ಟರ್ ಹಂತಗಳಲ್ಲಿ "ಬೇಸಿಗೆ ಶಿಬಿರ"ಗಳ ಆಯೋಜನೆಯಲ್ಲಿ ತೊಡಗಿದ್ದು, ಈಗಾಗಲೇ ಕೆಲವು ಕಡೆಗಳಲ್ಲಿ ಶಿಬಿರಗಳು ಪ್ರಾರಂಭವಾಗಿವೆ. ಅನೇಕ ಕಡೆಗಳಲ್ಲಿ ಶಿಬಿರಗಳನ್ನು ಹಮ್ಮಿಕೊಳ್ಳುವ ಸಿದ್ಧತೆಗಳು ನಡೆಯುತ್ತಿದ್ದು, ಮಕ್ಕಳು ಉತ್ಸುಕತೆಯಿಂದ ಪಾಲ್ಗೊಳ್ಳುವ ಆಶಾಭಾವನೆ ಮೂಡಿದೆ. ರಾಜ್ಯಾದ್ಯಂತ 7 ದಿನಗಳ ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸಲಿರುವ ಸುಮಾರು ಎರಡು ಲಕ್ಷ ವಿದ್ಯಾರ್ಥಿಗಳಿಗೆ ಒಂದು ಅಥವಾ ಎರಡು ದಿನಗಳಿಗೆ ಬಿಸ್ಕೆಟ್ ಮತ್ತು ಜ್ಯೂಸ್‌ಗಳನ್ನು ನೀಡುತ್ತಿರುವ ಪ್ರತಿಷ್ಠಿತ ITC ಕಂಪನಿಗೆ ಮತ್ತು ಬೇರೆಬೇರೆ ರೀತಿಯಲ್ಲಿ ನೆರವು ನೀಡುತ್ತಿರುವ ದಾನಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಶಿಬಿರಗಳು ಮಕ್ಕಳಿಗೆ ಸಜ್ಜನ ನಡೆವಳಿಕೆಗಳ ಕಲಿಕೆಗೆ ಮತ್ತು ಸಾಮಾಜಿಕ ಸಂವಹನಕ್ಕೆ ಉತ್ತಮ ವೇದಿಕೆಗಳಾಗುವ ಜೊತೆಗೆ, ಸ್ಕೌಟ್ಸ್–ಗೈಡ್ಸ್ ಚಳುವಳಿಗೆ ಹೆಚ್ಚುಹೆಚ್ಚು ಆಕರ್ಷಣೆ ಸಿಗಲು ಪೂರಕವಾಗಲೆಂದು ಆಶಿಸುತ್ತೇನೆ.

ಲೋಕಸಭಾ ಚುನಾವಣೆಗೆ ವೇಳಾಪಟ್ಟಿ ಪ್ರಕಟವಾಗಿದೆ. ಚನಾವಣೆಗಳು ಆಡಳಿತ ಮತ್ತು ರಾಜಕಾರಣಕ್ಕೆ ನೇರವಾಗಿ ಸಂಬಂಧಿಸಿವೆ. ಚುನಾವಣೆ ಪ್ರಕ್ರಿಯೆಗಳು ನಡೆಯುವ ಎರಡು ತಿಂಗಳಿಗೂ ಹೆಚ್ಚು ಕಾಲ ನಮ್ಮ ದೈನಂದಿನ ಚಟುವಟಿಕೆಗಳ ಮೇಲೆ ದಟ್ಟವಾದ ಪ್ರಭಾವ ಬೀರಲಿದೆ. ಹಲವು ಜಿಲ್ಲೆಗಳಲ್ಲಿ ಮತದಾನ ಮತ್ತು ಮತ ಎಣಿಕೆಯ ಸಂದರ್ಭದಲ್ಲಿ ಸರ್ಕಾರ ನಮ್ಮ ಸಂಸ್ಥೆಯ ಸೇವೆಯನ್ನು ಬಳಸಿಕೊಳ್ಳಲು ಬಯಸಿದರೆ, ನಾವೆಲ್ಲರೂ ಸ್ಪಂದಿಸೋಣ. ನಮ್ಮ ಚಳುವಳಿಯಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬರೂ ಕಡ್ಡಾಯವಾಗಿ ಮತ ಚಲಾಯಿಸುವುದು ಮಾತ್ರವಲ್ಲ, ಮತದಾರರಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಬೇಕು. ನಮ್ಮದು ಜಾತ್ಯಾತೀತ ಮತ್ತು ಪಕ್ಷಾತೀತ ಚಳುವಳಿಯಾದ್ದರಿಂದ, ಸಮವಸ್ತ್ರಧಾರಿಗಳಾಗಿ ಒಂದು ಪಕ್ಷದ ಅಥವ ಒಂದು ವರ್ಗದ ಪರವಾಗಿ ಯಾರೂ ಪ್ರಚಾರದಲ್ಲಿ ತೊಡಗಬಾರದೆಂಬ ಕಳಕಳಿ ನನ್ನದು.

ಮಾರ್ಚ್ ತಿಂಗಳಿನಲ್ಲಿ ನಾವು ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದ್ದೇವೆ. ಮಾರ್ಚ್ 02 ರಂದು ದೊಡ್ಡಬಳ್ಳಾಪುರದಲ್ಲಿ ರೋವರ್ಸ್–ರೇಂಜರ್ಸ್ ಮತ್ತು ಯುವ ನಾಯಕರಿಗೆ ಸುಸ್ಥಿರ ಅಭಿವೃದ್ಧಿ ಗುರಿಗಳ (SDG Goals) ಬಗ್ಗೆ ನಡೆಸಲಾದ ಕಾರ್ಯಾಗಾರ, ಮೈಸೂರು ಜಿಲ್ಲಾ ಸಂಸ್ಥೆ ಮತ್ತು ಶ್ರೀ ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಮೈಸೂರಿನಲ್ಲಿ ಸುಮಾರು 950 ಯುವಕ/ ಯುವತಿಯರ ಭಾಗವಹಿಸುವಿಕೆಯ ಮೂಲಕ ನಡೆದ "ರೋವರ್ಸ್–ರೇಂಜರ್ಸ್ ಸಮಾವೇಶ", ಮಾರ್ಚ್ 23 ರಂದು ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆ ಆಯೋಜಿಸಿದ್ದ ರಾಜ್ಯಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭ, ಮಾರ್ಚ್ 26 ರಂದು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದಲ್ಲಿ ಜರುಗಿದ ರೋವರ್ಸ್–ರೇಂಜರ್ಸ್‌ಗಳ ರಾಜ್ಯ ಮಟ್ಟದ ಜಲಸಾಹಸ, ಪ್ರಕೃತಿ ಅಧ್ಯಯನ ಮತ್ತು ವಿಪತ್ತು ನಿರ್ವಹಣಾ ಶಿಬಿರ, ಇವೆಲ್ಲವೂ ಯಶಸ್ವಿಯಾಗಿ ನಡೆದಿವೆ. ಚಿತ್ರದುರ್ಗದಲ್ಲಿ ಜಿಲ್ಲಾ ಸಂಸ್ಥೆಯ ನೂತನ ಕಟ್ಟಡದ ಉದ್ಘಾಟನೆ ಆಗಿದೆ. ಶಿರಸಿಯ ಮಾರಿಕಾಂಬ ಜಾತ್ರಾ ಮಹೋತ್ಸವದಲ್ಲಿ ನಮ್ಮ ರೋವರ್ಸ್–ರೇಂಜರ್ಸ್‌ಗಳು ಸೇವೆ ಸಲ್ಲಿಸಿದ್ದಾರೆ.

ಮಾರ್ಚ್ 21, 22 ರಂದು ಕ್ರಮವಾಗಿ ವಿಶ್ವ ಅರಣ್ಯ ದಿನಾಚರಣೆ, ವಿಶ್ವ ಜಲ ದಿನಾಚರಣೆಗಳಾಗಿವೆ. ಪ್ರಕೃತಿ ಮತ್ತು ಪರಿಸರ ರಕ್ಷಣೆಗೆ ಪೂರಕವಾದ ಈ ಮೂರು ಆಚರಣೆಗಳು ಒಂದರ ನಂತರ ಒಂದು ಬಂದಿರುವುದು ಪರಿಸರದ ಬಗ್ಗೆ ಪ್ರತಿಯೊಬ್ಬರಲ್ಲೂ ಬದ್ಧತೆ, ಕಾಳಜಿಯನ್ನು ಹೆಚ್ಚಿಸುವ ದ್ಯೋತಕವೆಂದು ಭಾವಿಸಿದ್ದೇನೆ. ಅವೆಲ್ಲವನ್ನು ಆಯಾ ದಿನಗಳಿಗೆ ಮಾತ್ರ ಸೀಮಿತಗೊಳಿಸದೆ, ಪರಿಸರ ಸಂರಕ್ಷಣೆ ನಮ್ಮ ಚಳುವಳಿಯ ಬಹುಮುಖ್ಯ ಧ್ಯೇಯವೂ ಆಗಿರುವುದರಿಂದ ಪ್ರತಿದಿನವನ್ನೂ ಪ್ರಕೃತಿಯ ದಿನಾಚರಣೆಯನ್ನಾಗಿ ಆಚರಿಸೋಣ. ರಾಜ್ಯದಲ್ಲಿ ಭೀಕರ ಜಲಕ್ಷಾಮ ತಲೆದೋರಿದೆ. ಏಪ್ರಿಲ್ ಮೇ ತಿಂಗಳಿನಲ್ಲಿ ಮಳೆ ಬೀಳದಿದ್ದರೆ, ಪರಿಸ್ಥಿತಿ ಮತ್ತಷ್ಟು ಭಯಾನಕವಾಗುವ ಆತಂಕವಿದೆ. ನೀರನ್ನು ಪೋಲು ಮಾಡದೆ ಕಾಳಜಿಯಿಂದ ಬಳಕೆ ಮಾಡೋಣ. ರಾಜ್ಯದಲ್ಲಿ ಸ್ಕೌಟ್ಸ್–ಗೈಡ್ಸ್ ಚಳುವಳಿಯ ಬೆಳವಣಿಗೆಗೆ ಅನೇಕ ಮಹನೀಯರ ಪರಿಶ್ರಮ ಇದೆ. ಕೆಲವು ಕುಟುಂಬಗಳ ಕೊಡುಗೆ ಇದೆ. ಅವುಗಳಲ್ಲಿ ಉಡುಪಿಯ ಡಾ. ವಿ.ಎಸ್. ಆಚಾರ್ಯ ಅವರ ಕುಟುಂಬವೂ ಒಂದು. ಉಡುಪಿಯ ತರಬೇತಿ ಕೇಂದ್ರಕ್ಕೆ ಜಮೀನು ಕೊಡಿಸುವಲ್ಲಿ, ಮೂಲಭೂತ ಸೌಕರ್ಯಗಳನ್ನು ದೊರಕಿಸಿಕೊಡುವಲ್ಲಿ ದಿವಂಗತ ಡಾ. ವಿ.ಎಸ್. ಆಚಾರ್ಯ ಅವರ ಕೊಡುಗೆ ಅಪಾರವಾದುದು. ಅದೇ ರೀತಿ ಶ್ರೀಮತಿ ಶಾಂತಾ ಆಚಾರ್ಯ ಅವರು ನಮ್ಮ ರಾಜ್ಯ ಸಂಸ್ಥೆಯ ಟ್ರಸ್ಟಿಯಾಗಿ, ಉಡುಪಿ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತೆಯಾಗಿ ಸಲ್ಲಿಸುತ್ತಿರುವ ಸೇವೆ ಸ್ಮರಣೀಯ ಮತ್ತು ಉಡುಪಿ ಜಿಲ್ಲೆಯಲ್ಲಿ ನಡೆಯುವ ಸ್ಕೌಟ್ಸ್–ಗೈಡ್ಸ್ ಶಿಬಿರಗಳಲ್ಲಿ ಭಾಗವಹಿಸುವ ಮಕ್ಕಳಿಗೆ ದಾಸೋಹವನ್ನು ನೀಡುವ ಮೂಲಕ ಮಾತೃವಾತ್ಸಲ್ಯವನ್ನು ಮೆರೆದಿದ್ದಾರೆ. ಅವರ ಇಡೀ ಕುಟುಂಬವೇ ಸ್ಕೌಟ್ಸ್–ಗೈಡ್ಸ್ ಚಳುವಳಿಯಲ್ಲಿ ತೊಡಗಿದೆ. ಶ್ರೀಮತಿ ಶಾಂತಾ ಆಚಾರ್ಯ ರವರು ತಮ್ಮ ಆರೋಗ್ಯ ಮತ್ತು ವಯೋಸಹಜ ಕಾರಣಗಳಿಂದಾಗಿ ಜಿಲ್ಲಾ ಆಯುಕ್ತರ ಜವಾಬ್ದಾರಿಯಿಂದ ವಿಮುಕ್ತಗೊಂಡು, ಮಾರ್ಗದರ್ಶಕರಾಗಿ ಮುಂದುವರೆಯುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಾರ್ಚ್ 27ರಂದು ಉಡುಪಿಗೆ ಹೋಗಿ ಅವರನ್ನು ಮತ್ತು ಅವರ ಕುಟುಂಬದವರನ್ನು ಭೇಟಿ ಮಾಡಿ ಸಂಸ್ಥೆಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಿದ್ದೇನೆ. ಅವರ ಸೇವೆಯನ್ನು ನಮ್ಮ ಸಂಸ್ಥೆ ಸದಾ ಸ್ಮರಿಸುತ್ತದೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ಮನುಷ್ಯನ ಬದುಕಿಗೆ ಅತ್ಯಗತ್ಯವಾದ ಗಾಳಿ, ನೀರು ಮತ್ತು
ಆಹಾರ ಗಳೆಲ್ಲವೂ ಅಪಾಯದ ಅಂಚಿನಲ್ಲಿರುವ ಈ ಕಾಲಘಟ್ಟದಲ್ಲಿ
ಇವುಗಳ ಸುರಕ್ಷಿತ ಬಳಕೆ ನಮ್ಮೆಲ್ಲರ ಮೊದಲ ಆದ್ಯತೆಯಾಗಲಿ

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರುಎಲ್ಲಾ

# ಶ್ರೀಮತಿ ಶಾಂತ ವಿ. ಆಚಾರ್ಯರವರಿಗೆ ಕೃತಜ್ಞತೆ ಸಮರ್ಪಣೆ



ದಿನಾಂಕ 27 ಮಾರ್ಚ್ 2024ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಉಡುಪಿಯಲ್ಲಿ ಜರುಗಿದ ಸಮಾರಂಭದಲ್ಲಿ ಶ್ರೀಮತಿ ಶಾಂತ ವಿ. ಆಚಾರ್ಯ ಅವರಿಗೆ ರಾಜ್ಯ ಮತ್ತು ಜಿಲ್ಲಾ ಸಂಸ್ಥೆ ಪರವಾಗಿ ಗೌರವ ಸಮರ್ಪಿಸಿದರು. ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಜ್ಯೋತಿ ಜೆ. ಪೈ ಮತ್ತು ಶ್ರೀಮತಿ ಸಾವಿತ್ರಿ ಮನೋಹರ್ ಹಾಗೂ ಡಾ. ಆಚಾರ್ಯ ಕುಟುಂಬದವರು ಉಪಸ್ಥಿತರಿದ್ದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾಗಿ, ರಾಜ್ಯ ಗೈಡ್ ಆಯುಕ್ತರಾಗಿ, ರಾಜ್ಯ ಸಂಸ್ಥೆಯ ಟ್ರಸ್ಟಿಯಾಗಿ ಮತ್ತು ಉಡುಪಿ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾಗಿ ಶ್ರೀಮತಿ ಶಾಂತ ವಿ. ಆಚಾರ್ಯರವರು ಸಲ್ಲಿಸಿರುವ ಸೇವೆ ಸ್ಮರಣೀಯ.

ಉಡುಪಿಯಲ್ಲಿ ಸುಸಜ್ಜಿತವಾದ ಡಾ. ವಿ.ಎಸ್. ಆಚಾರ್ಯ ಸ್ಕೌಟ್ಸ್–ಗೈಡ್ಸ್ ತರಬೇತಿ ಕೇಂದ್ರದ ನಿರ್ಮಾಣಕ್ಕೆ ಕಾರಣಕರ್ತರಾಗುವ ಮೂಲಕ ಚಳುವಳಿಯಲ್ಲಿ ತಮ್ಮ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತಹ ಮಹತ್‌ಕಾರ್ಯವನ್ನು ಮಾಡಿರುತ್ತಾರೆ. ಕರ್ನಾಟಕ ಸರ್ಕಾರದ ಮಾಜಿ ಗೃಹ, ವೈದ್ಯಕೀಯ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಇಲಾಖೆಗಳ ಸಚಿವರಾಗಿದ್ದ ಇವರ ಪತಿ ಡಾ|| ವಿ.ಎಸ್. ಆಚಾರ್ಯ ಅವರನ್ನು ನಮ್ಮ ಸಂಸ್ಥೆ ಸದಾ ಕೃತಜ್ಞತೆಯಿಂದ ಸ್ಮರಿಸುತ್ತದೆ.

ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಬಂಧುಗಳ ಪರವಾಗಿ ಇವರಿಗೆ ಮತ್ತು ಇವರ ಕುಟುಂಬ ವರ್ಗದವರಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇವೆ.



ಡಾ. ವಿ.ಎಸ್. ಆಚಾರ್ಯ ಕುಟುಂಬದ ಸದಸ್ಯರೊಂದಿಗೆ
ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಮತ್ತು ಶ್ರೀ ಎಂ. ಪ್ರಭಾಕರ್ ಭಟ್ ಇದ್ದಾರೆ.

## CENSUS STATEMENT OF SCOUTS AND GUIDES FOR THE YEAR 2023-24 AS ON 31.3.2024

| SL No. | Name of the District | Target fixed 2023-24 | | | Achived Census 2023-24 | | | Balance to Reach | Total Achieved % |
|---|---|---|---|---|---|---|---|---|---|
| | | Scout | Guide | Total Scout & Guide Target | Scout | Guide | Total Scout & Guide | | |
| 1 | Bagalkote | 14575 | 10812 | 25387 | 13227 | 6041 | 19268 | 6119 | 75.90 |
| 2 | BBMP | 3750 | 11700 | 15450 | 4742 | 5996 | 10738 | 4712 | 69.50 |
| 3 | Belagavi | 35900 | 32300 | 68200 | 29513 | 22509 | 52022 | 16178 | 76.28 |
| 4 | Bellary | 13750 | 10875 | 24625 | 13761 | 10905 | 24666 | -41 | 100.17 |
| 5 | Bengaluru East | 4950 | 8251 | 13201 | 4073 | 4218 | 8291 | 4910 | 62.81 |
| 6 | Bengaluru North | 9850 | 12912 | 22762 | 8803 | 11341 | 20144 | 2618 | 88.50 |
| 7 | Bengaluru Rural | 7875 | 9250 | 17125 | 5953 | 5233 | 11186 | 5939 | 65.32 |
| 8 | Bengaluru South | 12000 | 14170 | 26170 | 13735 | 12474 | 26209 | -39 | 100.15 |
| 9 | Bidar | 5800 | 7410 | 13210 | 6321 | 4025 | 10346 | 2864 | 78.32 |
| 10 | Chamarajanagar | 6300 | 8925 | 15225 | 8890 | 5525 | 14415 | 810 | 94.68 |
| 11 | Chickmagaluru | 7050 | 18364 | 25414 | 8568 | 4694 | 13262 | 12152 | 52.18 |
| 12 | Chikkaballapur | 3880 | 6500 | 10380 | 2852 | 1837 | 4689 | 5691 | 45.17 |
| 13 | Chitradurga | 23450 | 23150 | 46600 | 23919 | 18013 | 41932 | 4668 | 89.98 |
| 14 | Dakshina Kannada | 25150 | 36450 | 61600 | 20872 | 28462 | 49334 | 12266 | 80.09 |
| 15 | Davanagere | 18500 | 19792 | 38292 | 11441 | 12647 | 24088 | 14204 | 62.91 |
| 16 | Dharwad | 8050 | 8094 | 16144 | 8673 | 6800 | 15473 | 671 | 95.84 |
| 17 | Gadag | 7950 | 9490 | 17440 | 7195 | 4577 | 11772 | 5668 | 67.50 |
| 18 | Hassan | 13750 | 18325 | 32075 | 15408 | 16683 | 32091 | -16 | 100.05 |
| 19 | Haveri | 14050 | 12324 | 26374 | 9719 | 5472 | 15191 | 11183 | 57.60 |
| 20 | Kalaburagi | 9250 | 8150 | 17400 | 10009 | 7442 | 17451 | -51 | 100.29 |
| 21 | Karwar (U.K) | 7850 | 8928 | 16778 | 8390 | 6688 | 15078 | 1700 | 89.87 |
| 22 | Kodagu | 4350 | 5698 | 10048 | 3451 | 5356 | 8807 | 1241 | 87.65 |
| 23 | Kolar | 8450 | 7285 | 15735 | 8679 | 8298 | 16977 | -1242 | 107.89 |
| 24 | Koppal | 8600 | 5948 | 14548 | 10152 | 6419 | 16571 | -2023 | 113.91 |
| 25 | Madhugiri | 2350 | 4376 | 6726 | 3752 | 2603 | 6355 | 371 | 94.48 |
| 26 | Mandya | 4850 | 5500 | 10350 | 2147 | 1071 | 3218 | 7132 | 31.09 |
| 27 | Mysuru | 11400 | 9840 | 21240 | 13779 | 8884 | 22663 | -1423 | 106.70 |
| 28 | Raichur | 14900 | 15184 | 30084 | 13358 | 11164 | 24522 | 5562 | 81.51 |
| 29 | Ramanagar | 6900 | 5204 | 12104 | 4276 | 1889 | 6165 | 5939 | 50.93 |
| 30 | Shivamogga | 11600 | 11136 | 22736 | 9411 | 9493 | 18904 | 3832 | 83.15 |
| 31 | Sirsi (U.K) | 5950 | 8140 | 14090 | 5005 | 5027 | 10032 | 4058 | 71.20 |
| 32 | Tumakuru | 11350 | 11054 | 22404 | 8207 | 10927 | 19134 | 3270 | 85.40 |
| 33 | Udupi | 20000 | 25050 | 45050 | 16470 | 22844 | 39314 | 5736 | 87.27 |
| 34 | Vijayapura | 13025 | 10056 | 23081 | 11787 | 8356 | 20143 | 2938 | 87.27 |
| 35 | Vijayanagara | 11800 | 6272 | 18072 | 8338 | 4285 | 12623 | 5449 | 69.85 |
| 36 | Yadagiri | 4700 | 4180 | 8880 | 5104 | 3004 | 8108 | 772 | 91.31 |
| | TOTAL | 393905 | 431095 | 825000 | 359980 | 311202 | 671182 | 153818 | 81.36 |

## ಹೃದಯ ತುಂಬಿದ ಅಭಿನಂದನೆಗಳು

**6,70,000+** ಗಣತಿ ನೋಂದಣಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ 2023-24 ನೇ ಸಾಲಿನಲ್ಲಿ ಇತಿಹಾಸದಲ್ಲಿ ಮೊದಲ ಬಾರಿಗೆ ಒಟ್ಟು 6.7 ಲಕ್ಷ ದಳನಾಯಕರುಗಳು ಹಾಗೂ ವಿದ್ಯಾರ್ಥಿಗಳ ಗಣತಿ ನೋಂದಣಿಯಾಗಿರುವುದು ಶ್ಲಾಘನೀಯ.

ಈ ಸಾಧನೆಗೆ ಸಹಕರಿಸಿದ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ,ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರುಗಳಿಗೆ, ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳಿಗೆ, ಜಿಲ್ಲಾ ಸಂಘಟಕರುಗಳಿಗೆ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳಿಗೆ, ದಳನಾಯಕರುಗಳಿಗೆ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಪೋಷಕ ಬಂಧುಗಳಿಗೆ ಹೃದಯ ತುಂಬಿದ ಅಭಿನಂದನೆಗಳು.

## ಹೃದಯ ತುಂಬಿದ ಅಭಿನಂದನೆಗಳು

**2+ Lakhs**

**OYMS REGISTRATION**

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರ ಸಂಸ್ಥೆಯ ಸೂಚನೆಯಂತೆ ನಮ್ಮ ಕರ್ನಾಟಕ ರಾಜ್ಯದ OYMS ನೊಂದಣಿ ಸಂಖ್ಯೆ 2 ಲಕ್ಷ ತಲುಪಿದ್ದು. ಈ ಸಾಧನೆಗೆ ಸಹಕರಿಸಿದ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ, ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರುಗಳಿಗೆ, ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳಿಗೆ, ಜಿಲ್ಲಾ ಸಂಘಟಕರುಗಳಿಗೆ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳಿಗೆ, ದಳನಾಯಕರುಗಳಿಗೆ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಪೋಷಕ ಬಂಧುಗಳಿಗೆ ಹೃದಯ ತುಂಬಿದ ಅಭಿನಂದನೆಗಳು.

# ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಗೈಡ್ ಆಯುಕ್ತರುಗಳು, ಕಾರ್ಯದರ್ಶಿಗಳು, ಜಿಲ್ಲಾ ತರಬೇತಿ ಆಯುಕ್ತರುಗಳು ಹಾಗೂ ಎಲ್.ಟಿ, ಎ.ಎಲ್.ಟಿಗಳ ಸಮಾವೇಶ



ರಾಜ್ಯ ಮತ್ತು ಜಿಲ್ಲಾ ಸಂಸ್ಥೆ, ದಾವಣಗೆರೆ ಇವರ ಸಹಯೋಗದೊಂದಿಗೆ ಮಾರ್ಚ್ 10 ರಂದು ರೋಟರಿ ಬಾಲ ಭವನ, ಪಿ.ಜೆ. ಬಡಾವಣೆ, ದಾವಣಗೆರೆ ಇಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ರಾಜ್ಯ ಮಟ್ಟದ ಗೈಡ್ ಆಯುಕ್ತರುಗಳು, ಕಾರ್ಯದರ್ಶಿಗಳು, ಜಿಲ್ಲಾ ತರಬೇತಿ ಆಯುಕ್ತರುಗಳು ಹಾಗೂ ಎಲ್.ಟಿ, ಎ.ಎಲ್.ಟಿಗಳ ಸಮಾವೇಶವನ್ನು ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿತ್ತು.

ಬೆಳಗ್ಗೆ 10.30ಕ್ಕೆ ಉದ್ಘಾಟನಾ ಸಮಾರಂಭವು ನೆರವೇರಿತು. ಶ್ರೀಮತಿ ಜಸ್ಟಿನ್ ಡಿಸೋಜಾ, ಉಪಾಧ್ಯಕ್ಷರು, ಜಿಲ್ಲಾ ಸಂಸ್ಥೆ, ದಾವಣಗೆರೆ ಇವರು ದೀಪ ಬೆಳಗಿಸಿ ಸಮಾವೇಶವನ್ನು ಉದ್ಘಾಟಿಸಿದರು. ಮಹಿಳೆಯರ ಜವಾಬ್ದಾರಿಗಳು, ಕರ್ತವ್ಯಗಳು, ಸ್ವ–ಅಭಿವೃದ್ಧಿಗೊಳಿಸುವುದು, ಕ್ರಿಯಾತ್ಮಕ ಹಾಗೂ ರಚನಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸಲು ತೊಡಗಿಸಿಕೊಳ್ಳುವಿಕೆ ಅತೀ ಅವಶ್ಯ. ಸ್ಕೌಟಿಂಗ್ ಮತ್ತು ಗೈಡಿಂಗ್ ಇಂತಹ ಕೌಶಲ್ಯಗಳನ್ನು ಬೆಳೆಸುತ್ತದೆ. ಆದ್ದರಿಂದ ಇಲ್ಲಿ ನೆರೆದಿರುವ ಗೈಡ್ ಆಯುಕ್ತರುಗಳು ಉತ್ಸಾಹದಿಂದ ಮುನ್ನುಗ್ಗಿ ಕೆಲಸ ಮಾಡಬೇಕೆಂದು ಮಾತನಾಡಿ ಮಹಿಳೆಯರನ್ನು ಪ್ರೋತ್ಸಾಹಿಸಿದರು.

ಈ ಸಂದರ್ಭದಲ್ಲಿ ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ಮಾತನಾಡಿ ಮಹಿಳೆಯ ಪಾತ್ರ ಮನೆಗೆ ಮತ್ತು ಸಮಾಜಕ್ಕೆ ಅತೀ ಅಗತ್ಯ. ಅದೇ ರೀತಿ ಗೈಡಿಂಗ್ ಅಭಿವೃದ್ಧಿಗೆ ಗೈಡ್ ಆಯುಕ್ತರ ಜವಾಬ್ದಾರಿಯ ಬಗ್ಗೆ ತಿಳಿಸಿ ಅಭಿನಂದಿಸಿ ಶುಭವನ್ನು ಹಾರೈಸಿದರು.

ಇದೇ ಸಂದರ್ಭದಲ್ಲಿ ಶ್ರೀಮತಿ ಜಸ್ಟಿನ್ ಡಿಸೋಜಾ ಹಾಗೂ ಶ್ರೀಮತಿ ಸುರೇಖಾ ಎಂ. ಚಿಗಟೇರಿ ಇವರುಗಳನ್ನು ಗೌರವಿಸಿ ಅಭಿನಂದಿಸಲಾಯಿತು. ಶ್ರೀಮತಿ ಶಾರದಾ ಮಾಗನಹಳ್ಳಿ, ಜಿಲ್ಲಾ ಗೈಡ್ ಆಯುಕ್ತರು, ದಾವಣಗೆರೆ ಇವರು ಸರ್ವರನ್ನು ಸ್ವಾಗತಿಸಿ, ಮಹಿಳಾ ದಿನಾಚರಣೆ ಶುಭಾಶಯಗಳನ್ನು ಕೋರಿದರು. ಶ್ರೀಮತಿ ಶಶಿಕಲಾ, ಎಲ್.ಟಿ (ಗೈ) ಇವರು ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿದರು.

ಶ್ರೀಮತಿ ಗೀತಾನಟರಾಜ್, ರಾಜ್ಯ ಆಯುಕ್ತರು (ಗೈ) ಇವರು ಅಧ್ಯಕ್ಷೀಯ ನುಡಿಗಳಲ್ಲಿ 'ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಗೌರವ ಸ್ಥಾನ ಇದ್ದು, ಮಹಿಳೆಯರು ಸಾಧಕಿಯರು, ಕಲಾವಿದರು, ಸಂಶೋಧಕರಾಗಿ ಸೇರಿದಂತೆ ಸರ್ವಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಜಯಗಳಿಸಿ ಕೀರ್ತಿ ಪತಾಕೆಯನ್ನು ಹಾರಿಸುವಲ್ಲಿ ಮುಂದಾಗಿದ್ದಾರೆ' ಎಂದರು.

ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು(ವ.ಸಂ) ಇವರು ಅತಿಥಿಯಾಗಿ ಮಾತನಾಡುತ್ತಾ, "'ಸೇರ್ಪಡೆಗೆ ಪ್ರೇರಣೆ" ಎಂಬ ಧ್ಯೇಯ ವಾಕ್ಯದ ಬಗ್ಗೆ ಮಾತನಾಡಿ ಸ್ಕೌಟ್/ ಗೈಡ್‌ನಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಅವಕಾಶಗಳಿದ್ದು, ಯುವತಿಯರು ಪಾಲ್ಗೊಳ್ಳಬೇಕು, ನಾವು ಅಂತಹವರಿಗೆ ಪ್ರೇರಣೆ, ಪ್ರೋತ್ಸಾಹ ತುಂಬಬೇಕು' ಎಂದು ತಿಳಿಸಿದರು.

ನಂತರ ಸಮಾವೇಶದ ಎರಡನೇ ಅವಧಿಯಲ್ಲಿ ಶ್ರೀಮತಿ ಮುಕ್ತಾ ಕಾಗಲಿ, ಕೇಂದ್ರ ಕಛೇರಿ ಆಯುಕ್ತರು, ಪ್ರೇರಣೆ ನೀಡುವ ಅಂಶಗಳಾದ Selt-Support, Discipline, Commitment, Involvement, Self-Development ಇತ್ಯಾದಿ ಅಂಶಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಕಥೆಗಳು ಮತ್ತು ಪ್ರಾತ್ಯಕ್ಷಿಕೆಯ ಮೂಲಕ ಉಪನ್ಯಾಸವನ್ನು ನೀಡಿದರು.



ಶ್ರೀಮತಿ ರಾಧಾ ವೆಂಕಟೇಶ್, ಸಹಾಯಕ ರಾಜ್ಯ ಆಯುಕ್ತರು (ಗೈ) ಇವರು ಗೈಡ್ ಆಯುಕ್ತರುಗಳಿಗೆ ಒ.ವೈ.ಎಂ.ಎಸ್ ಕುರಿತು ಮಾಹಿತಿ ನೀಡಿದರು. ಪ್ರೇರಣಾ ಕಾರ್ಯಕ್ರಮಗಳು, ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಣ್ಣು ಮಕ್ಕಳ ಸ್ಪರ್ಧೆ, ವಿವಿಧ ಕಾರ್ಯಕ್ರಮ ಮತ್ತು ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ಶ್ರೀಮತಿ ಮಂಜುಳ .ಸಿ, ರಾಜ್ಯ ಸಂಘಟನಾ ಆಯುಕ್ತರು (ಗೈ) ಇವರು ಗೈಡ್ ಆಯುಕ್ತರುಗಳ ಜವಾಬ್ದಾರಿ ಮತ್ತು ಕರ್ತವ್ಯಗಳು ಹಾಗೂ ಅವುಗಳ ನಿರ್ವಹಣೆಯ ಬಗ್ಗೆ ತಿಳಿಸಿ ಅವರುಗಳ **Job Profile** ಅನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಬಗ್ಗೆ ಹೇಗೆ ಮತ್ತು ಏಕೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡಿದರು. ಶ್ರೀಮತಿ ಶಾಮಲ ಕೆ.ವಿ, ರಾಜ್ಯ ತರಬೇತಿ ಆಯುಕ್ತರು (ಗೈ) ಇವರು ತರಬೇತಿ ಮತ್ತು ಅದರಿಂದಾಗುವ ಉಪಯೋಗಗಳು ಹೇಗೆ ಮತ್ತು ಏಕೆ ಬಗ್ಗೆ ಮಾಹಿತಿಯನ್ನು ನೀಡಿದರು.

ನಂತರದ ಅವಧಿಯಲ್ಲಿ ಶ್ರೀಮತಿ ಗುರಮ್ಮ ಸಿದ್ಧಾರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀಮತಿ ಶಶಿಕಲಾ, ಎಲ್.ಟಿ(ಗೈ), ಶ್ರೀಮತಿ ಶಾಂತಾಯಾವಗಲ್, ಶ್ರೀಮತಿ ಅಮೃತಮ್ಮ, ಎ.ಎಲ್.ಟಿ (ಗೈ), ಶ್ರೀಮತಿ ಸರಸ್ವತಮ್ಮ, ಹೆಚ್.ಡಬ್ಲ್ಯೂ.ಬಿ (ಕಬ್), ಶ್ರೀಮತಿ ಸಂಧ್ಯಾರಾಣಿ, ಎಲ್.ಟಿ (ಕಬ್), ಶ್ರೀಮತಿ ಸಾವಿತ್ರಿ ಮನೋಹರ್, ಎ.ಎಲ್.ಟಿ (ಗೈ), ಶ್ರೀಮತಿ ರತ್ನ .ಎಂ, ಎಲ್.ಟಿ (ಗೈ), ಶ್ರೀಮತಿ ವಿಕ್ಟೋರಿಯಾ ಅಮಲರಾಣಿ, ಎ.ಎಲ್.ಟಿ (ಗೈ), ಶ್ರೀಮತಿ ಹೇಮಲತಾ, ಎ.ಎಲ್.ಟಿ (ಸ್ಕೌ), ಶ್ರೀಮತಿ ಜಯಶ್ರೀ ಜೋಷಿ, ಎಲ್.ಟಿ (ಬುಲ್‌ಬುಲ್), ಡಾ॥ ಶಭಾನಾ, ಎಲ್.ಟಿ (ಗೈ), ಶ್ರೀಮತಿ ಅಕ್ಕಮ್ಮ, ಎ.ಎಲ್.ಟಿ (ಗೈ), ಶ್ರೀಮತಿ ಪ್ರಮೀಳಾ ಪಾಟೀಲ್, ಹೆಚ್.ಡಬ್ಲ್ಯೂ.ಬಿ (ಗೈ), ಶ್ರೀಮತಿ ಪುಷ್ಪ ವಿಜಯನ್, ಎ.ಎಲ್.ಟಿ (ಬುಲ್‌ಬುಲ್), ಶ್ರೀಮತಿ ಜಯಶೀಲ, ಎ.ಎಲ್.ಟಿ (ಗೈ), ಶ್ರೀಮತಿ ರೇಣುಕ.ಎ, ಪ್ರೀ–ಎ.ಎಲ್.ಟಿ, ಶ್ರೀಮತಿ ರತ್ನವ್ವ ಎಸ್. ಹನಗಂಡಿ, ಶ್ರೀಮತಿ ಚೇತನ ಪಾಟೀಲ್, ಶ್ರೀಮತಿ ವಾಮನ, ಎ.ಎಲ್.ಟಿ (ಕಬ್), ಶ್ರೀಮತಿ ಅನ್ನಪೂರ್ಣ ಕುರಬೆಟ್, ಪ್ರೀ–ಎ.ಎಲ್.ಟಿ (ರೇಂಜರ್), ಶ್ರೀಮತಿ ಲತಾ ಬಿ.ವಿ., ಶ್ರೀಮತಿ ಮಂಜುಳ .ಸಿ, ಎಲ್.ಟಿ(ಗೈ), ಶ್ರೀಮತಿ ಶಾಮಲ ಕೆ.ವಿ, ಎಲ್.ಟಿ (ಗೈ), ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎಲ್.ಟಿ (ಗೈ), ಶ್ರೀಮತಿ ಸುಮನ್ ಶೇಖರ್, ಎ.ಎಲ್.ಟಿ (ಗೈ), ಶ್ರೀಮತಿ ದಮಯಂತಿ, ಡಿ.ಒ, ಶ್ರೀಮತಿ ಅಶ್ವಿನಿ .ಜೆ, ಎಸ್.ಜಿ.ವಿ ಮತ್ತು ಶ್ರೀಮತಿ ಸುಖವಾಣಿ, ಜಂಟಿ ಕಾರ್ಯದರ್ಶಿ ಇವರುಗಳನ್ನು ಅಭಿನಂದಿಸಿ ಗೌರವಿಸಲಾಯಿತು.

ಸಮಾವೇಶದಲ್ಲಿ 26 ಜಿಲ್ಲೆಗಳಿಂದ 114 ಗೈಡ್ ಆಯುಕ್ತರುಗಳು, ಕಾರ್ಯದರ್ಶಿಗಳು, ಜಿಲ್ಲಾ ತರಬೇತಿ ಆಯುಕ್ತರುಗಳು ಮತ್ತು ಎಲ್.ಟಿ, ಎ.ಎಲ್.ಟಿಗಳು, 20 ಜನರು ಕುಟುಂಬದ ಸದಸ್ಯರುಗಳು, 14 ರೋವರ್ಸ್ ಮತ್ತು ರೇಂಜರ್ಸ್, ಜಿಲ್ಲಾ ಕಛೇರಿ ಮತ್ತು ಇತರರು ಸೇರಿ ಒಟ್ಟು 160 ಜನರು ಭಾಗವಹಿಸಿದ್ದರು. ಕೊನೆಯಲ್ಲಿ ಶ್ರೀಮತಿ ಶಾಂತಾ ಯಾವಗಲ್, ಉಪಾಧ್ಯಕ್ಷರು, ಜಿಲ್ಲಾ ಸಂಸ್ಥೆ, ದಾವಣಗೆರೆ ಇವರು ಸರ್ವರಿಗೂ ವಂದನೆಗಳನ್ನು ಸಲ್ಲಿಸಿದರು.








# National Level Advocacy Workshop

The National Level Advocacy Workshop on SDGs for Rovers Rangers and Young Leaders was held at Dr. Annie Besant Training & Camping Center, Doddaballapur,, Karnataka from February 28 to March 03 with 71 Participants from 10 States.

The Workshop was Inagurented by Sri P.G.R. Sindhia, State Chief Commissioner of Karnataka and The Secretary General of PIC, BS&G in the presence of the Smt. Geetha Nataraj, Vice-President and State Commissioner(G), Smt. B.V. Ramalatha, State Commissioner Guides (Adult Resources), Sri Madhusudan Avala, Additional International Commissioner (S) NHQ, New Delhi and Sri Krishnaswamy .R, Former Executive Director of NHQ in the evening on February 28th. Sri Analendra Sharma, Asst. Director, NHQ was the Leader of this Camp.

This workshop showcased how the Members of the Bharat Scouts and Guides provide assistance to the SDGs via Innovative Ideas, Projects, and Solutions Combining Academic Knowledge and Resources. Subjects Like (i) Explain the various ways to Achieve the Sustainable Goals; (ii) List out the Role of the Young Members to Achieve the SDGs; (iii) Promote Innovative Activities to address Sustainability, (iv) Provide Learning Opportunity by BSG to contribute to Achieve the SDGs were dealt with.

Apart from the Facilitators Shri Mukund Raj, Project Head, Karnataka SDGCC informed the participants about the Government Role at various levels.

Resource Persons from UNICEF - Ms Mary Jones, Social Behaviour Change Consultant, UNICEF and Mr Manoj Sebastian, SBC Consultant, UNICEF Conduated Sessions in the Workshop. Dr. Shalini Rajneesh, IAS, Additional Chief Secretary cum Development Commissioner, Govt. of Karnataka spoke to the Participants Virtually Online.

Each evening participants came with Innovative Ideas to reflect the Sessions of the day in the Campfire. Valedictory function was graced by Sri. P.G.R. Sindhia, State Chief Commissioner of Karnataka State and the Secretary General of PIC, BSG; Shri M.A. Khalid, Add. Chief National Commissioner, BSG; Sri Madhusudan Avala, AIC(S) & WOSM Consultant; Shri Jitesh Arun Sheth, Dy. National Commissioner (R) BSG and other Distinguished Guests. Sri Sindhia appealed to all of them to da a Good Turn each Day to Achieve the SDGs at Personal Levels.




All Faith Prayer, Open Session, Closing Ceremony were conducted in the Morning and the Workshop Came to end on 03rd March 2024.

# ಗೈಡ್ ಆಯುಕ್ತರುಗಳ ರಾಷ್ಟ್ರ ಮಟ್ಟದ ಸಮಾವೇಶ



ಮಾರ್ಚ್ 14 ರಿಂದ 18ರವರೆಗೆ ವಿಶ್ವಕೇಂದ್ರ, ಸಂಗಮ್, ಪುಣೆ, ಮಹಾರಾಷ್ಟ್ರ (ವಿಶ್ವದ ಐದು ವಿಶ್ವಕೇಂದ್ರಗಳಲ್ಲಿ ಸಂಗಮ್ ಒಂದು ಕೇಂದ್ರ) ಇಲ್ಲಿ ಗೈಡ್ ಆಯುಕ್ತರುಗಳ ರಾಷ್ಟ್ರ ಮಟ್ಟದ ಸಮಾವೇಶವನ್ನು ರಾಷ್ಟ್ರಸಂಸ್ಥೆಯವರು ಆಯೋಜಿಸಿದ್ದರು.

ಸಮಾವೇಶದಲ್ಲಿ ಕರ್ನಾಟಕದಿಂದ ರಾಜ್ಯ ಗೈಡ್ ಆಯುಕ್ತರು ಹಾಗೂ ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ), ಸಹಾಯಕ ರಾಜ್ಯ ಆಯುಕ್ತರು (ಗೈಡ್ಸ್), ಜಿಲ್ಲಾ ಗೈಡ್ ಆಯುಕ್ತರು ಮತ್ತು ಎಲ್.ಟಿ., ಎಎಲ್‌ಟಿ.ಗಳು ಒಟ್ಟು 8 ಜನರು ಸಕ್ರಿಯವಾಗಿ ಭಾಗವಹಿಸಿ ಸಮಾವೇಶದ ಸದುಪಯೋಗವನ್ನು ಪಡೆದಿದ್ದಾರೆ. ರಾಷ್ಟ್ರದ 11 ರಾಜ್ಯಗಳಿಂದ 56 ಗೈಡ್ ಆಯುಕ್ತರುಗಳು ಮತ್ತು ತರಬೇತುದಾರರು ಭಾಗವಹಿಸಿದ್ದರು. ಸಮಾವೇಶದಲ್ಲಿ ಬಹಳ ಮುಖ್ಯವಾಗಿ ಗೈಡ್ ಆಯುಕ್ತರುಗಳು ನಿರ್ವಹಿಸಬೇಕಾದ ಕರ್ತವ್ಯಗಳು, ಅವರ ಜವಾಬ್ದಾರಿಗಳು, ರಾಷ್ಟ್ರ ಸಂಸ್ಥೆಯ ವಿಷನ್ ಮತ್ತು ಮಿಷನ್, ಹೆಣ್ಣು ಮಕ್ಕಳ ಅವಶ್ಯಕತೆಗಳು, ಹದಿಹರೆಯದವರಿಗೆ ಕಾರ್ಯಕ್ರಮ ಮತ್ತು ಚಟುವಟಿಕೆಗಳು, ಅಂತಾರಾಷ್ಟ್ರೀಯ ಕಾರ್ಯಕ್ರಮಗಳು, ಫ್ರೆಂಡ್‌ಷಿಪ್ ಕೊಲಾಬ್ರೇಷನ್, ವ್ಯಾಗ್ಸ್, ಸಮುದಾಯ ಸೇವೆ, ಮಹಿಳಾ ಸಾಮರ್ಥ್ಯ, ನಾಯಕತ್ವದ ಸವಾಲುಗಳು ಇವುಗಳ ಬಗ್ಗೆ ಶ್ರೀಮತಿ ದರ್ಶನಾ ಪಾವಸ್ಕರ್, ರಾಷ್ಟ್ರ ಸಂಸ್ಥೆ ಜಂಟಿ ನಿರ್ದೇಶಕರು ಇವರ ನೇತೃತ್ವದಲ್ಲಿ ಗುಂಪು ಚರ್ಚೆ, ಸಂವಾದ, ಉಪನ್ಯಾಸಗಳ ಮೂಲಕ ವಿಷಯಗಳನ್ನು ಮಂಡಿಸಲಾಯಿತು.

ಸಂಗಮ್ ತರಬೇತಿ ಕೇಂದ್ರದ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗದವರು ಹಿಂದಿನಿಂದಲೂ ನಡೆಸಿಕೊಂಡು ಬಂದಿರುವ ಸಂಪ್ರದಾಯದಂತೆ ಭಾಗವಹಿಸಿರುವ ಅಭ್ಯರ್ಥಿಗಳನ್ನು ವಿಶೇಷವಾಗಿ ದೀಪೋಜ್ವಲನದ ಮೂಲಕ ಎಲ್ಲರಿಗೂ ಹಾರವನ್ನು ಹಾಕಿ, ಆರತಿ ಬೆಳಗಿ ಸಿಹಿಯನ್ನು ಹಂಚಿ ಸುಸ್ವಾಗತವನ್ನು ಕೋರಿ "ವಿಶ್ವಗೀತೆ" (ವರ್ಲ್ಡ್ ಸಾಂಗ್) ಹಾಡಲಾಯಿತು.

ಕರ್ನಾಟಕ ತಂಡದವರು ಅತ್ಯಂತ ಚಟುವಟಿಕೆಯಿಂದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ನಮ್ಮ ರಾಜ್ಯದ 2023-24ರ ವರದಿಯ ಪಿಪಿಟಿ, ನಮ್ಮ ಎಲ್ಲಾ ಸಾಧನೆಯ ವಿಷಯಗಳಾದ ಯುವ ಕಾರ್ಯಕ್ರಮ, ವಯಸ್ಕ ತರಬೇತಿ, ಗಣತಿ, ನಿಯೋಜನೆ, ಸಾರ್ವಜನಿಕ ಸಂಪರ್ಕ, ಆಡಳಿತಕ್ರಮ ಇತ್ಯಾದಿ ಸಾಧನೆಗಳನ್ನು ವಿವರಿಸಿದರು. ರಾಷ್ಟ್ರಮಟ್ಟದಲ್ಲಿ ರಾಜ್ಯ ಸಂಸ್ಥೆಯು 14 ಪ್ರಶಸ್ತಿಗಳು ಮತ್ತು ಸ್ಥಾನಗಳನ್ನು ಪಡೆದಿರುವ ಬಗ್ಗೆ ತಿಳಿಸಲಾಯಿತು. ಕರ್ನಾಟಕ ರಾಜ್ಯದ ಸಾಧನೆ ಮತ್ತು ವ್ಯವಸ್ಥೆಗಳನ್ನು ಎಲ್ಲರೂ ಅಭಿನಂದಿಸಿದರು. ಇದಕ್ಕೆ ಕಾರಣೀಕರ್ತರಾದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ಹಾಗೂ ರಾಜ್ಯ ಪದಾಧಿಕಾರಿಗಳು ನೀಡಿದ ಮಾರ್ಗದರ್ಶನ ಮತ್ತು ಸಹಕಾರವನ್ನು ರಾಷ್ಟ್ರ ಸಂಸ್ಥೆಯ ಪದಾಧಿಕಾರಿಗಳು, ಅಭ್ಯರ್ಥಿಗಳು ಪ್ರಶಂಶಿಸಿದರು.

ಸಮಾವೇಶದಲ್ಲಿ ಕರ್ನಾಟಕದ ಕಲೆ, ಸಂಸ್ಕೃತಿ, ಸಾಹಿತ್ಯ, ಪದಾಧಿಕಾರಿಗಳು, ಆಹಾರ ಪದ್ಧತಿ, ಬೆಳೆಗಳು, ಸಂಪ್ರದಾಯ, ಆಚಾರ-ವಿಚಾರಗಳನ್ನು ಹಾಗೂ ಕರ್ನಾಟಕದ ಕೋಲಾಟವನ್ನು ನೃತ್ಯದ ಮೂಲಕ ಪ್ರದರ್ಶಿಸಲಾಯಿತು.

ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್) ಇವರ ನಾಯಕತ್ವದಲ್ಲಿ ಶ್ರೀಮತಿ ರಾಮಲತಾ .ಬಿ.ವಿ., ಶ್ರೀಮತಿ ರಾಧಾ ವೆಂಕಟೇಶ್, ಶ್ರೀಮತಿ ಜ್ಯೋತಿ ಹೆಚ್.ಕೆ., ಶ್ರೀಮತಿ ಸುಮನ ಎಸ್.ವಿ., ಶ್ರೀಮತಿ ಮೈಥಲಿ ರಾವ್, ಶ್ರೀಮತಿ ಶಾರದಾ ಮಾಗನಹಳ್ಳಿ, ಶ್ರೀಮತಿ ಮಂಜುಳ ಸಿ., ಇವರು ಭಾಗವಹಿಸಿದರು.

## ರಾಜ್ಯ ಮಟ್ಟದ ಬ್ಯೂಟಿಷಿಯನ್ ತರಬೇತಿ ಶಿಬಿರ

ಮಾರ್ಚ್ 4 ರಿಂದ 7 ರವರೆಗೆ ರಾಜ್ಯ ಮಟ್ಟದ ಬ್ಯೂಟಿಷಿಯನ್ ತರಬೇತಿ ಶಿಬಿರವನ್ನು ಕೋಲಾರ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಗಿತ್ತು. ಈ ಶಿಬಿರವನ್ನು ರಾಜ್ಯ ತರಬೇತಿ ಆಯುಕ್ತೆಯಾದ ಶ್ರೀಮತಿ ಕೆ.ವಿ. ಶ್ಯಾಮಲ ರವರು ಉದ್ಘಾಟಿಸಿ ಮಾತನಾಡುತ್ತಾ, "ರಾಜ್ಯ ಮಟ್ಟದ ಶಿಬಿರಗಳು ಯುವ ಜನರಿಗೆ ತುಂಬಾ ಪ್ರಯೋಜನಕ್ಕೆ ಬರುತ್ತಿದ್ದು, ಇಲ್ಲಿ ಕಲಿತ ಅಂಶಗಳನ್ನು ತಮ್ಮ ಜೀವನಲ್ಲಿ ಅಳವಡಿಸಿಕೊಳ್ಳಬೇಕು" ಎಂದು ತಿಳಿಸಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಮಾತನಾಡಿ "ಸ್ಕೌಟ್ಸ್–ಗೈಡ್ಸ್ ಶಿಕ್ಷಣ ಜೀವನ ಕೌಶಲಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಯುವಕರು ಇಂತಹ ಶಿಬಿರಗಳಲ್ಲಿ ಭಾಗವಹಿಸುವ ಮೂಲಕ ಸ್ವಯಂ ಉದ್ಯೋಗಿಗಳಾಗಿ ತಾವು ನಾಲ್ಕು ಜನರಿಗೆ ಉದ್ಯೋಗ ನೀಡುವ ಮಟ್ಟಿಗೆ ಬೆಳೆಯಬೇಕು" ಎಂದು ತಿಳಿಸಿದರು. ಜಿಲ್ಲಾ ಉಪಾಧ್ಯಕ್ಷೆಯಾದ ಶ್ರೀಮತಿ ಕುರ್ಕಿ ರಾಜೇಶ್ವರಿರವರು ಮಾತನಾಡಿ "ಸಂಸ್ಥೆಯ ಆಶಯಗಳನ್ನು ವಿದ್ಯಾರ್ಥಿಗಳು ಅರಿತು ತಮ್ಮ ಸ್ನೇಹಿತರ ಬಳಿ ಶಿಬಿರಗಳ ಅನುಭವಗಳನ್ನು ಹಂಚಿಕೊಂಡು ಮತ್ತಷ್ಟು ಯುವ ಜನತೆ ಆಕರ್ಷಿತರಾಗಬೇಕು" ಎಂದು ತಿಳಿಸಿದರು. ಶಿಬಿರದ ನಾಯಕಿಯಾಗಿ ಡಾ॥ ಕೆ.ಆರ್. ಮಂಜುಳ, ಸೇವೆ ಸಲ್ಲಿಸಿದರು. ಶಿಬಿರಲ್ಲಿ 61 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಹಾಗೂ ಸ್ಕೌಟರ್ಸ್–ಗೈಡರ್ಸ್‌ಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



## ರಾಜ್ಯಮಟ್ಟದ ಜಲ ಸಾಹಸ, ವಿಪತ್ತು ನಿರ್ವಹಣೆ ಹಾಗೂ ಪ್ರಕೃತಿ ಅಧ್ಯಯನ ಶಿಬಿರ

ಮಾರ್ಚ್ 25 ರಿಂದ 28ರ ವರೆಗೆ ರಾಜ್ಯಮಟ್ಟದ ಜಲ ಸಾಹಸ, ವಿಪತ್ತು ನಿರ್ವಹಣೆ ಹಾಗೂ ಪ್ರಕೃತಿ ಅಧ್ಯಯನ ಶಿಬಿರವು ಭುವನೇಂದ್ರ ಪ್ರಥಮ ದರ್ಜೆ ಕಾಲೇಜು, ಕಾರ್ಕಳ, ಉಡುಪಿ ಜಿಲ್ಲೆ ಇಲ್ಲಿ 4 ದಿನಗಳ ಕಾಲ ನಡೆಯಿತು.

ಈ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ॥ ಮಂಜುನಾಥ್ ಕೋಟ್ಯಾನ್ ಅವರ ಅಧ್ಯಕ್ಷತೆಯಲ್ಲಿ ರಾಜ್ಯ ಮುಖ್ಯ ಆಯುಕ್ತರದ ಶ್ರೀ ಪಿ.ಜಿ.ಆರ್ ಸಿಂಧ್ಯ ಇವರು ಭಾಗವಹಿಸಿ ರೋವರ್ಸ್–ರೇಂಜರ್ಸ್‌ಗಳ ಜವಾಬ್ದಾರಿಯ ಬಗ್ಗೆ ಈ ಶಿಬಿರದ ಪ್ರಾಮುಖ್ಯತೆಯ ಬಗ್ಗೆ ಹಾಗೂ ಶ್ರೀ ಭುವನೇಂದ್ರ ಕಾಲೇಜಿನ ಕೊಡುಗೆಯ ಬಗ್ಗೆ ತಿಳಿಸಿ ಎಲ್ಲರಿಗೂ ಶುಭ ಕೋರಿದರು. ವೇದಿಕೆಯಲ್ಲಿ ಶಿಬಿರದ ನಾಯಕರಾದ ಡಾ॥ ಈಶ್ವರ್ ಭಟ್, ಶಿಬಿರ ನಾಯಕಿ ಶ್ರೀಮತಿ ಸ್ವಾತಿ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಪ್ರಭಾಕರ್ ಭಟ್, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಜ್ಯೋತಿ ಜೆ.ಪೈ, ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಬಿ. ಅಡಿಗ, ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾಗಿರುವ ಶ್ರೀ ಜಗದೀಶ್ ಹೆಗ್ಡೆ, ಸ್ಥಳೀಯ ಸಂಸ್ಥೆ ಉಪಾಧ್ಯಕ್ಷರಾಗಿರುವ ಶ್ರೀಮತಿ ಸಾವಿತ್ರಿ ಮನೋಹರ್, ಆರ್.ಎಸ್.ಎಲ್ ಆಗಿರುವ ಶ್ರೀ ಪ್ರತಿಮ್ ಕುಮಾರ ಹಾಗೂ ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾಗಿರುವ ಶ್ರೀಮತಿ ಸುಮನ್ ಶೇಖರ್ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ 25 ಜಿಲ್ಲೆಗಳಿಂದ 198 ರೋವರ್ಸ್–ರೇಂಜರ್ಸ್ ಹಾಗೂ ಈ ಕಾರ್ಯಕ್ರಮದ ಸಂಯೋಜಕರಾಗಿರುವ ಶ್ರೀ ವೀತೇಶ್ ಕಾಂಚನ್, ಆರ್.ಎಸ್.ಎಲ್, ಶ್ರೀ ಶರತ್ ರಾಜ್, ಆರ್.ಎಸ್.ಎಲ್, ಶ್ರೀಮತಿ ಆರ್.ಎಲ್ ರಮ್ಯ ಪ್ರಥಮ ದರ್ಜೆ ಕಾಲೇಜು ಅಜ್ಜರಕಾಡು, ಶ್ರೀದೇವಿ ಆರ್.ಎಲ್, ಸೀನಿಯರ್ ರೋವರ್ಸ್–ರೇಂಜರ್ಸ್ ಇವರೆಲ್ಲರ ಸಹಕಾರದಿಂದ ಬಹಳ ಯಶಸ್ವಿಯಾಗಿ ನಡೆಯಿತು.






## ಅಭಿನಂದನೆಗಳು



### ಎ.ಎನ್. ಮಹೇಶ್

ಜಿಲ್ಲಾ ಸ್ಕೌಟ್ ಆಯುಕ್ತರು, ಚಿಕ್ಕಮಗಳೂರು ಜಿಲ್ಲಾ ಸಂಸ್ಥೆ
ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಚಿಕ್ಕಮಗಳೂರು ಜಿಲ್ಲೆ
ಇವರು ಇತ್ತೀಚೆಗೆ ಕರ್ನಾಟಕ ರಾಜ್ಯ ಮಟ್ಟದ ಪರಿಸರ ತಜ್ಞರ ಮೌಲ್ಯ ಮಾಪನ ಸಮಿತಿಯ ಅಧ್ಯಕ್ಷರಾಗಿ
ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಕಗೊಂಡಿರುವುದಕ್ಕಾಗಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

## ಅಭಿನಂದನೆಗಳು



### ಸ್ಕೌಟ್ ಬಾಲಕನ ಸಮಯ ಪ್ರಜ್ಞೆ

ರಾತ್ರಿಯ ವೇಳೆಯಲ್ಲಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ತಾತನನ್ನು ಕರೆಯಲು ಹೋದ ಚಿಕ್ಕಮಗಳೂರು ನಗರದ ಮಾಡೆಲ್ ಪಬ್ಲಿಕ್ ಶಾಲೆಯ 12 ವರ್ಷದ ಚಿ॥ ಧ್ರುವ ಕಾಫಿ ತೋಟದೊಳಗೆ ನುಗ್ಗಿದಾಗ ಏನೋ ಕಡಿದಂತಾಯಿತು. ತಿರುಗಿ ನಿಂತು ಟಾರ್ಚ್ ಬೆಳಕಿನಲ್ಲಿ ನೋಡಿದಾಗ ಗಿಡದ ಮೇಲಿದ್ದುದು ಕಟ್ಟು ಹಾವು (ಕ್ರೈಟ್). ಸ್ಕೌಟ್ಸ್ ತರಗತಿಯಲ್ಲಿ ಕೇಳಿದ್ದ ಪ್ರಥಮ ಚಿಕಿತ್ಸೆ ಜ್ಞಾಪಕಕ್ಕೆ ಬಂದು ಹಾವು ಹಚ್ಚಿದ ಕೈ ಗಾಯದ ಮೇಲ್ಭಾಗದಲ್ಲಿ ಗಟ್ಟಿಯಾಗಿ ಒಂದು ದಾರ ಕಟ್ಟಿ (ಟೂರ್ನಿಕೆ) ಕೂಡಲೇ ಪೋಷಕರೊಂದಿಗೆ ನಗರದ ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದು ಈಗ ಸುಧಾರಿಸಿಕೊಳ್ಳುತ್ತಿದ್ದಾನೆ. ಸ್ಕೌಟ್ಸ್ ತರಗತಿಗಳಲ್ಲಿ ಕಲಿತ ಈ ಜ್ಞಾನದ ಉಪಯೋಗವನ್ನು ಪೋಷಕರು ತುಂಬು ಹೃದಯದಿಂದ ಶ್ಲಾಘಿಸಿದ್ದಾರೆ. ಹೊರಾಂಗಣದಲ್ಲಿ ಬದುಕಿನಲ್ಲಿ ದಿನನಿತ್ಯ ಎದುರಿಸಬಹುದಾದ ಸಮಸ್ಯೆ ಮತ್ತು ವಿಪತ್ತುಗಳನ್ನು ಎದುರಿಸಲು ಹಾಗೂ ಮತ್ತೊಬ್ಬರಿಗೆ ಸಹಾಯ ಮಾಡಲು ಸಜ್ಜಾಗಿಸುವ ವಿಷಯಗಳಾದ ಪ್ರಥಮ ಚಿಕಿತ್ಸೆ, ದಿನಕ್ಕೊಂದು ಒಳ್ಳೆಯ ಕೆಲಸ, ಜಾಡು ಹಿಡಿಯುವುದು, ದೇಶಪ್ರೇಮ, ಅಪರಿಚಿತ ಪ್ರದೇಶದಲ್ಲಿ ದಾರಿ ತಪ್ಪುವುದು ಇಂತಹ ವಿದ್ಯೆಗಳು ಬಾಲಕರನ್ನು ಸೇವೆಗೆ ಪ್ರೇರೇಪಿಸುತ್ತದೆ. ಪ್ರತಿ ತರಗತಿ ಹಾಗೂ ಪ್ರತಿ ಶಾಲೆಯಲ್ಲಿ ಧ್ರುವನಂತಹ ವಿದ್ಯಾರ್ಥಿಗಳು ಇತರರಿಗೆ ಮಾರ್ಗದರ್ಶಿಯಾಗಿ ಬದುಕಲು ಸ್ಕೌಟ್ಸ್ ತರಗತಿಗಳು ಪ್ರೇರಕ ಶಕ್ತಿಗಳಾಗುತ್ತವೆ.


ಮನೆಯಿಂದಲೇ ನೀರಿನ ಸಂರಕ್ಷಣೆಯನ್ನು ಪ್ರಾರಂಭಿಸೋಣ
Let's start Water Conservation from Home
ಹಲ್ಲುಜ್ಜಲು ಮಗ್ಗಿನಲ್ಲಿ ನೀರು ಬಳಸುತ್ತೇನೆ
Use mug for brushing teeth
ಅಗತ್ಯಕ್ಕೆ ತಕ್ಕಂತೆ ಫ್ಲಶ್ ಅನ್ನು ಮಿತವಾಗಿ ಬಳಸುತ್ತೇನೆ
Use reduced flush for liquid waste
ಸ್ನಾನ ಮಾಡಲು ಬಕೆಟ್ಟನ್ನು ಬಳಸುತ್ತೇನೆ
Use bucket for bathing
ಗಿಡಗಳಿಗೆ ನೀರು ಹಾಕಲು ಬಕೆಟ್ ಉಪಯೋಗಿಸುತ್ತೇನೆ
watering plants with bucket
ಸೋರುವ ನಲ್ಲಿ ಮತ್ತು ಕೊಳವೆಯನ್ನು ತಕ್ಷಣವೇ ಸರಿ ಪಡಿಸುತ್ತೇನೆ
Repair leakage taps & pipes immediately
ಹಣ್ಣು ತರಕಾರಿ ತೊಳೆದ ನೀರನ್ನು ಗಿಡಗಳಿಗೆ ಹಾಕುತ್ತೇನೆ
Use vegetables and fruits washed water for plants
ವಾಷಿಂಗ್ ಮಷೀನ್‌ಗೆ ಭರ್ತಿ ಲೋಡ್ ಮಾಡಿ ಉಪಯೋಗಿಸುತ್ತೇನೆ
Use the washing machine with full load only
ಓವರ್ ಹೆಡ್ ಟ್ಯಾಂಕ್‌ಗೆ ಲೆವೆಲ್ ಕಂಟ್ರೋಲರ್ ಅಳವಡಿಸಿ - ನೀರು ವ್ಯರ್ಥವಾಗುವುದನ್ನು ತಪ್ಪಿಸಿ
Fix level controller to overhead tank - Avoid wastage of water
ಮಳೆ ನೀರು ಕೊಯ್ಲನ್ನು ಅಳವಡಿಸಿಕೊಂಡಿದ್ದೇನೆ
Adopted rainwater harvesting
ಕಾರು ತೊಳೆಯಲು ಬಕೆಟ್ ಉಪಯೋಗಿಸುತ್ತೇನೆ
Wash Car using a Bucket



# ಜಿಲ್ಲಾ ವಾರ್ತೆಗಳು

## ಬೆಳಗಾವಿ

* ಫೆಬ್ರವರಿ 22 ರಂದು ಸ್ಥಳೀಯ ಸಂಸ್ಥೆ ರಾಮದುರ್ಗ ವತಿಯಿಂದ ಲಾರ್ಡಬೆಡನ್ ಪೋವೆಲ್‌ರವರ 167ನೇ ಜನ್ಮದಿನಾಚರಣೆ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಮೇಳವನ್ನು ರಾಮದುರ್ಗ ತಾಲೂಕಿನ ಕಟಕೋಳ ಗ್ರಾಮದ ಕೆ.ಪಿ.ಎಸ್. ಸರಕಾರಿ ಪ್ರೌಢ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಶ್ರೀ ಗಜಾನನ ಮನ್ನಿಕೇರಿ ಉಪಾಧ್ಯಕ್ಷರು ಮತ್ತು ಜಿಲ್ಲಾ ಮುಖ್ಯ ಆಯುಕ್ತರು, ಬೆಳಗಾವಿ ಇವರು ಹಾಗೂ ಗ್ರಾಮ ಪಂಚಾಯತಿ ಆಧ್ಯಕ್ಷರಾದ ಶ್ರೀಮತಿ ಮಂಜುಳಾ ಪಾಟೋಳ್ಳಿರವರು ಚಾಲನೆ ನೀಡಿದರು. ಸರಕಾರಿ ಪ್ರೌಢ ಶಾಲೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸದರಿ ಕಾರ್ಯಕ್ರಮವನ್ನು ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರು ಉದ್ಘಾಟಿಸಿ "ಮಕ್ಕಳಲ್ಲಿ ಶಿಸ್ತು ಸೇವೆ ಸಹೋದರತ್ವ ಹಾಗೂ ವಿವಿಧ ಕೌಶಲ್ಯಗಳನ್ನು ಬೆಳೆಸಲು ಸ್ಕೌಟ್-ಗೈಡ್ಸ್ ಸಹಕಾರಿಯಾಗಿದೆ ಎಂದು ತಿಳಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ರಾಮದುರ್ಗ ತಾಲೂಕಿನ ಪ್ರತಿಯೊಂದು ಶಾಲೆಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳನ್ನು ತೆರೆಯಲು ಸಹಕರಿಸಲು ಕೋರಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಳೀಯ ಪ್ರೌಢಶಾಲೆ ಮುಖ್ಯೋಪಾಧ್ಯಾಯರಾದ ಶ್ರೀ ಬಿ.ಬಿ. ಹಿರೇನಿಂಗಪ್ಪನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಸ್.ಎಚ್. ಪ್ರಭಾಕರ್, ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಪಾಟೋಳಿ, ಶಿಕ್ಷಣ ಸಂಯೋಜಕರಾದ ಶ್ರೀಕಾಂತ್ ಕರಿಲಿಂಗಣ್ಣವರ್, ದೈಹಿಕ ಶಿಕ್ಷಣಾಧಿಕಾರಿಗಳಾದ ಶ್ರೀ ಎಲ್.ಆರ್. ಕನಕಪ್ಪನವರ್ ನೇತಾಜಿ ಪ್ರೌಢಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯರಾದ ಶ್ರೀ ಪಿ.ಡಿ. ಕಾಲವಾಡ, ಶ್ರೀ ವಿಠ್ಠಲ್ ಎಸ್.ಬಿ., ಎ.ಎಸ್.ಓ.ಸಿ. ಬೆಳಗಾವಿ ಇವರುಗಳು ಆಗಮಿಸಿ ಮಕ್ಕಳಿಗೆ ಮಾರ್ಗದರ್ಶನ ನೀಡಿದರು. ಇದೇ ಸಂದರ್ಭದಲ್ಲಿ ಕಳೆದ ವರ್ಷ ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ ಉತ್ತೀರ್ಣರಾದಂತಹ ಮಕ್ಕಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ತಾಲೂಕಿನಾದ್ಯಂತ ವಿವಿಧ ಶಾಲೆಯ ಸುಮಾರು 400 ಮಕ್ಕಳು ಹಾಗೂ ಶಿಕ್ಷಕರುಗಳು ಭಾಗವಹಿಸಿದ್ದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಎಂ.ಎನ್. ಗವನ್ನವರ ಸ್ವಾಗತಿಸಿದರು ಶ್ರೀ ವಿ.ಕೆ. ಬನ್ನೂರ್ ವಂದಿಸಿದರು.



* ಫೆಬ್ರವರಿ 22 ರಂದು ಚಿಕ್ಕೋಡಿಯ ಡಯಟ್ ಸಭಾ ಭವನದಲ್ಲಿ ಲಾರ್ಡಬೆಡನ್ ಪೋವೆಲ್‌ರವರ 167ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಸದರಿ ಕಾರ್ಯಕ್ರಮದ ಅಂಗವಾಗಿ ಸ್ಕೌಟ್ ಮತ್ತು ಗೈಡ್‌ಗಳ ಪಥಸಂಚಲನಕ್ಕೆ ಡಯಟ್ ಪ್ರಾಂಶುಪಾಲರಾದ ಶ್ರೀ ಎಂ.ಪಿ. ಜೀರಗಿಹಾಳ, ಚಿಕ್ಕೋಡಿಯ ಜಿಲ್ಲಾ ಪರಿಸರ ಅಧಿಕಾರಿಗಳಾದ ಶ್ರೀ ರಮೇಶ ವಿ. ಡ್ರಂ ನುಡಿಸುವ ಮೂಲಕ ಚಾಲನೆ ನೀಡಿದರು. ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಬಿ.ಎ. ಮೇಕನಮರಡಿ, ಜಿಲ್ಲಾ ಪರಿಸರ ಅಧಿಕಾರಿಗಳಾದ ಶ್ರೀ ರಮೇಶ ವಿ. ಸಸಿಗೆ ನೀರುಹಾಕುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀಮತಿ ಜಂಬಗಿ, ಪ್ರಧಾನ ಗುರುಮಾತೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿಕ್ಕೋಡಿ, ಉರ್ದು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ದೇವರು ಉಪಸ್ಥಿತರಿದ್ದರು. ರಾಜ್ಯ ಪುರಸ್ಕಾರ ಪ್ರಶಸ್ತಿ ವಿಜೇತ ಮಕ್ಕಳಿಗೆ ಗೌರವಿಸಲಾಯಿತು. 350 ಸ್ಕೌಟ್ ಮತ್ತು ಗೈಡ್‌ಗಳು ಶಿಕ್ಷಕರುಗಳು ಭಾಗವಹಿಸಿದ್ದರು.




## ಬೆಂಗಳೂರು ದಕ್ಷಿಣ

* ಫೆಬ್ರವರಿ 27 ರಂದು ಅರಮನೆ ಮೈದಾನ ಬೆಂಗಳೂರಿನಲ್ಲಿ ಆಯೋಜಿಸಿದ ರಾಜ್ಯ ಮಟ್ಟದ ಸರ್ಕಾರಿ ನೌಕರರ ಸಮಾವೇಶದಲ್ಲಿ ಜಿಲ್ಲೆಯ ರೋವರ್ಸ್-ರೇಂಜರ್ಸ್‌ಗಳು ಸೇವೆಯನ್ನು ಸಲ್ಲಿಸಿದರು.



* ಮಾರ್ಚ್ 09 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಕೆ.ಆರ್.ಪುರಂ ಸ್ಥಳೀಯ ಸಂಸ್ಥೆಯ ವತಿಯಿಂದ ಮಹಿಳಾ ದಿನಾಚರಣೆಯನ್ನು ಶ್ರೀ ಕೃಷ್ಣ ಸಭಾಂಗಣದಲ್ಲಿ ಆಯೋಜನೆ ಮಾಡಲಾಯಿತು. ಶ್ರೀಮತಿ ಕಸ್ತೂರಿ ಜಾನಕಿರಾಂ ಬರಹಗಾರರು ಮತ್ತು ಶ್ರೀಮತಿ ಏಸಲ್ ಬೆಸೆಟಿಕ್ ಸಹಾಯಕ ಕಾರ್ಯದರ್ಶಿಗಳು ಹಲಸೂರು ಸ್ಥಳೀಯ ಸಂಸ್ಥೆ ಇವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಡಾ॥ ಮಾನಸ ಹೆಬ್ಬಾರ್, ಶ್ರೀ ವಿ. ವೆಂಕಟೇಶ್, ಜಿಲ್ಲಾ ಸಹಾಯಕ ಆಯುಕ್ತರು, ಡಾ॥ ನಾಗೇಶ್, ಜಿಲ್ಲಾ ಸಹಾಯಕ ಆಯುಕ್ತರು, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಮತ್ತು ಗೈಡರ್‌ಗಳು ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಸ್ಕೌಟಿಂಗ್–ಗೈಡಿಂಗ್‌ನಲ್ಲಿ ಸೇವೆಯನ್ನು ಸಲ್ಲಿಸಿದ ಮಹಿಳಾ ದಳ ನಾಯಕರುಗಳಿಗೆ ಸನ್ಮಾನವನ್ನು ಮಾಡಲಾಯಿತು.





## ಬೆಂಗಳೂರು ಉತ್ತರ

* ಆರ್.ಆರ್. ನಗರ ಸ್ಥಳೀಯ ಸಂಸ್ಥೆ ವತಿಯಿಂದ ಸ್ಕೌಟ್ಸ್–ಗೈಡ್ಸ್‌ಗಳಿಗೆ ಚಾರಣ ಮತ್ತು ಸ್ವಚ್ಛತೆ ಶಿಬಿರವನ್ನು ನಂದಿಬೆಟ್ಟದಲ್ಲಿ ಅಯೋಜಿಸಲಾಯಿತು. ಚಾರಣ ಶಿಬಿರಕ್ಕೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪ್ರಸನ್ನ ಕುಮಾರ್ ಇವರು ಚಾಲನೆ ನೀಡಿದರು. ನಂದಿಬೆಟ್ಟದಲ್ಲಿ  ಸ್ವಚ್ಛತೆ ಮಾಡಲಾಯಿತು. ಶಿಬಿರದಲ್ಲಿ ಜಿಲ್ಲಾ ಜಂಟಿ ಕಾರ್ಯದರ್ಶಿ  ಶ್ರೀ ಗಣಪತಿ ಇವರು ಚಾರಣ ಹಾಗೂ ನಂದಿಬೆಟ್ಟದ ಬಗ್ಗೆ ಮಾಹಿತಿ ನೀಡಿದರು. ಸ್ಥಳೀಯ ಸಂಸ್ಥೆಯ ಸ್ಕೌಟರ್–ಗೈಡರ್ ಭಾಗವಹಿಸಿದರು.



* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್ಸ್–ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ ಫೆಬ್ರವರಿ 29 ರಂದು ಗಂಟಿಗಾನಹಳ್ಳಿಯಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಚಗೊಳಿಸಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ 28 ರೋವರ್ಸ್–ರೇಂಜರ್ಸ್ ಭಾಗವಹಿಸಿದ್ದರು.



* ಬೆಂಗಳೂರು ಉತ್ತರ ಜಿಲ್ಲೆಯ ಯಲಹಂಕ ಸ್ಥಳೀಯ ಸಂಸ್ಥೆ ಸಿಲ್ವರ್ ಸ್ಪ್ರಿಂಗ್ ಇಂಟರ್ ನ್ಯಾಶನಲ್ ಚಿಕ್ಕಬಾಣಾವರ ಶಾಲೆಯ ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್‌ಗಳಿಗೆ ವಾರ್ಷಿಕ ಶಿಬಿರವನ್ನು ರಾಜ್ಯ ತರಬೇತಿ ಕೇಂದ್ರ ದೊಡ್ಡಬಳ್ಳಾಪುರದಲ್ಲಿ ಫೆಬ್ರವರಿ 22 ರಿಂದ 24ರವರೆಗೆ ನಡೆಸಲಾಯಿತು. ಹತ್ತಿರ ಇರುವ ಅಕ್ಕಯ್ಯಮ್ಮನ ಬೆಟ್ಟಕ್ಕೆ ಹೊರ ಸಂಚಾರ ಮಾಡಲಾಯಿತು. ಶಿಬಿರದಲ್ಲಿ ಸ್ಕೌಟ್ಸ್–ಮಾಸ್ಟರ್ ಶ್ರೀ ಧನಂಜಯ, ಗೈಡ್ಸ್–ಕ್ಯಾಪ್ಟನ್ ಶ್ರೀಮತಿ ಮೀನ ಲೇಡಿಕಬ್, ಸ್ಟರ್ ಶ್ರೀಮತಿ ರೇಖಾ ಎಸ್., ಫ್ಲಾಕ್ ಲೀಡರ್ ಶ್ರೀಮತಿ ಸುಮ ಶಿಬಿರದಲ್ಲಿ ಭಾಗವಹಿಸಿದ್ದರು. ಶಾಲಾ ಪ್ರಾಂಶುಪಾಲರು ಶ್ರೀಮತಿ ಸುರೇಖಹೆಗ್ಡೆ ಇವರುಭವ್ಯ ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಇಂತಹ ಶಿಬಿರವು ನಗರ ಪ್ರದೇಶದ ಮಕ್ಕಳಿಗೆ ಅತಿ ಅಗತ್ಯ ಎಂದು ತಿಳಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಶ್ರೀ ಪಿ.ಬಿ. ಗಣೇಶ್ ಇವರು ಸ್ಕೌಟಿಂಗ್ ಚಟುವಟಿಕೆಯ ಎಲ್ಲಾ ರೀತಿಯ ಪ್ರೋತ್ಸಾಹ ನೀಡುತ್ತಿದ್ದು ಹಾಗೂ ಈ ಶಿಬಿರ ಸಂಘಟಿಸಲು ಅನುಮತಿ ಹಾಗೂ ಪೂರ್ಣ ಸಹಕಾರ ನೀಡಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜೆ. ಅರೀಪ್ ಅಹಮದ್ ಹಾಗೂ ಸಂಸ್ಥಾಕರಾದ ಶ್ರೀಮತಿ ಡಾ. ನೀಲಮ್ ಅಹಮದ್ ಶಿಬಿರಕ್ಕೆ ಶುಭ ಹಾರೈಸಿದರು. ಶಿಬಿರದಲ್ಲಿ ಕಬ್– ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್ ಸುಮಾರು 100 ವಿದ್ಯಾಥಿಗಳು ಭಾಗವಹಿಸಿದರು.



* ಡೆಲ್ಲಿ ಪಬ್ಲಿಕ್ ಸ್ಕೂಲ್ ಬೆಂಗಳೂರು ಉತ್ತರ ಜಿಲ್ಲೆಯ ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್ ಹೊರಾಂಗಣ ಚಟುವಟಿಕೆ ಸಲುವಾಗಿ ಸಿದ್ಧಗಂಗಾಮಠಕ್ಕೆ ಫೆಬ್ರವರಿ 27 ರಂದು ಭೇಟಿ ನೀಡಿದರು. ಶಾಲಾ ಪ್ರಾಂಶುಪಾಲರು ಶ್ರೀಮತಿ ರೀನು ದಿಮಾರಿ ಇವರು ಶಿಬಿರಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು. ಸ್ಕೌಟ್ ಮಾಸ್ಟರ್



ಶ್ರೀಮತಿ ದಿವ್ಯ, ಗೈಡ್ ಕ್ಯಾಪ್ಟನ್ ಶ್ರೀಮತಿ ಭವ್ಯ ಲೇಡಿ ಕಬ್ ಮಾಸ್ಟರ್ ಶ್ರೀಮತಿ ಚೈತ್ರ, ಶ್ರೀಮತಿ ಜ್ಯೋತಿ ಫ್ಲಾಕ್ ಲೀಡರ್ ಇವರು ಶಿಬಿರವನ್ನು ಸಂಘಟಿಸಿದರು.

*** The Shivajinagar Local Association celebrated Founders Day & Thinking Day on 22nd February 2024 at The Association of Physically Disabilities School, Lingarajpuram Cross, Hutchnison Road, Bangalore. The activities started with All Faiths Prayer. The Chief Guest of the function was Smt. Pannaga, Principal. Prayer was conducted by Krupa Vijai LT(G) and Local Secretary and Smt. Revathy B., LT(B). The total number of participants were 120 Cubs, Bulbuls, Scouts and Guides along with units leaders. Then Route March was inaugurated by Chief Guest. Friendship Game was conducted by the office bearers.**



## ಬೆಂಗಳೂರು ಪೂರ್ವ

* ಫೆಬ್ರವರಿ 22 ರಂದು ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆಯ ಆಶ್ರಯದಲ್ಲಿ ಆನೇಕಲ್ ನಗರದಲ್ಲಿ ಜಿಲ್ಲಾ ಮಟ್ಟದ ಸ್ಕೌಟ್-ಗೈಡ್ ಮೇಳ ಹಾಗೂ ಸಂಸ್ಥಾಪಕರ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಮೇಳದಲ್ಲಿ ಸಾವಿರಕ್ಕೂ ಹೆಚ್ಚು ಸ್ಕೌಟ್ಸ್-ಗೈಡ್ಸ್, ಕಬ್ಸ್-ಬುಲ್‌ಬುಲ್ಸ್, ರೋವರ್ಸ್-ರೇಂಜರ್ಸ್ ಹಾಗೂ ಸ್ಕೌಟರ್-ಗೈಡರ್‌ಗಳು ಭಾಗವಹಿಸಿದ್ದರು. ಪ್ರಾರಂಭದಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿ ಪಥಸಂಚಲನ ನಡೆಸಲಾಯಿತು. ನಂತರ ಶ್ರೀ ರಾಮಕುಟೀರದಲ್ಲಿ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಜೆ.ಎಂ. ಜಯಲಕ್ಷ್ಮಿರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ರಾಜ್ಯ ಆಯುಕ್ತರು (ವ. ಸಂ) ಹಾಗೂ ಜಿಲ್ಲಾ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಚಿನ್ನಸ್ವಾಮಿರೆಡ್ಡಿರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಜಿಲ್ಲಾ ಅಗ್ನಿಶಾಮಕಾಧಿಕಾರಿ ಶ್ರೀ ಪಿ.ಎಂ. ನಾಗೇಶ್‌ರವರು ಮಾತನಾಡಿ ಅಗ್ನಿ ಆಕಸ್ಮಿಕ



ದುರಂತಗಳು ಹಾಗೂ ಅವನ್ನು ಉಪಶಮನಗೊಳಿಸುವ ಪ್ರಕ್ರಿಯೆ ಹಾಗೂ ವಿಧಾನಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಹಾಗೂ ಪ್ರಾತ್ಯಕ್ಷಿಕೆಯನ್ನು ನಡಿಸಿಕೊಟ್ಟರು. ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಡೆದ ರಾಜ್ಯ ಮಟ್ಟದ ದೇಶಭಕ್ತಿ ಗೀತೆಗಳ ಗಾಯನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಹುಸ್ಕೂರಿನ ಸರ್ಕಾರಿ ಪ್ರೌಢ ಶಾಲೆಯ ಗೈಡ್ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ನಂತರ ಸರ್ಕಾರಿ ಹೊಸ ಮಾಧ್ಯಮಿಕ ಪಾಠ ಶಾಲೆಯ ಆಟದ ಮೈದಾನದಲ್ಲಿ ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಜಿಲ್ಲಾ ಆಯುಕ್ತೆ (ಗೈಡ್ಸ್) ಶ್ರೀಮತಿ ಭಾಗ್ಯ ಶ್ರೀನಿವಾಸ್, ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್ ಮೊದಲಾದವರು ಉಪಸ್ಥಿತರಿದ್ದರು.



* ಫೆಬ್ರವರಿ 16 ರಿಂದ 17ರ ವರೆಗೆ ಕಮ್ಮಸಂದ್ರದ ರಾಯಲ್ ಪಬ್ಲಿಕ್ ಸ್ಕೂಲ್ ಹಾಗೂ ಬನ್ನೇರುಘಟ್ಟದ ಸ್ಕೂಲ್ ಆಫ್ ಇಂಡಿಯಾ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ತಮಿಳುನಾಡಿನ ಡೆಂಕಣಿಕೋಟೆ ತಾಲ್ಲೂಕಿನ ದೇವರ ಬೆಟ್ಟದಲ್ಲಿ ಎರಡು ದಿನಗಳ ಪರಿಸರ ಅಧ್ಯಯನ ಮತ್ತು ಅರಣ್ಯಚಾರಣ ಶಿಬಿರವನ್ನು ಏರ್ಪಡಿಸಿದ್ದರು. ಸ್ಕೌಟರ್, ಗೈಡರ್‌ಗಳಾದ ಶ್ರೀಮತಿ ಎಸ್. ಹೇಮಲತಾ, ಶ್ರೀಮತಿ ಮೋನಾ ಮೆನೇಜ್, ಶ್ರೀಮತಿ ಶಮಿತಾ ಹರೀಶ್, ಶ್ರೀಮತಿ ಸತ್ಯಾರವರು ಶಿಬಿರದ ನೇತೃತ್ವ ವಹಿಸಿದ್ದರು.

* ಮಾರ್ಚ್ 09 ರಂದು ಸರ್ಜಾಪುರದ ಸೆಂಟ್ ಫಿಲೋಮಿನಾಸ್ ಶಾಲೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ಧನಲಕ್ಷ್ಮೀರವರ ನೇತೃತ್ವದಲ್ಲಿ ಈ ಶಾಲೆಯ ಸುಮಾರು 100 ಬನ್ನೀಸ್‌ಗಳು ಹತ್ತಿರದ ಹಂದೇನಹಳ್ಳಿ ಗ್ರಾಮದ ಗ್ರಾಮ ಪಂಚಾಯಿತಿ, ಸರ್ಕಾರಿ ಆಸ್ಪತ್ರೆ ಹಾಗೂ ಪೋಸ್ಟ್ ಆಫಿಸ್‌ಗಳಿಗೆ ಭೇಟಿ ನೀಡಿ ಅಲ್ಲಿನ ವೀಕ್ಷಣೆಯ ಜೊತೆಗೆ ಕಚೇರಿಗಳ ಕಾರ್ಯವೈಖರಿಗಳ ಬಗ್ಗೆ ಮಾಹಿತಿ ತಿಳಿದುಕೊಂಡರು. ರಾಜ್ಯ ಆಯುಕ್ತರು (ವ. ಸಂ.) ಶ್ರೀ ಚಿನ್ನಸ್ವಾಮಿರೆಡ್ಡಿ ಹಾಗೂ ಇತರೆ ಅಧಿಕಾರಿಗಳು ಭಾಗವಹಿಸಿದ್ದರು.

## ಚಿಕ್ಕಮಗಳೂರು

* ಫೆಬ್ರವರಿ 22 ರಂದು ನಡೆದ ತಾಲ್ಲೂಕು ಮಟ್ಟದ ಬಿ.ಪಿ.ಡೇ ಅನ್ನು ಸ್ಥಳೀಯ ಸಂಸ್ಥೆ ಚಿಕ್ಕಮಗಳೂರು. ಇಲ್ಲಿ ಆಚರಿಸಲಾಯಿತು. ಚಿಕ್ಕಮಗಳೂರು ತಾಲ್ಲೂಕು ಆಫೀಸಿನಿಂದ ಜಿಲ್ಲಾ ಆಟದ ಮೈದಾನ ಚಿಕ್ಕಮಗಳೂರು ಇಲ್ಲಿಯವರೆಗೆ ಜಾಥವನ್ನು ಹಮ್ಮಿಕೊಂಡಿದ್ದು ತಾಲ್ಲೂಕು ಸಂಸ್ಥೆಯ ಅಧ್ಯಕ್ಷರಾದ ಶ್ರೀ ನಂದಕಕುಮಾರ್‌ರವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು.




* ಫೆಬ್ರವರಿ 22 ರಂದು ಸರ್ಕಾರಿ ಪ್ರೌಢಶಾಲೆ ಸೋಮನಹಳ್ಳಿಯ ಕಡೂರು ತಾಲ್ಲೂಕಿನಲ್ಲಿ ಬಿ.ಪಿ. ಡೇ ಆಚರಿಸಲಾಯಿತು. ತಾಲ್ಲೂಕು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶರತ್ ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.




* ಫೆಬ್ರವರಿ 22 ರಂದು ಸ್ವಾಮಿ ವಿವೇಕಾನಂದ ಸ್ಕೌಟ್ ಮತ್ತು ಗೈಡ್ ಘಟಕ ತರಿಕೆರೆ, ಶ್ರೀ ಸಾಯಿ ಇಂಟರ್ ನ್ಯಾಷನಲ್ ಶಾಲೆ ತರಿಕೆರೆ ಇವರ ಸಹಯೋಗದಲ್ಲಿ ಸಂಸ್ಥಾಪಕರ ದಿನವನ್ನು ಆಚರಿಸಲಾಯಿತು. ಇದರ ಅಂಗವಾಗಿ ಜಾಥ ನಡೆಸಲಾಯಿತು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಹಾಗೂ ಶಾಲೆ ಕಾರ್ಯದರ್ಶಿಗಳು ಆದಂತಹ ಶ್ರೀಯುತ ಶಶಾಂಕ್ ಟಿ.ಜಿ., ಅವರು ಅಧ್ಯಕ್ಷತೆ ವಹಿಸಿ ಸ್ಕೌಟ್-ಗೈಡ್ ಮಹತ್ವವನ್ನು ತಿಳಿಸಿದರು. ಶಾಲೆಯ ಪ್ರಾಂಶುಪಾಲರಾದ ಶ್ರೀಯುತ ಪ್ರಶಾಂತ್ ಪಾಟೀಲ್ ಎಂ.ಪಿ., ಮುಖ್ಯ ಅತಿಥಿಗಳಾಗಿ ಆಗಮಿಸಿದ್ದು, ಶಾಲೆಯ ದೈಹಿಕ ಶಿಕ್ಷಕರಾದ ಶ್ರೀಯುತ ತೇಜಸ್ವಿ ಕುಮಾರ್ .ಎಂ., ಸ್ಕೌಟ್ ಶಿಕ್ಷಕರಾದ ಶ್ರೀಯುತ ವಸಂತ ಕುಮಾರ್ ಬಿ.ಎಸ್., ಕಾರ್ಯಕ್ರಮದಲ್ಲಿ



ಭಾಗವಹಿಸಿದ್ದರು. ಗೈಡ್ ವಿದ್ಯಾರ್ಥಿಗಳಾದ ಕು॥ ನಿಕಿತಾ ಹಾಗೂ ಕು॥ ಹರ್ಷಿಣಿ ಕಾರ್ಯಕ್ರಮ ನೆರವೇರಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಅತಿಥಿಗಳನ್ನು ಸುನಿಧಿ ಎಸ್. ಆಚಾರ್ ಎಲ್ಲರನ್ನು ಸ್ವಾಗತಿಸಿದರು. ಶ್ರೀಮತಿ ಹೇಮಾ ಬಿ.ಪಿ.ಯು ನಾಯಕ್ ಬೇಡನ್ ಪೊವೆಲ್ ಅವರು ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಸುಮಾರು 85 ಸ್ಕೌಟ್, ಗೈಡ್ ವಿದ್ಯಾರ್ಥಿಗಳಿದ್ದರು ಕು॥ ಪೂರ್ವಿಕ ವಂದನಾರ್ಪಣೆ ಮಾಡಿದರು.

* ಫೆಬ್ರವರಿ 22 ರಂದು ಮೂಡಿಗೆರೆ ತಾಲ್ಲೂಕಿನಲ್ಲಿ ವಿಶ್ವ ಚಿಂತನಾ ದಿನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಒಂದು ಕಾರ್ಯಕ್ರಮದಲ್ಲಿ ಗೌರವಾಧ್ಯಕ್ಷರಾದ ಶ್ರೀಯುತ ಮಗ್ಗಲ ಮಕ್ಕಿ ಗಣೇಶ್ ಜೆ.ಸಿ.ಐ. ಅಧ್ಯಕ್ಷರಾದ ಶ್ರೀಯುತ ಸುಪ್ರೀತ್ ಉಪಸ್ಥಿತರಿದ್ದರು.

* ಫೆಬ್ರವರಿ 22 ರಂದು ಕೊಪ್ಪದ ಪುರಭವನದಲ್ಲಿ ಬೇಡೆನ್ ಪೋವೆಲ್‌ರವರ ಜನ್ಮದಿನಾಚರಣೆ, ತಾಲ್ಲೂಕು ಸ್ಕೌಟ್ಸ್-ಗೈಡ್ಸ್ ರ‍್ಯಾಲಿ ಮತ್ತು ಕಬ್-ಬುಲ್‌ಬುಲ್ ಉತ್ಸವವು ನೆರವೇರಿತು. ಆ ದಿನ ಬೆಳಿಗ್ಗೆ 9.30ಕ್ಕೆ ಸರ್ವಧರ್ಮ ಪ್ರಾರ್ಥನೆ ಕಾರ್ಯಕ್ರಮವು ಗೈಡ್ ಕ್ಯಾಪ್ಟನ್‌ಗಳಾದ ಶ್ರೀಮತಿ ಮೋಕ್ಷಮೇರಿ ಎಸ್. ಹಾಗೂ ಶ್ರೀಮತಿ ಸವಿತಾರವರ ನೇತೃತ್ವದಲ್ಲಿ ನೆರವೇರಿತು. ತದನಂತರ ಬೇಡನ್ ಪೋವೆಲ್ ದಂಪತಿಗಳ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಲಾಯಿತು.



10.45ಕ್ಕೆ ಸರಿಯಾಗಿ ನಗರ ಮೆರವಣಿಗೆ ಪ್ರಾರಂಭವಾಯಿತು. ಎ.ಎಸ್.ಐ. ಶ್ರೀ ಶಾಂತಪ್ಪ ಕೊಪ್ಪ ಪೋಲಿಸ್ ಅಧಿಕಾರಿರವರು ನಗರದ ಮೆರವಣಿಗೆಗೆ ಚಾಲನೆ ನೀಡಿದರು. ಕೊಪ್ಪದ ಖ್ಯಾತ ಮೂಳೆ ತಜ್ಞರಾದ ಡಾ. ಉದಯ ಶಂಕರ್‌ರವರು ಎಲ್ಲಾ ಮಕ್ಕಳಿಗೆ ತಂಪು ಪಾನೀಯ ಹಾಗೂ ಬಿಸ್ಕೆಟ್ ನೀಡಿದರು. ಶ್ರೀ ಹರಿಹರಪುರ ಮಠದಿಂದ ಭೋಜನ ವ್ಯವಸ್ಥೆಯನ್ನು ಮಾಡಲಾಯಿತು. ಬಿ.ಆರ್.ಸಿ.ಯ ತರಬೇತಿ ಸಿಬ್ಬಂದಿ ಹಾಗೂ ಅಕ್ಷರ ದಾಸೋಹ ತಾಲ್ಲೂಕು ನಿರ್ದೇಶಕರಾದ ಶ್ರೀ ಅಂಜನಪ್ಪರವರು, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಚೆಲುವಾದಿ, ಸಿ.ಆರ್.ಪಿ. ಶ್ರೀ ರುದ್ರಸ್ವಾಮಿ, ಬಿ.ಆರ್.ಪಿ. ಶ್ರೀ ರಾಮಚಂದ್ರ, ಶ್ರೀ ಮಂಜುನಾಥ್ ರವರು ಆಗಮಿಸಿದ್ದರು. ಸುಮಾರು 4.45ಕ್ಕೆ ಸಮಾರೋಪ ಸಮಾರಂಭ ಕಾರ್ಯಕ್ರಮವು ಸ್ಕೌಟ್ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಕಾರ್ಯದರ್ಶಿ ಶ್ರೀ ಕಾಂತಕುಮಾರ್‌ರವರು ಸರ್ವರನ್ನು ಸ್ವಾಗತಿಸಿದರು. ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀಮತಿ ಸುಮಿತ್ರಾ ನಾರಾಯಣ್,



ತಾಲ್ಲೂಕು ನಿರ್ದೇಶಕರಾದ ಶ್ರೀ ಅಂಜನಪ್ಪ, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಚೆಲುವಾದಿ, ಸಿ.ಆರ್.ಪಿ ಶ್ರೀ ರುದ್ರಸ್ವಾಮಿ, ಬಿ.ಆರ್.ಪಿ. ಶ್ರೀ ರಾಮಚಂದ್ರ, ಶಿಕ್ಷಣ ಸಂಯೋಜಕರಾದ ಶ್ರೀ ಸುಚಿತ್ ಚಂದ್ರ ಹಾಗೂ ಸನ್ಮಾನಗೊಳ್ಳಲಿರುವ ಸಿಸ್ಟರ್ ಸಿಸಿಲಿಯಾ, ಶ್ರೀ ಜಿ. ಸತೀಶ್ ಕಾಮತ್ ಉಪಸ್ಥಿತರಿದ್ದರು. ಕು॥ ಮಹತಿರಾವ್ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ತದನಂತರ ಸ್ಕೌಟಿಂಗ್‌ನಲ್ಲಿ ಹಲವು ವರ್ಷಗಳ ಕಾಲ ಸೇವೆ ಗೈದ ಶಿಕ್ಷಕರನ್ನು ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರು ಸನ್ಮಾನಿಸಿದರು. ಈ ಸನ್ಮಾನಕ್ಕೆ ಭಾಜನರಾದವರು ಸಿ॥ ಜೆಸ್ಸಿಸೆಂರಾಂ ಗೈಡ್ ಕ್ಯಾಪ್ಟನ್, ಸಿ॥ ಸಿಸಿಲಿಯಾ ಲೊಬೋ ಕಬ್ ಮಾಸ್ಟರ್, ಶ್ರೀ ರೈಮೂದ್ ಕ್ರಾಸ್ತಾ ಸ್ಕೌಟ್ ಮಾಸ್ಟರ್ ಸಿ॥ ಎಲಿಜಬೆತ್ ಡಿಮೆಲ್ಲೊ ಫ್ಲಾಕ್ ಲೀಡರ್. ತದನಂತರ ಕೊರೊನಾ ಕಾಲದಲ್ಲಿ ಸೇವೆ ಗೈದವರನ್ನು ವೇದಿಕೆ ಗಣ್ಯರು ಸನ್ಮಾನಿಸಿದರು. ಈ ಸನ್ಮಾನವನ್ನು ಸ್ವೀಕರಿಸಿದವರು ಶ್ರೀ ಅಂಜನಪ್ಪ ಅಕ್ಷರ ದಾಸೋಹ ತಾಲ್ಲೂಕು ನಿರ್ದೇಶಕರು, ಶ್ರೀ ಪ್ರಕಾಶ್ ಕುಮಾರ್, ಖಜಾಂಚಿ, ಶ್ರೀ ಶ್ರೀಕಂಠ ಹಾಗೂ ರೀ ಅಜಿತ್ (ಸ್ಕೌಟ್ ಮಾಸ್ಟರ್). ತದನಂತರ ಕೊಪ್ಪ ತಾಲ್ಲೂಕಿನಲ್ಲಿ ಇಂದಿಗೂ ಸ್ಕೌಟಿಂಗ್ ಜೀವಂತವಾಗಿರಲು ಮುಖ್ಯ ಕಾರಣಕರ್ತರಾದ ತಾಲ್ಲೂಕಿನ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಕಾಂತಕುಮಾರ್ ಅವರನ್ನು ಸನ್ಮಾನಿಸಲಾಯಿತು. ಸ್ಕೌಟ್ ಮಾಸ್ಟರ್ ಶ್ರೀ ಶ್ರೀಕಂಠರವರು ಎಲ್ಲರನ್ನೂ ವಂದಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಸ್ಕೌಟ್ ಮಾಸ್ಟರ್ ಹಾಗೂ ಖಜಾಂಚಿಯವರಾದ ಶ್ರೀ ಪ್ರಕಾಶ್ ಕುಮಾರ್‌ರವರು ನೆರವೇರಿಸಿದರು. ಆಕರ್ಷಕ ಶಿಬಿರಾಗ್ನಿ ಕಾರ್ಯಕ್ರಮವು ನೆರವೇರಿತು.



## ಚಿಕ್ಕಬಳ್ಳಾಪುರ

* ಮಾರ್ಚ್ 08 ಮತ್ತು 09ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಈಶಾ ಫೌಂಢೇಶನ್‌ನಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ಸೇವಾ ಶಿಬಿರವನ್ನು ಭಾರತ್ ಸ್ಕೌಟ್ಸ್-ಗೈಡ್ಸ್ ಕರ್ನಾಟಕ ವತಿಯಿಂದ ನಡೆಸಲಾಯಿತು. ಬೆಂಗಳೂರು ಉತ್ತರ ಜಿಲ್ಲೆ-140, ಬೆಂಗಳೂರು ದಕ್ಷಿಣ ಜಿಲ್ಲೆ-35 ಕೋಲಾರ-15, ಚಿಕ್ಕಬಳ್ಳಾಪುರ-50, ತುಮಕೂರು-25 ಸುಮಾರು 265 ರೋವರ್-ರೇಂಜರ್ ಸೇವೆ ಸಲ್ಲಿಸಿದರು.



* ಫೆಬ್ರವರಿ 27 ರಂದು ಅರಮನೆ ಮೈದಾನ ಬೆಂಗಳೂರಿನಲ್ಲಿ ಆಯೋಜಿಸಿದ ರಾಜ್ಯ ಮಟ್ಟದ ಸರ್ಕಾರಿ ನೌಕರರ ಸಮಾವೇಶದಲ್ಲಿ ಜಿಲ್ಲೆಯ ರೋವರ್ಸ್-ರೇಂಜರ್ಸ್‌ಗಳು ಸೇವೆಯನ್ನು ಸಲ್ಲಿಸಿದರು.

* ಫೆಬ್ರವರಿ 22 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ಚಿಕ್ಕಬಳ್ಳಾಪುರ ವತಿಯಿಂದ ಸಂಸ್ಥಾಪಕರ ಮತ್ತು ವಿಶ್ವಚಿಂತನಾ ಹಾಗೂ ವಿಶ್ವ ಭ್ರಾತೃತ್ವ ದಿನಾಚರಣೆ ಅಂಗವಾಗಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ನಂದಿ ಚಿಕ್ಕಬಳ್ಳಾಪುರ ಇಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲಾಯಿತು. ಮಾನ್ಯ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು ಡಯಟ್ ಹಾಗೂ ಜಿಲ್ಲಾ ಆಯುಕ್ತರು (ಸ್ಕೌಟ್), ಶ್ರೀ ಮುನಿಕೆಂಪೇಗೌಡ ಎಂ. ಇವರು ಗಿಡಕ್ಕೆ ನೀರು ಹಾಕುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಶ್ರೀ ಲಕ್ಷ್ಮೀ ನಾರಾಯಣ ಗುಪ್ತ, ಶಾಲಾ ಮುಖ್ಯ ಶಿಕ್ಷಕರಾದ ಶ್ರೀಮತಿ ರಾಧ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ನಾರಾಯಣ ಸ್ವಾಮಿ ಹಾಗೂ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* 'ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಾಗತಿಕವಾಗಿ ಬೆಳೆದ ಸಂಸ್ಥೆ, ಇದರ ಸದಸ್ಯರಾಗುವುದೇ ಒಂದು ಪುಣ್ಯದ ಕೆಲಸ, ವಿದ್ಯಾರ್ಥಿ ಜೀವನದಲ್ಲಿ ಪ್ರಮುಖವಾಗಿರುವ ಶಿಸ್ತು, ಸಂಯಮ, ಸೇವಾ ಮನೋಭಾವ, ಶ್ರದ್ಧೆ, ಜೀವನ ಕೌಶಲಗಳನ್ನು ಕಲಿಸುವಲ್ಲಿ ಸ್ಕೌಟ್ಸ್‌ಮತ್ತು ಗೈಡ್ಸ್ ಮಹತ್ತರ ಪಾತ್ರ ವಹಿಸುತ್ತದೆ' ಎಂದು ಜಿಲ್ಲಾ ಕಾರ್ಯದರ್ಶಿ ಶ್ರೀ ಸಿ.ಬಿ. ಪ್ರಕಾಶ್ ಹೇಳಿದರು. ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸಂಸ್ಥಾಪಕರಾದ ಲಾರ್ಡ್ ಬೇಡನ್ ಪೋವೆಲ್‌ರವರ ಜನ್ಮ ದಿನಾಚರಣೆಯ ಅಂಗವಾಗಿ ವಿಶ್ವಭ್ರಾತೃತ್ವ ದಿನಾಚರಣೆ ಮತ್ತು ವಿಶ್ವಚಿಂತನ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಶಾಲೆಯ ಹಿರಿಯ ಶಿಕ್ಷಕಿ ಗೈಡ್ ಕ್ಯಾಪ್ಟನ್ ಶ್ರೀಮತಿ ನಾಗರತ್ನ ರವರು ಮಾತನಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯಿಂದ ವಿದ್ಯಾರ್ಥಿಗಳಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಲು ಸಾಧ್ಯವಿದ್ದು ಎಲ್ಲಾ ವಿದ್ಯಾರ್ಥಿಗಳು ಸ್ಕೌಟ್ಸ್ ಮತ್ತು ಗೈಡ್ಸ್ ನಿಯಮ ಮತ್ತು ಪ್ರತಿಜ್ಞೆಯಂತೆ ನಡೆದುಕೊಳ್ಳಬೇಕೆಂದು ಹೇಳಿದರು. ಮತ್ತೋರ್ವ ಶಿಕ್ಷಕಿ ಶ್ರೀಮತಿ ಲತಾರವರು ವಿದ್ಯಾರ್ಥಿಗಳಿಗೆ ಶುಭಕೋರಿ ಸ್ಕೌಟ್ಸ್ ಮತ್ತು ಗೈಡ್ಸ್ ಮೂಲಕ ವಿದ್ಯಾರ್ಥಿಗಳ ಜೀವನ ಉಜ್ವಲವಾಗಲಿ ಎಂದು ಹಾರೈಸಿದರು. ಕಾರ್ಯಕ್ರಮದ ಅಂಗವಾಗಿ ಶಾಲೆಯ ಆವರಣದ ಸ್ವಚ್ಛತೆ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.




* "ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ಅಳವಡಿಸಿ ಕೊಳ್ಳಬೇಕು ಆಗ ಮಾತ್ರ ಅವರ ಜೀವನ ಉತ್ತಮಗೊಳ್ಳಲು ಸಾಧ್ಯ" ಎಂದು ಇಓ ಶ್ರೀ ಹೊನ್ನಯ್ಯ ತಿಳಿಸಿದರು. ಅವರು ಕೋಟೆ ಹಿರಿಯ ಸರ್ಕಾರಿ ಪಾಠಶಾಲೆ ಆವರಣದಲ್ಲಿ ವಿಶ್ವ ಚಿಂತನ ಹಾಗೂ ವಿಶ್ವ ಭ್ರಾತೃತ್ವ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಬಿಇಓ ಶ್ರೀ ಕೆ.ವಿ. ಶ್ರೀನಿವಾಸಮೂರ್ತಿ ಮಾತನಾಡಿ "ಶಿಕ್ಷಣ

ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಕೌಶಲ್ಯ ಕಲಿಸಲು ಸ್ಕೌಟ್ಸ್ ಸಹಕಾರ ಆಗಿದೆ" ಎಂದರು. ಬಿ.ಎಚ್. ರಸ್ತೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಂದ ಪಥಸಂಚಲನ ಮಾಡಲಾಯಿತು. ಎಸ್‌ಎಸ್‌ಇಎ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸ.ಹಿ.ಪ್ರಾ.ಶಾ, ಕೋಟೆ ಶಾಲೆ ಮಕ್ಕಳು ಸಂಸ್ಥಾಪಕರ ದಿನಾಚರಣೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಬಿಇಓ ಕಚೇರಿ ಸಮನ್ವಯ ಅಧಿಕಾರಿ ಶ್ರೀ ಗಂಗರೆಡ್ಡಿ, ಸ್ಕೌಟ್ಸ್ ಶಿಕ್ಷಕ ಮುಂತಾದವರು ಭಾಗವಹಿಸಿದ್ದರು.

* ಫೆಬ್ರವರಿ 22 ರಂದು ಸ್ಥಳಿಯ ಸಂಸ್ಥೆ ಬಾಗೇಪಲ್ಲಿ ಅರುಣೋಧಯ ಶಾಲೆ ಬಾಗೇಪಲ್ಲಿ ಸಹಯೋಗದಲ್ಲಿ ಸಂಸ್ಥಾಪಕರ ದಿನಾಚರಣೆ ಹಾಗೂ ಚಿಂತನಾ ದಿನಾಚರಣೆ ಅಂಗವಾಗಿ ಜಾಥ ಹಾಗೂ ವಿವಿಧ ಕಾರ್ಯಕ್ರಮಗಳು ಹಾಗೂ ಸ್ಪರ್ಧೆಗಳು ಆಯೋಜಿಸಲಾಗಿತ್ತು. ಶ್ರೀಮತಿ ಉಮಾ, ಮುಖ್ಯ ಶಿಕ್ಷಕರ ನೇತೃತ್ವದಲ್ಲಿ ಕಾರ್ಯಕ್ರಮಗಳು ನಡೆದವು.

* ಫೆಬ್ರವರಿ 22 ರಂದು ಸ್ಥಳೀಯ ಸಂಸ್ಥೆ ಗುಡಿಬಂಡೆ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೋಮೇನಹಳ್ಳಿ ಸಂಯುಕ್ತ ಆಶ್ರಯದಲ್ಲಿ ಸಂಸ್ಥಾಪಕರ ದಿನಾಚರಣೆ ಹಾಗೂ ಚಿಂತನಾ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

* ಫೆಬ್ರವರಿ 22 ರಂದು ಸ್ಥಳೀಯ ಸಂಸ್ಥೆ ಚಿಂತಾಮಣಿ ಹಾಗೂ ಮಹಾತ್ಮ ಗಾಂಧೀ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಚಿಂತಾಮಣಿ ಸಂಯುಕ್ತ ಆಶ್ರಯದಲ್ಲಿ ಸಂಸ್ಥಾಪಕರ ದಿನಾಚರಣೆ ಹಾಗೂ ಚಿಂತನಾ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪದಾಧಿಕಾರಿಗಳು, ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದರು ಹಾಗೂ ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಸಂಸ್ಥಾಪಕರ ದಿನಾಚರಣೆ ಅಂಗವಾಗಿ ವಿಶೇಷ ಕಾರ್ಯಕ್ರಮಗಳು ಆಯೋಜಿಸಲಾಗಿತ್ತು.

## ಚಿತ್ರದುರ್ಗ

* ಜಿಲ್ಲಾ ಸಂಸ್ಥೆ ಚಿತ್ರದುರ್ಗ ವತಿಯಿಂದ ಸಂಸ್ಥಾಪಕರ ದಿನಾಚರಣೆ ಹಾಗೂ ವಿಶ್ವ ಭ್ರಾತೃತ್ವ ದಿನಾಚರಣೆಯನ್ನು ಫೆಬ್ರವರಿ 22 ರಂದು "Our World Our Peaceful Future,The Environment Peace And Security" ಎನ್ನುವ ಧ್ಯೇಯ ವಾಕ್ಯದೊಂದಿಗೆ ಆಚರಿಸಲಾಯಿತು. ಜಿಲ್ಲಾ ಸಂಸ್ಥೆಯಿಂದ ನಗರದ ಪ್ರಮುಖ ಬೀದಿಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ಹಾಗೂ ದಳ ನಾಯಕ/ ನಾಯಕಿಯರನ್ನು ಒಳಗೊಂಡಂತೆ ಲಾರ್ಡ್ ಬೇಡನ್ ಪೊವೆಲ್ ಹಾಗೂ ಲೇಡಿ ಬೇಡನ್ ಪೊವೆಲ್ ಅವರ ಭಾವ ಚಿತ್ರಗಳನ್ನ ಹಿಡಿದು ಜಾಥ ಕಾರ್ಯಕ್ರಮ ನಡೆಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಉಜಿನಪ್ಪ ಹಿರಿಯ ಉಪಾಧ್ಯಕ್ಷರು, ಜಿಲ್ಲಾ ಸಂಸ್ಥೆ, ಚಿತ್ರದುರ್ಗ ಇವರು ಜಾಥಕ್ಕೆ ಚಾಲನೆ ನೀಡಿದರು. ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಸವಿತಾ ಶಿವಕುಮಾರ್, ರಾಜ್ಯ ಪರಿಷತ್ ಸದಸ್ಯರಾದ ಶ್ರೀ ಬಸವರಾಜು,



ಉಪಾಧ್ಯಕ್ಷರಾದ ಶ್ರೀ ಪರಮೇಶ್ವರಪ್ಪ, ಸೇರಿದಂತೆ ನೂರಾರು ವಿದ್ಯಾರ್ಥಿಗಳು ಕಾಲ್ನಡಿಗೆಯ ಜಾಥಾದಲ್ಲಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ನಗರದ ವಿದ್ಯಾವಿಕಾಸ ಶಾಲೆಯ ಸಭಾಂಗಣದಲ್ಲಿ ನಡೆದ ಸಂಸ್ಥಾಪಕರ ಚಿಂತನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಸವಿತಾ ಶಿವಕುಮಾರ್ ಹಾಗೂ ರಾಜ್ಯ ಪರಿಷತ್ ಸದಸ್ಯರಾದ ಶ್ರೀ ಬಸವರಾಜು, ಉಪಾಧ್ಯಕ್ಷರಾದ ಶ್ರೀ ಪರಮೇಶ್ವರಪ್ಪ, ಜಿಲ್ಲಾ ಸಹಕಾರ್ಯದರ್ಶಿ ಡಾ. ರಹಮತ್ ಉಲ್ಲಾ, ಹೆಚ್‌ಕ್ಯೂಸಿಗಳಾದ ಸತ್ಯ ನಾರಾಯಣ ನಾಯ್ಡು, ಅವರಿಂದ ರಾಜ್ಯ ಪುರಸ್ಕಾರ ಪ್ರಮಾಣ ಪತ್ರಗಳನ್ನು ಮಕ್ಕಳಿಗೆ ವಿತರಿಸಲಾಯಿತು. ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಹೋಬಳಿ ಹಂತದ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳೊಂದಿಗೆ ವಿವಿಧ ಶಾಲೆಯ ಸ್ಕೌಟ್ಸ್, ಗೈಡ್ಸ್ ದಳಗಳು ವಿವಿಧ ಸೇವೆಗಳ ಮೂಲಕ ಹಾಗೂ ಸೈಕಲ್ ಜಾಥ, ಶಾಂತಿಜಾಥ, ಸರ್ವಧರ್ಮ ಪ್ರಾರ್ಥನೆ, ಸ್ವಚ್ಚತಾ ಕಾರ್ಯಕ್ರಮ, ಒಳ್ಳೆಯ ಕೆಲಸ, ಗಿಡ ನೆಡುವ ಕಾರ್ಯಕ್ರಮ ಮಾಡುವ ಮೂಲಕ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು.

## ದಾವಣಗೆರೆ

* ಫೆಬ್ರವರಿ 14 ರಂದು ದಾವಣಗೆರೆ ನಗರದ ಅಮರ್ ಜವಾನ್ ಸ್ಮಾರಕ ಪಾರ್ಕ್‌ನಲ್ಲಿ ಸ್ಮಾರಕಕ್ಕೆ ಹೂ ಹಾಕುವುದರೊಂದಿಗೆ ಬನ್ನಿ, ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹುತಾತ್ಮರಾದ ವೀರಯೋಧರಿಗೆ ಮೌನ ಪ್ರಾರ್ಥನೆಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಶಾರದಾ ಮಗಾನಳ್ಳಿ ಜಿಲ್ಲಾ ಗೈಡ್ ಆಯುಕ್ತರು ಉಪಸ್ಥಿತರಿದ್ದರು. ಶ್ರೀಮತಿ ವಾಣಿಕೇಶವ್ ಲೇಡಿ ಸ್ಕೌಟ್ ಮಾಸ್ಟರ್ ಮತ್ತು ಕಾರ್ಯದರ್ಶಿಗಳು ನ್ಯೂ ಸೆಂಟ್ ಪೀಟರ್ ಶಾಲೆ ಇವರು ಕಾರ್ಯಕ್ರಮವನ್ನು ಸಂಘಟಿಸಿದರು.



* ಫೆಬ್ರವರಿ 14 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿರಡೋಣಿ ಇಲ್ಲಿ ಪುಲ್ವಾಮ ದಾಳಿಯಲ್ಲಿ ಹುತಾತ್ಮರಾದ ವೀರಯೋಧರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

* ಫೆಬ್ರವರಿ 14 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ಸಿವಿವಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪುಲ್ವಾಮ ದಾಳಿಯಲ್ಲಿ ಹುತಾತ್ಮರಾದ ವೀರಯೋಧರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

* ಫೆಬ್ರವರಿ 15 ರಂದು ಹರಿಹರ ಸ್ಥಳೀಯ ಸಂಸ್ಥೆಯ ಶಾಲೆಗಳಲ್ಲಿ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆಯ ರಕ್ಷಣಾ ಸಿಬ್ಬಂದಿಗಳು ಎನ್.ಡಿ.ಆರ್.ಎಫ್. ಮತ್ತು ಎಸ್.ಡಿ.ಆರ್.ಎಫ್. ವತಿಯಿಂದ ತುರ್ತು ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು ಸಮುದಾಯ ಜಾಗೃತಿ ಬಗ್ಗೆ ಅಣುಕು ಪ್ರದರ್ಶನವನ್ನು ನೀಡಿದರು. ಈ ಸಂದರ್ಭದಲ್ಲಿ ಎನ್.ಡಿ.ಆರ್.ಎಫ್. ಮತ್ತು ಎಸ್.ಡಿ.ಆರ್.ಎಫ್. ಕಮಾಂಡರ್‌ಗಳು, ಜಿಲ್ಲಾ ಸಂಸ್ಥೆಯ ಶ್ರೀಮತಿ ರತ್ನ .ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ .ಜೆ., ಎಸ್.ಜಿ.ವಿ. ಶಾಲೆಯ ಸ್ಕೌಟರ್ಸ್ ಗೈಡರ್ಸ್‌ಗಳು, ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

* ಫೆಬ್ರವರಿ 22 ರಂದು ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ನಗರದ ಕಾಸಲ್ ಶ್ರೀನಿವಾಸ ಶೆಟ್ಟಿ ವಾಟರ್ ಟ್ಯಾಂಕ್ ಪಾರ್ಕ್‌ನಲ್ಲಿ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ನಿಮಿತ್ತ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ನಗರದ ಪ್ರಮುಖ ಬೀದಿಗಳಲ್ಲಿ ಪಥಸಂಚಲನವನ್ನು ಆಯೋಜಿಸಲಾಗಿತ್ತು ಮತ್ತು ವಿಶೇಷ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಿ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಶಾರದಾ ಮಗಾನಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಜಿಲ್ಲಾ ಸಂಸ್ಥೆ ಎಲ್ಲಾ ಪದಾಧಿಕಾರಿಗಳು, ಸ್ಕೌಟರ್ಸ್ ಗೈಡರ್ಸ್‌ಗಳು, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಕಾರ್ಯಕ್ರಮವನ್ನು ಸಂಘಟಿಸಿದರು.



* ಫೆಬ್ರವರಿ 22 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಶಾಲೆಯ ಸುತ್ತಮುತ್ತ ಸ್ಕೌಟ್-ಗೈಡ್ ಘೋಷ ವಾಕ್ಯಗಳನ್ನು ಹಿಡಿದು ಪಥಸಂಚಲನ ನಡೆಸಿದರು. ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಶ್ರೀ ಮಹೇಶ್ .ಎಂ.ಸಿ., ಕಾರ್ಯದರ್ಶಿಗಳು ಕಾರ್ಯಕ್ರಮವನ್ನು ಸಂಘಟಿಸಿದರು.

* ಫೆಬ್ರವರಿ 22 ರಂದು ಹೊನ್ನಾಳಿ ತಾಲ್ಲೂಕಿನ ನೆಲಹೊನ್ನೆ ತಾಂಡದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹರಿಹರ ಸ್ಥಳೀಯ ಸಂಸ್ಥೆಯ ಕಾಳಿದಾಸ ಪ್ರೌಢಶಾಲೆ ಮತ್ತು ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಂಸ್ಥಾಪಕರ ದಿನಾಚರಣೆಯನ್ನು ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಆಚರಿಸಿದರು.



* ಫೆಬ್ರವರಿ 23 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆ, ಚಿರಡೋಣಿ ಮತ್ತು ರಾಘವೇಂದ್ರ ಪ್ರೌಢಶಾಲೆ ಬಸಪಟ್ಟಣದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕ ಉದ್ಘಾಟನೆಯನ್ನು ಶ್ರೀ ಜಯಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಶಾರದಾ ಮಗಾನಳ್ಳಿ, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿದ್ದರು.

* ಫೆಬ್ರವರಿ 29 ರಂದು ಹರಿಹರ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸುತ್ತಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಶಾಲೆಯ ಶ್ರೀ ರುದ್ರೇಶ್ ಜಿ. ರವರು ಸೇವಾ ನಿವೃತ್ತಿ ಹೊಂದಿದ ಪ್ರಯುಕ್ತ ಜಿಲ್ಲಾ ಸಂಸ್ಥೆ ವತಿಯಿಂದ ಇವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶಾರದ ಮಾಗನಹಳ್ಳಿ, ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಸಹ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿದ್ದರು.



* ಮಾರ್ಚ್ 02 ರಂದು ದಾವಣಗೆರೆ ದಕ್ಷಿಣ ಸ್ಥಳೀಯ ಸಂಸ್ಥೆಯ ಎಸ್.ವಿ.ಎಸ್. ಕಾನ್ವೆಂಟ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ವಾರಾಂತ್ಯದ ಶಿಬಿರದ ಅಂಗವಾಗಿ ನಗರದ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ಈಜುಕೊಳಕ್ಕೆ ಭೇಟಿ ನೀಡಿ ಈಜುವ ಕೌಶಲ್ಯಗಳನ್ನು ತಿಳಿದುಕೊಂಡರು.

* ಮಾರ್ಚ್ 02 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಜಿಲ್ಲಾ ಮಟ್ಟದ ಬನ್ನೀ ಲೀಡರ್, ಫ್ಲಾಕ್ ಲೀಡರ್, ಗೈಡ್ ಕ್ಯಾಪ್ಟನ್‌ರವರ ಸಮಾವೇಶವನ್ನು ಹಾಗೂ ವಿಶ್ವ ಮಹಿಳಾ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ॥ ಅರ್ಪಿತ ಎಸ್.ಕೆ., ಅನ್ವಯ ಆರ್ಯುವೇದಿಕ್ ಆಸ್ಪತ್ರೆ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಮಂಜುಳ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು, ಶ್ರೀಮತಿ ಶಾಂತ ಎಸ್. ಯಾವಗಲ್, ಉಪಾಧ್ಯಕ್ಷರು, ಶ್ರೀಮತಿ ಶಾರದಾ ಮಾಗನಹಳ್ಳಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ತುಳಸಾಮಣಿ, ಜಿಲ್ಲಾ ತರಬೇತಿ ಆಯುಕ್ತರು ಗೈಡ್, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಸಹ ಕಾರ್ಯದರ್ಶಿಗಳು ಉಪಸ್ಥಿತರಿದ್ದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಕಾರ್ಯಕ್ರಮವನ್ನು ಸಂಘಟಿಸಿದರು.



* ಮಾರ್ಚ್ 02 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಟೇಲ್ ವೀರಪ್ಪ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಸೈಕಲಿಂಗ್ ಮೂಲಕ ಕೊಂಡಜ್ಜಿ ಬಸಪ್ಪ ಸ್ಕೌಟ್-ಗೈಡ್ ರಾಜ್ಯ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ಧ್ವಜಾರೋಹಣದ ಬಗ್ಗೆ ಮಾಹಿತಿ ಪಡೆದುಕೊಂಡರು. ಈ ಸಂದರ್ಭದಲ್ಲಿ ಶಾಲೆಯ ವ್ಯವಸ್ಥಾಪಕರಾದ ಶ್ರೀಮತಿ ಪ್ರಣೀತ ಗಿರೀಶ್, ಶ್ರೀ ರವೀಂದ್ರ ಸ್ವಾಮಿ ಟಿ.ಎಂ., ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀ ಶ್ಯಾಮಲ ನಾಯಕ್ ಸ್ಕೌಟ್ ಮಾಸ್ಟರ್, ಶ್ರೀಮತಿ ಭಾವನ, ಗೈಡ್ ಕ್ಯಾಪ್ಟನ್ ಉಪಸ್ಥಿತರಿದ್ದರು.

* ಮಾರ್ಚ್ 03 ರಂದು ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ಶ್ರೀ ತರಳಬಾಳು ಶಾಲೆ ಮತ್ತು ಮಾಗನೂರು ಬಸಪ್ಪ ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಮಕ್ಕಳಿಗೆ ಲಸಿಕೆ ಹಾಕಿಸುವದರೊಂದಿಗೆ ಸೇವೆ ಸಲ್ಲಿಸಿದರು.

* ಮಾರ್ಚ್ 02 ರಂದು ಜೈನ್ ವಿದ್ಯಾಲಯ ಶಾಲೆಯಲ್ಲಿ ಬನ್ನೀಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಶಾರದ ಪೂಜೆಯನ್ನು ನೆರವೇರಿಸಿದರು.



## ಹಾಸನ

* " ಸ್ಕೌಟ್ಸ್ ಗೈಡ್ಸ್ ಚಳವಳಿಯಲ್ಲಿ ವಿದ್ಯಾರ್ಥಿಗಳು ಶಿಸ್ತು, ಸಂಯಮ, ಸೇವಾ ಮನೋಭಾವದೊಂದಿಗೆ ಮಾನವೀಯ ಮೌಲ್ಯಗಳು ವೃದ್ಧಿಸುತ್ತದೆ" ಎಂದು ಜಿಲ್ಲಾ ಸಹಾಯಕ ಆಯುಕ್ತ ಶ್ರೀ ಎಂ. ಬಾಲಕೃಷ್ಣ ಅಭಿಪ್ರಾಯಪಟ್ಟರು. ಅವರು ಆಲೂರು ತಾಲ್ಲೂಕು, ಸ್ಥಳೀಯ ಸಂಸ್ಥೆ ಭೈರಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಲಾರ್ಡ್ ಬೇಡನ್ ಪೊವೆಲ್ ಜನ್ಮ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಸಂಸ್ಥಾಪನಾ ದಿನಾಚರಣೆಯ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್ ಮಾತನಾಡಿ "ನಿವೃತ್ತ ಸೇನಾಧಿಕಾರಿಯಾದ ಲಾರ್ಡ್ ಬೇಡನ್ ಪೊವೆಲ್ ಅವರು 1907ರಲ್ಲಿ ಹುಟ್ಟು ಹಾಕಿದ ಈ ಸಂಸ್ಥೆ ಇಂದು ಜಗತ್ತಿನ 200ಕ್ಕೂ ಅಧಿಕ ರಾಷ್ಟ್ರಗಳಲ್ಲಿ ತನ್ನ ಕಾರ್ಯವೈಖರಿಯನ್ನು ವಿಸ್ತರಿಸಿಕೊಂಡು ನಿರಂತರವಾಗಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದೆ" ಎಂದರು. ಗೈಡ್ ಕ್ಯಾಪ್ಟನ್ ಶ್ರೀಮತಿ ಶಿಲ್ಪಕೃತಿ ಮಾತನಾಡಿ "ಲಾರ್ಡ್ ಬೇಡನ್ ಪೊವೆಲ್ ಅವರು ಭವಿಷ್ಯದ ಸತ್ಪ್ರಜೆಗಳಾಗಬಹುದಾದ ಮಕ್ಕಳನ್ನು ಉತ್ತಮ ಚಿಂತನಶೀಲರನ್ನಾಗಿ ಮಾಡಿಸುವುದರ ಜೊತೆಗೆ ಆದರ್ಶ ಜೀವನಕ್ಕೆ ಅಗತ್ಯವಿರುವ ಶಿಸ್ತು, ಸಂಯಮ, ಸೇವಾ ಮನೋಭಾವ ಮುಂತಾದ ಉದಾತ್ತ ಗುಣಗಳನ್ನು ಬೆಳೆಸುವ ನಿಟ್ಟಿನಲ್ಲಿ ಇಂಗ್ಲೆಂಡಿನ ಬ್ರೌನ್ಸಿ ದ್ವೀಪದಲ್ಲಿ 1907 ರಲ್ಲಿ ಪ್ರಾಯೋಗಿಕ ಶಿಬಿರ ಮಾಡುವುದರ ಮೂಲಕ ಚಾಲನೆ ನೀಡಿದರು" ಎಂದರು. ಬೆಳಗ್ಗೆ ಭೈರಾಪುರ ಗ್ರಾಮ ಪಂಚಾಯಿತಿ ವತಿಯಿಂದ ಮಕ್ಕಳ ಜಾಥಾ ಚಾಲನೆಗೊಂಡು ಭೈರಾಪುರ ಗ್ರಾಮದಲ್ಲಿ ಸಂಚರಿಸಿ ನಂತರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಸಮಾವೇಶಗೊಳ್ಳಲಾಯಿತು. ವೇದಿಕೆಯಲ್ಲಿ ಸ್ಥಳೀಯ ಸಂಸ್ಥೆಯಖಜಾಂಚಿ ಶ್ರೀಮತಿ ಬಿ.ಎಸ್. ಹಿಮ, ಮುಖ್ಯ ಶಿಕ್ಷಕಿ ಶ್ರೀಮತಿ ಎಂ.ಎಲ್. ಎಲಿಜಬೆಥ್ ಮುಂತಾದವರು ಮಾತನಾಡಿದರು. ಈ ಸಂದರ್ಭದಲ್ಲಿ ಬೆತಸ್ಥ ವಿದ್ಯಾಸಂಸ್ಥೆಯು ಪ್ರಾಂಶುಪಾಲರಾದರೀನಾ ಮೆಥ್ಯೂವ್, ಭೈರಾಪುರಗ್ರಾಮ ಪಂಚಾಯತಿ ಸದಸ್ಯ ಶ್ರೀ ಗಣೇಶ್ ಉಪಸ್ಥಿತರಿದ್ದರು. ಶಿಕ್ಷಕಿ ಶ್ರೀಮತಿ ಜ್ಯೋತಿ ಅಮೃತೇಶ್ ನಿರೂಪಿಸಿದರು, ಶ್ರೀಮತಿ ಎಂ.ಎಲ್. ಎಲಿಜಬೆಥ್ ಸ್ವಾಗತಿಸಿದರು, ಗೈಡ್ ಕ್ಯಾಪ್ಟನ್ ಶ್ರೀಮತಿ ಕಾವ್ಯ ವಂದಿಸಿದರು.

* "ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಲ್ಲಿ ಶಿಸ್ತು, ಸಂಯಮ ಕಲಿಸುವುದರ ಜೊತೆಗೆ ಸೇವಾ ಮನೋಭಾವವನ್ನು ವೃದ್ಧಿಸುತ್ತದೆ" ಎಂದು ಸ್ಥಳೀಯ ಸಂಸ್ಥೆ ಆಲೂರು ತಾಲ್ಲೂಕು ಅಧ್ಯಕ್ಷರೂ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎ.ಜೆ. ಕೃಷ್ಣೇಗೌಡ ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಆಲೂರು ತಾಲ್ಲೂಕು ಸ್ಥಳೀಯ ಸಂಸ್ಥೆ ಹಮ್ಮಿಕೊಂಡಿದ್ದ 2023–24ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದರು. ನ್ಯಾಯವಾದಿಗಳು ಹಾಗೂ ಹಾಸನ ಜಿಲ್ಲಾ ಉಪಾಧ್ಯಕ್ಷರಾದ ಶ್ರೀಮತಿ ಎಂ.ಬಿ. ಗಿರಿಜಾಂಬಿಕ ಮಾತನಾಡಿ "ಸೇವೆಯೇ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮುಖ್ಯ ಧ್ಯೇಯವಾಗಿದೆ. ನಮ್ಮ ಸಂಸ್ಥೆಯು ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕ, ಹಾಸನಾಂಬ ಜಾತ್ರ ಮಹೋತ್ಸವ, ಕಲ್ಯಾಣಿಗಳ ಪುನರುಜ್ಜೀವನ, ಅರಣ್ಯೀಕರಣ ಹೀಗೆ ಹಲವಾರು ಸಂದರ್ಭಗಳಲ್ಲಿ ನಮ್ಮ ನೂರಾರು, ಸಾವಿರಾರು ಮಕ್ಕಳು ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ" ಎಂದರು. ಹಾಸನದ ಮಿಡ್ ಟೌನ್ ರೋಟರಿಯ ಅಧ್ಯಕ್ಷೆ ಶ್ರೀಮತಿ ಮಮತಾ ಪಾಟೀಲ್ ಮಾತನಾಡಿ "ಸ್ಕೌಟ್ಸ್ ಮತ್ತು ಗೈಡ್ಸ್‌ಗಲ್ಲಿ ಬಾಲ್ಯದಿಂದಲೇ ಸ್ವಯಂ ಶಿಸ್ತನ್ನು ಬೆಳೆಸುತ್ತದೆ. ಧೈರ್ಯಶೀಲತೆಯನ್ನು ಕಲಿಸುತ್ತದೆ. ಆದ್ದರಿಂದ ಮಕ್ಕಳು ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯಲ್ಲಿ ನಿರಂತರವಾಗಿ ತೊಡಗಿಸಿಕೊಂಡು ನಿಮ್ಮ ವ್ಯಕ್ತಿತ್ವವಿಕಸನಗೊಳಿಸಿಕೊಳ್ಳಿ" ಎಂದು ಸಲಹೆ ನೀಡಿದರು. ವೇದಿಕೆಯಲ್ಲಿ ಜಿಲ್ಲಾ ಸಹಾಯಕ ಆಯುಕ್ತ ಶ್ರೀ ಎಂ. ಬಾಲಕೃಷ್ಣ, ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀ ಎಚ್.ಜೆ. ಪೃಥ್ವಿ, ತಾಲ್ಲೂಕು ಸಮನ್ವಯಾಧಿಕಾರಿ ಶ್ರೀ ಬಿ.ಬಿ. ರವಿ, ಶಿಕ್ಷಣ ಸಂಯೋಜಕರಾದ ಶ್ರೀ ತಿಮ್ಮಶೆಟ್ಟಿ ಮುಂತಾದವರು ಹಾಜರಿದ್ದರು.

* ಸರ್ಕಾರಿ ಪ್ರೌಢಶಾಲೆ ಮುರುಂಡಿ ಅರಸೀಕೆರೆ ತಾಲ್ಲೂಕು ಇಲ್ಲಿನ ಪ್ರೇರಣಾ ಗೈಡ್ ಘಟಕದ ವತಿಯಿಂದ ರಸ್ತೆ ಸುರಕ್ಷತಾ ಸಪ್ತಾಹವನ್ನು ಆಚರಿಸಲಾಯಿತು. ಭಿತ್ತಿಪತ್ರಗಳೊಂದಿಗೆ ಜಾಥಾದ ಮೂಲಕ ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲಾಯಿತು. ಗೈಡ್ ಕ್ಯಾಪ್ಟನ್ ಶ್ರೀಮತಿ ಕಾತ್ಯಾಯಿನಿ ಅವರು ಕಾರ್ಯಕ್ರಮವನ್ನು ಆಯೋಜಿಸಿದ್ದರು. ಕಾರ್ಯದರ್ಶಿಗಳಾದ ಶ್ರೀ ಸುರೇಶ್ ಮುಖ್ಯೋಪಾಧ್ಯಾಯರು, ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

* "ಭಾರತದ ಹೆಣ್ಣು ಮಕ್ಕಳಿಗೆ ಬೆಂಬಲ ಮತ್ತು ಅವಕಾಶಗಳನ್ನು ಒದಗಿಸುವುದು, ಭಾರತದಲ್ಲಿನ ಲಿಂಗ ಅಸಮಾನತೆಯನ್ನು ಹೋಗಲಾಡಿಸುವುದು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಮಹತ್ವದ ಉದ್ದೇಶವಾಗಿದೆ" ಎಂದು ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಎಚ್.ಎಂ. ಪ್ರಿಯಾಂಕ ಅಭಿಪ್ರಾಯಪಟ್ಟರು. ಅವರು ಸ್ಥಳೀಯ ಸಂಸ್ಥೆ ಆಲೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ತಾಳೂರು ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು. ತಾಲ್ಲೂಕು ಖಜಾಂಚಿ ಶ್ರೀಮತಿ ಬಿ.ಎಸ್. ಹಿಮ ಮಾತನಾಡಿ "ಭಾರತದಲ್ಲಿ ಹೆಣ್ಣು ಮಗು ಎದುರಿಸುತ್ತಿರುವ ಶಿಕ್ಷಣ, ಪೋಷಣೆ, ಬಾಲ್ಯವಿವಾಹ, ಕಾನೂನು ಹಕ್ಕುಗಳು, ವೈದ್ಯಕೀಯ ಆರೈಕೆ, ರಕ್ಷಣೆ, ಗೌರವದಂತಹ ಸಮಸ್ಯೆಗಳ ಜಾಗೃತಿ ಉತ್ತೇಜಿಸಲು ಸಮತೆಯನ್ನು ಒದಗಿಸಲು ಭಾರತ ಸರಕಾರ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ದೇಶಾದ್ಯಂತ ಜಾಗೃತಿಗೊಳಿಸುತ್ತಿದೆ" ಎಂದರು. ತಾಲ್ಲೂಕು ಸಹ ಕಾರ್ಯದರ್ಶಿ ಶ್ರೀ ಎಚ್.ಡಿ. ಕುಮಾರ್ ಮಾತನಾಡಿ "ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ರಮಂತೇ ದೇವತಾಃ. ಎಲ್ಲಿ ಹೆಣ್ಣು ಗೌರವಿಸಲ್ಪಡುತ್ತಾಳೋ, ಅಲ್ಲಿ ದೇವಾನುದೇವತೆಗಳು ನೆಲೆಸಿರುತ್ತಾರೆ" ಎಂದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್, ಸಹ ಶಿಕ್ಷಕರಾದ



ಶ್ರೀ ವಿ. ರವಿತ, ಅತಿಥಿ ಶಿಕ್ಷಕಿ ಶ್ರೀಮತಿ ಬಿ.ಎಂ. ಚಂದ್ರಕಲಾ ಸೇರಿದಂತೆ ತಾಳೂರು ಶಾಲೆಯ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ ಮತ್ತು ಗೈಡ್ಸ್‌ಗಳು ಉಪಸ್ಥಿತರಿದ್ದರು.

* ಜೆ.ಎಸ್.ಎಸ್ ಪ್ರೌಢಶಾಲೆ ನಾರ್ವೆಯ ಸ್ಕೌಟ್ಸ್ ದಳದ ವತಿಯಿಂದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಅಂಗವಾಗಿ ಗ್ರಾಮದ ಪ್ರಮುಖ ರಸ್ತೆಯ ಮೂಲಕ ಜಾಥಾ ತೆರಳಿ ಹೆಣ್ಣು ಮಕ್ಕಳ ಹಕ್ಕುಗಳ ಬಗ್ಗೆ ಘೋಷಣೆ ಕೂಗಿ ಜಾಗ್ರತೆ ಮೂಡಿಸಲಾಯಿತು.

* ಸರ್ಕಾರಿ ಪ್ರೌಢಶಾಲೆ ಗಂಡಸಿ ಅರಸೀಕೆರೆ ತಾಲೂಕಿನಲ್ಲಿ ಗೈಡ್ ಶಿಕ್ಷಕಿ ಶ್ರೀಮತಿ ಚಂಪರಾಣಿ ಅವರ ನೇತೃತ್ವದಲ್ಲಿ ಹೆಣ್ಣು ಮಕ್ಕಳ ದಿನಾಚರಣೆಯ ಪ್ರಯುಕ್ತ ಚರ್ಚಾ ಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆ ನಡೆಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಸಹಕಾರವನ್ನು ನೀಡಿದರು.

* ಶ್ರೀ ಅಂಬಿಕಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂತರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಅಂಗವಾಗಿ ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ ನಡೆಸಿದರು.

* ಸ್ಕೌಟ್ ಮತ್ತು ಗೈಡ್ಸ್ ರೋಟರಿ ಶಾಲೆ, ಸಕಲೇಶಪುರದಲ್ಲಿ ಜನವರಿ 24 ರಂದು ಅಂತರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಸಿಂಧು ಆಗಮಿಸಿದ್ದು ಹೆಣ್ಣು ಮಕ್ಕಳಿಗೆ ಅರಿವು ಮೂಡಿಸುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

* ರಾಷ್ಟ್ರೀಯ ಮತದಾರರ ದಿನವನ್ನು ಚನ್ನರಾಯಪಟ್ಟಣ ತಾಲೂಕು ಸಂಸ್ಥೆಯ ತಾಲೂಕು ಪಂಚಾಯಿತಿಯಲ್ಲಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ತಾಲೂಕು ದಂಡಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಾಲೂಕು ಖಜಾಂಚಿ ಶ್ರೀ ಜಯರಾಮ್, ಸ್ಕೌಟ್ ಮಾಸ್ಟರ್ ಶ್ರೀ ವಿಕಾಸ್ ಎ.ಎಸ್.ಓ.ಸಿ., ಶ್ರೀಮತಿ ಸಿ. ಪ್ರಿಯಾಂಕ ಹಾಗೂ ಸ್ಕೌಟ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




* ಫೆಬ್ರವರಿ 17 ರಂದು ಚನ್ನರಾಯಪಟ್ಟಣ ತಾಲ್ಲೂಕು ಸಂಸ್ಥೆಯ ರ‍್ಯಾಲಿಯನ್ನು ಕನ್ನಡ ಭವನದಲ್ಲಿ ಆಯೋಜನೆ ಮಾಡಲಾಯಿತು. ಶ್ರೀಮತಿ ಭಾರತಿ ನಾಗೇಶ್‌ರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶುಭ ಕೋರಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ದೀಪರವರು ರಾಜ್ಯ ಪುರಸ್ಕಾರ್ ಪ್ರಮಾಣ ಪತ್ರವನ್ನು ವಿತರಣೆ ಮಾಡಿದರು. ತಾಲ್ಲೂಕು ಪದಾಧಿಕಾರಿಗಳು ಜಿಲ್ಲಾ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು.

* "ಲಿಂಗ ಸಮಾನತೆ, ಸಂತಾನೋತ್ಪತ್ತಿ ಹಕ್ಕುಗಳು, ಮಹಿಳೆಯರ ವಿರುದ್ಧ ಹಿಂಸೆ, ಮಹಿಳಾ ನಿಂದನೆ, ಮಹಿಳಾ ಹಕ್ಕುಗಳು ಮುಂತಾದ ಅಂಶಗಳಿಗಾಗಿ ನಡೆದ ಹೋರಾಟವೇ ಚಳವಳಿಯಾಗಿ ಜಾಗತಿಕ ಮನ್ನಣೆ ಪಡೆದು ಮಹಿಳೆಗೆ ಸಮಸಮಾಜದ ಕನಸನ್ನು ಬಿತ್ತುವ ಮಹತ್ವದ ಉದ್ದೇಶದಿಂದ ಹೊರಟು ಇಂದಿಗೂ ಚಳವಳಿ ರೂಪದಲ್ಲಿ ಧ್ವನಿಸುತ್ತಿದೆ" ಎಂದು ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಎಚ್.ಎಂ. ಪ್ರಿಯಾಂಕ ಅಭಿಪ್ರಾಯಪಟ್ಟರು. ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ತಾಲ್ಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಣತೂರು ಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನುದ್ದೇಶಿಸಿ ಮಾತನಾಡಿದರು. ಕಣತೂರು ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಎಂ.ಆರ್. ಚಂದ್ರಮ್ಮ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ "ಮಹಿಳಾ ದಿನವು ಲಿಂಗ ತಾರತಮ್ಯ, ಪಕ್ಷಪಾತದಿಂದ ಮುಕ್ತವಾಗಿರುವ ಲಿಂಗ ಸಮಾನ ಜಗತ್ತಿಗೆ ಕರೆ ನೀಡುತ್ತದೆ. ಈ ದಿನವನ್ನು ಮಹಿಳೆಯರ ಗೌರವಾರ್ಥವಾಗಿ ಆಚರಿಸಲಾಗುತ್ತದೆ. ಇದು ಮಹಿಳೆಯರ ಸಮಾನ ಹಕ್ಕುಗಳು, ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ನಿಂದನೆ ಮತ್ತು ಸಂತಾನೋತ್ಪತ್ತಿ ಹಕ್ಕುಗಳಂತಹ ವಿಷಯಗಳ ಬಗ್ಗೆ ಮಾತನಾಡುತ್ತದೆ" ಎಂದು. ವೇದಿಕೆಯಲ್ಲಿ ತಾಲ್ಲೂಕು ಕಾರ್ಯದರ್ಶಿ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್, ತಾಲ್ಲೂಕು ಖಜಾಂಚಿ ಶ್ರೀಮತಿ ಬಿ.ಎಸ್. ಹಿಮ, ತಾಲ್ಲೂಕು ಸಹ ಕಾರ್ಯದರ್ಶಿ ಶ್ರೀ ಎಚ್.ಡಿ. ಕುಮಾರ್, ಹಿರಿಯ ಶಿಕ್ಷಕಿ ಶ್ರೀಮತಿ ಎಚ್.ಎನ್. ಪ್ರಮೀಳಾ ಸೇರಿದಂತೆ ಹಲವರು ಮಾತನಾಡಿದರು.

* ಆಲೂರು ತಾಲ್ಲೂಕು ಭೈರಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಂ.ಎಲ್.ಎಲಿಜಬೆಥ್ ಮಾರ್ಗದರ್ಶನದಲ್ಲಿ ಗೈಡ್ಸ್‌ಗಳು ಚಿತ್ರದುರ್ಗದಲ್ಲಿ 2023–24ನೇ ಸಾಲಿನಲ್ಲಿ ನಡೆದ ರಾಜ್ಯಮಟ್ಟದ ಗೀತಗಾಯನ ಸ್ಪರ್ಧೆಯಲ್ಲಿ ಹಾಸನ ಜಿಲ್ಲೆ ಪ್ರತಿನಿಧಿಸಿದ್ದರು. ಹಾಗೆಯೇ ಬೆಂಗಳೂರಿನಲ್ಲಿ ನಡೆದ 2023–24ನೇ ಸಾಲಿನ ರಾಜಭವನ ರ‍್ಯಾಲಿಯಲ್ಲಿ ಭಾಗವಹಿಸಿ ಉನ್ನತ ಶಿಕ್ಷಣ ಸಚಿವರಾದ ಡಾ.ಸುಧಾಕರ್‌ರವರಿಂದ ಪ್ರಮಾಣ ಪತ್ರ ಸ್ವೀಕರಿಸಿದ್ದಾರೆ.

ಸದರಿ ಶಾಲೆಯ 3 ರಿಂದ 5ನೇ ತರಗತಿ ಮಕ್ಕಳಾದ ಬಿ.ಎಂ. ಡಿಂಪನ, ಲಾಸ್ಯ ಎ., ಯುಕ್ತಶ್ರೀ ಬಿ.ಎಲ್., ಸ್ಯಾನ್ವಿ, ಮಾನಸ, ಪವಿತ್ರ, ಮಾನ್ವಿತ ಹಾಗೂ ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಫ್ಲಾಕ್ ಲೀಡರ್ ಎಂ.ಎಲ್. ಎಲಿಜಬೆಥ್ ಅವರುಗಳನ್ನು ಆಲೂರು ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಧ್ವನಿ ವತಿಯಿಂದ ಇತ್ತೀಚೆಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ರಂಭಾಪುರಿ ಶಾಖಾ ಹಿರೇಮಠ ಕಾರ್ಜುವಳ್ಳಿಯ ಶ್ರೀ ಷ.ಬ್ರ. ಸದಾಶಿವ ಶಿವಾಚಾರ್ಯ ಮಹಾಸ್ವಾಮಿಗಳು, ಮಾನ್ಯ ಶಾಸಕರಾದ ಶ್ರೀ ಸಿಮೆಂಟ್ ಮಂಜು, ತಾಲ್ಲೂಕು ಕಾರ್ಯದರ್ಶಿ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್, ರಾ.ಕಾ.ಪ.ಧ್ವ. ಸಂಘದ ಅಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಬಂಗ್ಲೆ, ತಾಲ್ಲೂಕು ಅಧ್ಯಕ್ಷ ಶ್ರೀ ಟಿ.ಕೆ. ಕುಮಾರಸ್ವಾಮಿ, ಜೆ.ಡಿ.ಎಸ್. ಮುಖಂಡ ಶ್ರೀ ಕೆ.ಎಸ್. ಮಂಜೇಗೌಡ, ಶ್ರೀ ಅಜಿತ್ ಚಿಕ್ಕಕಣಗಾಲ್ ಸೇರಿದಂತೆ ಹಲವರು ಹಾಜರಿದ್ದರು.






## ಕೊಡಗು

* ಫೆಬ್ರವರಿ 21 ರಂದು ಮಡಿಕೇರಿಯಲ್ಲಿ ಸಂವಿಧಾನ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇದರ ಜಾಥಕ್ಕೆ ಭವ್ಯ ಸ್ವಾಗತ ನೀಡಲಾಯಿತು. ಮಡಿಕೇರಿಯ ಸಂತ ಮೈಕಲರ್ ಪ್ರೌಢಶಾಲಾ ಸ್ಕೌಟ್ಸ್-ಗೈಡ್ಸ್‌ಗಳ ವಾದ್ಯಗೋಷ್ಠಿಯೊಂದಿಗೆ ನೂರಾರು ಮಂದಿ ಭವ್ಯ ಮೆರವಣಿಗೆಯ ಮೂಲಕ ಕಾವೇರಿ ಕಲಾಕ್ಷೇತ್ರದವರೆಗೂ ಕರೆತರಲಾಯಿತು. ಜಿಲ್ಲೆಯ ವಿವಿಧ ಶಾಳೆಗಳಿಂದ ನೂರಾರು ಸಂಖ್ಯೆಯಲ್ಲಿ ಜಾಥದಲ್ಲಿ ಭಾಗವಹಿಸಿದ್ದರು. ನಗರಸಭೆ ಪೌರಾಯುಕ್ತ ಶ್ರೀ ವಿಜಯ್, ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ, ಭಾಗಮಂಡಲ ಕಾವೇರಿ ಕಾಲೇಜಿನ ಪ್ರಾಂಶುಪಾಲ ಶ್ರೀ ಕೆ.ಜೆ. ದಿವಾಕರ, ತಹಶೀಲ್ದಾರ್ ಶ್ರೀ ಪ್ರವೀಣ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ದೊಡ್ಡೇಗೌಡ, ನಗರಸಭೆ ಸದಸ್ಯ ಶ್ರೀ ಬಶೀರ್, ಕಾರ್ಯದರ್ಶಿ ಶ್ರೀ ಬೊಳ್ಳಜ್ಜೀರ ಅಯ್ಯಪ್ಪ ಭಾಗವಹಿಸಿದ್ದರು. ಜಿಲ್ಲಾ ಸಂಘಟಕಿ ಶ್ರೀಮತಿ ದಮಯಂತಿ, ಶ್ರೀಮತಿ ಸುಲೋಚನ, ಶ್ರೀಮತಿ ಸಗಯ ಮೇರಿ ಮತ್ತು ವಿವಧ ಶಾಲೆಗಳಿಂದ ಆಗಮಿಸಿದ ಸ್ಕೌಟ್ಸ್-ಗೈಡ್ಸ್ ಶಿಕ್ಷಕರು ಭಾಗವಹಿಸಿದ್ದರು.



* ಫೆಬ್ರವರಿ 22 ರಂದು ವಿಶ್ವ ಸಂಸ್ಥಾಪಕರ ದಿನಾಚರಣೆ ಪ್ರಯುಕ್ತ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಹೊರಟ ಜಾಗೃತಿ ಜಾಥಕ್ಕೆ ಅಪರ ಜಿಲ್ಲಾಧಿಕಾರಿಯುವರಾದ ಶ್ರೀಮತಿ ವೀಣಾರವರು ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು. ಪ್ರದಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ, ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ಶ್ರೀ ಝೀವಲ್ ಖಾನ್, ಸ್ಕೌಟ್ ಆಯುಕ್ತರಾದ ಶ್ರೀಮತಿ ಜಿಮ್ಮಿ ಸಿಕ್ವೆರಾ, ಜಿಲ್ಲಾ ಸಂಸ್ಥೆಯ ಖಜಾಂಜಿ ಶ್ರೀಮತಿ ಪುಷ್ಪವೇಣಿ, ಜಿಲ್ಲಾ ಸಂಸ್ಥೆಯ ಸಹಾಯಕ ಗೈಡ್ ಆಯುಕ್ತರಾದ ಶ್ರೀಮತಿ ಸುಲೋಚನ, ಗೈಡ್ ವಿಭಾಗದ ಸಹ ಕಾರ್ಯದರ್ಶಿ ಶ್ರೀಮತಿ ಹರಿಣಿ ವಿಜಯ್, ಗೈಡ್ ವಿಭಾಗದ ಕೊಡಗು ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಮೈಥಿಲಿರಾವ್, ಲಾರ್ಡ್ ಬೇಡನ್ ಪೊವೆಲ್, ಒಲೆವ್ ಸೇಂಟ್ ಕ್ಲೇರ್ ಸೋಮ್ಸ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಜಿ.ಪಂ ಮುಖ್ಯ ಲೆಕ್ಕಾಧಿಕಾರಿ ಶ್ರೀ ಝೀವಲ್ ಖಾನ್ ಅವರು ಮಾತನಾಡಿ "ಜಿಲ್ಲೆಯಲ್ಲಿ ಯಾವುದಾದರೂ ಸಂಘಟನೆಗೆ ಅದರ ಉದ್ದೇಶ ಅರಿತು



ಸೇರಬೇಕು. ಒತ್ತಾಯದಿಂದ ಸೇರಬಾರದು. ತರಬೇತಿ ನಿಮ್ಮನ್ನು ಬದಲಾಯಿಸುತ್ತದೆ. ಶಿಸ್ತು ಬೆಳೆಸುತ್ತದೆ" ಎಂದು ತಿಳಿಸಿದರು. ಬಳಿಕ ಜಿಲ್ಲಾ ಪುರಸ್ಕಾರ ಮತ್ತು ರಾಜ್ಯ ಪುರಸ್ಕಾರ ಪ್ರಶಸ್ತಿ ಪತ್ರವನ್ನು ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಯಿತು. ಈ ಸಂದರ್ಭ ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ದೊಡ್ಡೇಗೌಡರವರು ಭಾಗವಹಿಸಿದ್ದರು. ಸಮಾರಂಭಕ್ಕೆ ಆಗಮಿಸಿದ ಎಲ್ಲರನ್ನು ಸಹ ಕಾರ್ಯದರ್ಶಿ ಶ್ರೀ ಬೋಳ್ಳಾಜಿರ ಅಯ್ಯಪ್ಪನವರು ಸ್ವಾಗತಿಸಿದರು ಶ್ರೀ ಜಿಮ್ಮಿ ಸಿಕ್ವೇರಾರವರು ಪ್ರಾಸ್ತಾವಿಕ ಮಾತನಾಡಿದರು, ಸ್ಕೌಟ್ ಮಾಸ್ಟರ್ ಹಾಗೂ ಸಂಪಾಜೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀಮತಿ ಉಷಾರಾಣಿಯವರು ನಿರೂಪಣೆ ಮಾಡಿದರು ಕಾರ್ಯಕ್ರಮವನ್ನು ಜಿಲ್ಲಾ ಸಂಘಟಕರಾದ ಶ್ರೀಮತಿ ಯು.ಸಿ. ದಮಯಂತಿ ಸಂಘಟಿಸಿದರು.

* ಸ್ಥಳೀಯ ಸಂಸ್ಥೆ ವಿರಾಜಪೇಟೆಯಲ್ಲಿ ಮಾರ್ಚ್ 01 ರಂದು ಪೋಲಿಯೋ ಭಾನುವಾರದ ಪ್ರಯುಕ್ತ ಕೊಡಗು ಜಿಲ್ಲಾ ಪಂಚಾಯತ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯೋಜಿಸಿದ್ದ ಬೃಹತ್ ಜಾಥದಲ್ಲಿ ಸ್ಕೌಟ್ಸ್-ಗೈಡ್ಸ್‌ಗಳು ಪಾಲ್ಗೊಂಡಿದ್ದರು.



* ಮಾರ್ಚ್ 02 ರಂದು ಕೂರ್ಗ್ ಪಬ್ಲಿಕ್ ಶಾಲೆ, ಗೋಣಿಕೊಪ್ಪದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ದ್ವಿತೀಯ ಸೋಪಾನ್ ಪರೀಕ್ಷೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಪೊನ್ನಂಪೇಟೆಯ ಜಂಟಿ ಕಾರ್ಯದರ್ಶಿ ಶ್ರೀಮತಿ ಪುಷ್ಪ ಅಶೋಕ್, ಸ್ಕೌಟ್ ಮಾಸ್ಟರ್ ಸಂಗನಗೌಡ ಎಸ್., ಗೈಡ್ ಕ್ಯಾಪ್ಟನ್ ಕಾವೇರಿ ಬಿ.ಎಸ್. ಹಾಜರಿದ್ದರು ಭಾಗವಹಿಸಿದದರು.



## ಕೋಲಾರ

* ಫೆಬ್ರವರಿ 21 ಮತ್ತು 22 ರಂದು ಕೋಲಾರ ಸ್ಥಳೀಯ ಸಂಸ್ಥೆ ವತಿಯಿಂದ ನಗರದ ಸ್ಕೌಟ್ ಭವನದಲ್ಲಿ ಸ್ಥಳೀಯ ಸಂಸ್ಥೆಯ ರ್‍ಯಾಲಿಯನ್ನು ಆಯೋಜನೆ ಮಾಡಲಾಯಿತು. ಈ ರ್‍ಯಾಲಿಯನ್ನು ಕೋಲಾರ ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀಯುತ ಸುನಿಲ ಎಸ್. ಹೊಸಮನಿರವರು ಉದ್ಘಾಟಿಸಿ ಮಾತನಾಡುತ್ತಾ "ಸ್ಕೌಟ್ಸ್-ಗೈಡ್ಸ್‌ಗಳು ಕಾನೂನನ್ನು ಅರಿತು ತಮ್ಮ ಪರಿವಾರಕ್ಕೆ ತಿಳಿಹೇಳುವ ಕೆಲಸವಾದಾಗ ನಮ್ಮ ಸಮಾಜದಲ್ಲಿ ಮತ್ತಷ್ಟು ಶಾಂತಿಯನ್ನು ಕಾಣಬಹುದು" ಎಂದು ತಿಳಿಸಿದರು. ವಕೀಲರ ಸಂಘದ ಅಧ್ಯಕ್ಷರಾದ ಶ್ರೀಯುತ ಮುನೇಗೌಡ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಫೆಬ್ರವರಿ 22 ರಂದು ಕೋಲಾರ ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಯ ಆಶ್ರಯದಲ್ಲಿ ಸಂಸ್ಥಾಪಕರ ದಿನಾಚರಣೆಯನ್ನು ಕೋಲಾರ ನಗರದ ಮಹಿಳಾ ಸಮಾಜ ಶಾಲೆಯಲ್ಲಿ ಆಯೋಜನೆ ಮಾಡಲಾಗಿತ್ತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಯುತ ಕೆ.ವಿ. ಶಂಕರಪ್ಪ, ಸ್ಥಳೀಯ ಸಂಸ್ಥೆಯ ಕಾರ್ಯಕಾರಿ ಸಮಿತಿ ಅಧ್ಯಕ್ಷೆ ಶ್ರೀಮತಿ ನವೀನಾ, ಜಿಲ್ಲಾ ಪಂಚಾಯತ್‌ನ ಸಹಾಯಕ ಸಾಂಖ್ಯಿಕ ಅಧಿಕಾರಿಯಾದ ಶ್ರೀ ಕೃಷ್ಣಮೂರ್ತಿ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.




* ಫೆಬ್ರವರಿ 22 ರಂದು ಮಾಲೂರು ತಾಲ್ಲೂಕಿನ ತೊರ್ನಹಳ್ಳಿ ಶಾಲೆ, ಗೊಲ್ಲಹಳ್ಳಿ ಶಾಲೆ, ಕೋಲಾರ ಜಾಲಪ್ಪ ಶಾಲೆ, ಶ್ರೀನಿವಾಸಪುರದ ಕೆ.ಪಿ.ಎಸ್. ಶಾಲೆ ಸೋಮಯಾಜಲಹಳ್ಳಿ, ಯಲ್ದೂರಿನ ಪ್ರೀತಿ ವಿದ್ಯಾಮಂದಿರ, ವಿದ್ಯಾ ದೀಪ್ತಿ ಶಾಲೆ, ಹಂಚಾಳ ಗೇಟ್ ಫೀಲ್ಡ್ ಮಾರ್ಷಲ್ ಕಾರಿಯಪ್ಪ ಶಾಲೆ, ಬಂಗಾರಪೇಟೆಯ ಜೈನ್ ಇಂಟರ್ ನ್ಯಾಷನಲ್ ಶಾಲೆ, ಜೈನ್ ಗ್ಲೋಬಾಲ್ ಶಾಲೆ, ಮುಳಬಾಗಿಲು ತಾಲ್ಲೂಕಿನ ನಗವಾರ ಶಾಲೆಗಳಲ್ಲಿ ಸ್ಕೌಟ್ಸ್ ಗೈಡ್ಸ್ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು.

* ಫೆಬ್ರವರಿ 24 ರಂದು ಕೋಲಾರ ನಗರದ ಚಿನ್ಮಯ ಶಾಲಾ ಆವರಣದಲ್ಲಿ ಸ್ಕೌಟ್ಸ್-ಗೈಡ್ಸ್ ಸಂಸ್ಥಾಪಕರ ದಿನಾಚರಣೆಯನ್ನು ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಸುಲೋಚನ, ಸ್ಥಳೀಯ ಸಂಸ್ಥೆ ಪರಿಷತ್ ಸಮಿತಿ ಅಧ್ಯಕ್ಷರಾದ ಶ್ರೀಯುತ ಕಾಡಹಳ್ಳಿ ಶಶಿಕುಮಾರ್, ಗೈಡ್ ಶಿಕ್ಷಕಿ ಶ್ರೀಮತಿ ವರಲಕ್ಷ್ಮೀ, ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಫೆಬ್ರವರಿ 25 ರಂದು ಚುನಾವಣಾ ಜಾಗೃತಿ ಜಾಥಾವನ್ನು ನಗರದ ಪ್ರಮುಖ ಬೀದಿಗಳಲ್ಲಿ ನಡೆಸಲಾಯಿತು. ಕಡ್ಡಾಯವಾಗಿ ಮತದಾನ ಮಾಡುವಂತೆ ಸ್ಕೌಟ್ಸ್ ಗೈಡ್ಸ್‌ಗಳು ಸಾರ್ವಜನಿಕರಿಗೆ ಅರಿವು ಮೂಡಿಸಿದರು.

* ಫೆಬ್ರವರಿ 28 ರಂದು ಮುಳಬಾಗಿಲು ಸ್ಥಳೀಯ ಸಂಸ್ಥೆ ವತಿಯಿಂದ ಸ್ಕೌಟ್ಸ್-ಗೈಡ್ಸ್ ಸಂಸ್ಥಾಪಕರ ದಿನಾಚರಣೆಯನ್ನು ಪಟ್ಟಣದ ಬಳೆ ಚಂಗಪ್ಪ ಶಾಲಾ ಆವರಣದಲ್ಲಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಪಧಾದಿಕಾರಿಗಳು ಉಪಸ್ಥಿತರಿದ್ದರು.

* ಮಾರ್ಚ್ 01ರಂದು ಕೋಲಾರ ತಾಲ್ಲೂಕಿನ ಚಿನ್ಮಯ ಶಾಲೆಯಲ್ಲಿ ಕಬ್ ಮತ್ತು ಬುಲ್‌ಬುಲ್‌ಗಳಿಗೆ ದ್ವಿತೀಯ ಚರಣ್ / ಕೋಮಲ್ ಪಂಖ್ ಪರಿಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು, ಬುಲ್‌ಬುಲ್ ವಿಭಾಗಕ್ಕೆ ನಾಯಕಿಯಾಗಿ ಶ್ರೀಮತಿ ಗೌರಾಬಾಯಿ, ಕಬ್ ವಿಭಾಗಕ್ಕೆ ನಾಯಕರಾಗಿ ಶ್ರೀ ವಿ. ಬಾಬು ಸೇವೆ ಸಲ್ಲಿಸಿದರು.

* ಮಾರ್ಚ್ 03ರಂದು ಫಲ್ಸ್ ಪೋಲಿಯೋ ಕಾರ್ಯಕ್ರಮವನ್ನು ರೋಟರಿ ಸಂಸ್ಥೆಯ ಜೊತೆಗೂಡಿ ಕೋಲಾರ ನಗರದ ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆಯಲ್ಲಿ ಆಚರಣೆ ಮಾಡಿ ಮಕ್ಕಳಿಗೆ ಪೋಲಿಯೋ ಹನಿಗಳನ್ನು ಹಾಕಲಾಯಿತು.

* ಮಾರ್ಚ್ 8 ರಂದು ಮಹಿಳಾ ದಿನಾಚರಣೆಯನ್ನು ಜಿಲ್ಲಾ ಸಂಸ್ಥೆ ಕೋಲಾರ, ರೋಟರಿ ಕೋಲಾರ ನಂದಿನಿ ಮತ್ತು ಮಹಿಳಾ ಸಂರಕ್ಷಣಾ ಸಂಘದ ಸಂಯುಕ್ತ ಆಶ್ರಯದಲ್ಲಿ ಸ್ಕೌಟ್ ಭವನದಲ್ಲಿ ಆಚರಿಸಲಾಯಿತು. ಈ ಸಮಾರಂಭದಲ್ಲಿ ಉತ್ತಮ ಸೇವೆ ಸಲ್ಲಿಸಿದ ಮಹಿಳೆಯರಾದ ಶ್ರೀಮತಿ ಪುಷ್ಪಾವಲ್ಲಿ, ಶ್ರೀಮತಿ ವರಲಕ್ಷ್ಮಿ, ಶ್ರೀಮತಿ ವಿಜಯರವರನ್ನು ಸನ್ಮಾನ ಮಾಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪಧಾದಿಕಾರಿಗಳು ಉಪಸ್ಥಿತರಿದ್ದರು.




* ಮಾರ್ಚ್ 10 ರಂದು ಶ್ರೀಕ್ಷೇತ್ರ ಆವನಿಯಲ್ಲಿ ನಡೆದ ಜಾತ್ರಾ ಮಹೋತ್ಸವದಲ್ಲಿ ಕೋಲಾರ ಜಿಲ್ಲೆಯ ಸರ್ಕಾರಿ ಮಹಿಳಾ ಕಾಲೇಜು, ಮುಳಬಾಗಿಲು ಪ್ರಥಮ ದರ್ಜೆ ಕಾಲೇಜು ಮತ್ತು ಸಾಮ್ರಾಟ್ ರೋವರ್ ಕ್ರೂನ ರೋವರ್ಸ್ ಮತ್ತು ರೇಂಜರ್ಸ್‌ಗಳು ಸೇವೆ ಸಲ್ಲಿಸಿದರು.

## ಕೊಪ್ಪಳ

* ಫೆಬ್ರುವರಿ 22 ರಂದು ಸ್ಕೌಟ್ಸ್ ಸಂಸ್ಥಾಪಕರಾದ ಲಾರ್ಡ್ ಬೇಡನ್ ಪೊವೆಲ್‌ರವರ ಜನ್ಮ ದಿನ ಆಚರಣೆಯನ್ನು ಮಾಡಲಾಯಿತು. ಅಂದು ಬೆಳಗ್ಗೆ 7 ಗಂಟೆಗೆ ಜಿಲ್ಲಾ ಕೇಂದ್ರ ಕಾರ್ಯಾಲಯದಲ್ಲಿ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳೊಂದಿಗೆ ಸರ್ವಧರ್ಮ ಸಮನ್ವಯ ಪ್ರಾರ್ಥನೆಯನ್ನು ಮಾಡಲಾಯಿತು. ನಂತರದಲ್ಲಿ ಶಾಸಕರ ಸರ್ಕಾರಿ ಮಾದರಿ ಶಾಲೆಯ ಆವರಣ



ಮತ್ತು ಜಿಲ್ಲಾ ಕೇಂದ್ರ ಕಛೇರಿಯ ಆವರಣದಲ್ಲಿ ಸ್ವಚ್ಛತಾ ಕಾರ್ಯ ಶ್ರಮದಾನವನ್ನು ಮಾಡಲಾಯಿತು. 9 ಗಂಟೆಗೆ ಲಾರ್ಡ್ ಬೇಡನ್ ಪೊವೆಲ್‌ರವರ ಜನ್ಮ ದಿನ ಆಚರಣೆಯನ್ನು ಕುರಿತು ಜಾಥಾ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಶ್ರೀ ಎಸ್.ಎಸ್ ಬಿರಾದರ್ ಮಾನ್ಯ ಉಪನಿರ್ದೇಶಕರು ವಿಶ್ವ ಶಾಂತಿ ಜಾಥಾ ಕಾರ್ಯಕ್ರಮವನ್ನು ಉದ್ಘಾಟಿಸಿದರು.

* ಲಾರ್ಡ್ ಬೇಡನ್ ಪೊವೆಲ್ ಡೇ ಜನ್ಮ ದಿನಾಚರಣೆ ಅಂಗವಾಗಿ ಶ್ರಮದಾನ ಕಾರ್ಯಕ್ರಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೋವರ್ಸ್ ರೇಂಜರ್ಸ್ ಘಟಕಗಳಿಗೆ ಸೇರಿರುವ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕ ವರ್ಗ ಭಾಗವಹಿಸಿದ್ದರು.

* ಫೆಬ್ರವರಿ 23, 2024 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತಾವರಗೇರಾ ತಾ॥ ಕುಷ್ಟಗಿಯಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಘಟಕಗಳ ಉದ್ಘಾಟನಾ ಕಾರ್ಯಕ್ರಮವನ್ನು ಜರುಗಿಸಲಾಯಿತು. ಶ್ರೀಮತಿ ಅರುಣಾ ವಸ್ತ್ರದ್, ಜಿಲ್ಲಾ ಉಪಾಧ್ಯಕ್ಷರು ಮತ್ತು ಜಿಲ್ಲಾ ಆಯುಕ್ತರು ಗೈಡ್ಸ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಚಳುವಳಿಯ ಕುರಿತು ಮತ್ತು ಕಾರ್ಯಕ್ರಮಗಳ ಕುರಿತು ಪರೀಕ್ಷಾ ಶಿಬಿರಗಳ ಕುರಿತು ಮಾತನಾಡಿದರು. ಶ್ರೀ ಶ್ರೀಕಾಂತ ಮಾಸಗಟ್ಟಿ ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್ಸ್)ರವರು ಸ್ಕೌಟಿಂಗ್ ಗೈಡಿಂಗ್ ಚಳುವಳಿ ಇತಿಹಾಸ ಪರೀಕ್ಷಾ ಶಿಬಿರಗಳು ರಾಜ್ಯಮಟ್ಟ, ರಾಷ್ಟ್ರಮಟ್ಟ ಶಿಬಿರಗಳು ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಶ್ರೀ ಶರೀಫ್ ಹತ್ತಿಮತ್ತೂರು ಎ.ಎಸ್.ಓ.ಸಿ ಕೊಪ್ಪಳರವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲಾ ವಿದ್ಯಾರ್ಥಿಗಳಿಗೆ ಪರೀಕ್ಷೆಗಳ ಕುರಿತು ಚಟುವಟಿಕೆಗಳ ಕುರಿತು ಮಾತನಾಡಿ ಶುಭ ಕೋರಿದರು.




ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಂಶುಪಾಲರು ಮತ್ತು ರೇಂಜರ್ಸ್ ಲೀಡರ್ ಆದ ಶ್ರೀಮತಿ ಅರುಣಾ ಕುಮಾರಿ ಟಿ. ಇವರು ಅಧ್ಯಕ್ಷೀಯ ಮಾತುಗಳನ್ನು ಆಡಿ ನಮ್ಮ ಘಟಕಗಳು ಸಕ್ರಿಯವಾಗಿ ಮುಂದಿನ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತೇವೆಂದು ಜಿಲ್ಲೆಗೆ ಮತ್ತು ರಾಜ್ಯ ಸಂಸ್ಥೆಗೆ ಚಟುವಟಿಕೆಗಳಲ್ಲಿ ಭಾಗವಹಿಸುತ್ತೇವೆಂದು ಹೇಳಿದರು.



## ಮಧುಗಿರಿ

* ಫೆಬ್ರವರಿ 6 ರಂದು ಶ್ರೀ ಸಿದ್ದಾರ್ಥ ಸನಿವಾಸ ಪ್ರೌಢಶಾಲೆ ಸಭಾಂಗಣದಲ್ಲಿ ಒಂದು ದಿನದ ಸ್ಕೌಟ್ಸ್ ಮತ್ತು ಗೈಡ್ಸ್ ಮಾಹಿತಿ ಶಿಬಿರವನ್ನು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ನಡೆಸಲಾಯಿತು. ಈ ಶಿಬಿರದ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ್ ಎಂ.ಆರ್., ಉಪನಿರ್ದೇಶಕರು, ಆಡಳಿತ ಇವರು ವಹಿಸಿದ್ದರು. ಶ್ರೀ ಹನುಮಂತರಾಯಪ್ಪ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾರ್ಯಕ್ರಮ ಉದ್ಘಾಟಿಸಿದರು. ಅತಿಥಿಗಳಾಗಿ ಶ್ರೀ ಹನುಮಂತರಾಯಪ್ಪ ಆರ್.ಎಸ್., ಜಿಲ್ಲಾ ದೈಹಿಕ ಶಿಕ್ಷಣ ಪರೀಕ್ಷಕರು ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು, ಬಿ.ಆರ್.ಸಿ., ಸಿ.ಆರ್.ಪಿ.ಗಳು ಭಾಗವಹಿಸಿದ್ದರು. ಈ ಮಾಹಿತಿ ಶಿಬಿರಕ್ಕೆ ರಾಜ್ಯ ಸಂಸ್ಥೆಯಿಂದ ಶ್ರೀ ಚಿನ್ನಸ್ವಾಮಿ ರೆಡ್ಡಿ, ವಯಸ್ಕ ಸಂಪನ್ಮೂಲ ಆಯುಕ್ತರು, ಬೆಂಗಳೂರು. ಶ್ರೀಮತಿ ಕೆ.ವಿ. ಶಾಮಲಾ ರಾಜ್ಯ ತರಬೇತಿ ಆಯುಕ್ತರು (ಗೈಡ್) ಶ್ರೀ ತಿಮ್ಮರಾಜು ಜಿಲ್ಲಾ ಕಾರ್ಯದರ್ಶಿ ಶ್ರೀ ಕೃಷ್ಣಮೂರ್ತಿ ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್) ಶ್ರೀ ಚಂದ್ರಶೇಖರ್ ಸಂಪನ್ಮೂಲ ವ್ಯಕ್ತಿ ತುಮಕೂರು ಹಾಗೂ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಪದಾಧಿಕಾರಿಗಳು ಭಾಗವಹಿಸಿದ್ದರು.



* ಫೆಬ್ರವರಿ 12 ರಿಂದ 18ರ ವರೆಗೆ ಮದುಗಿರಿ ಜಿಲ್ಲೆಯ ಜಿಲ್ಲಾ ಮಟ್ಟದ ಸ್ಕೌಟ್–ಗೈಡ್, ಕಬ್–ಬುಲ್‌ಬುಲ್ ಮೂಲ ತರಬೇತಿ ಶಿಬಿರವನ್ನು ಕೊರಟಗೆರೆ ತಾಲ್ಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ನಡೆಸಲಾಯಿತು. ಈ ತರಬೇತಿ ಶಿಬಿರ ಉದ್ಘಾಟನಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ನಾಗಣ್ಣ ವಿಶೇಷ ಅಧಿಕಾರಿ ಗೃಹ ಸಚಿವರ ಇಲಾಖೆ ಬೆಂಗಳೂರು ಇವರು ಭಾಗವಹಿಸಿದ್ದರು. ಶ್ರೀ ನಟರಾಜ್, ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಹನುಮಂತರಾಯಪ್ಪ ದೈಹಿಕ ಶಿಕ್ಷಣ ಪರೀವಿಕ್ಷಕರು, ಶ್ರೀ ಓಬಳರಾಜ್ ಸ್ಥಳೀಯ ಸಂಸ್ಥೆ ಅಧ್ಯಕ್ಷರು, ಶ್ರೀಮತಿ ಮಂಜುಳಾ ಸ್ಥಳೀಯ ಸಂಸ್ಥೆ ಉಪಾಧ್ಯಕ್ಷರು ಶ್ರೀ ಎಚ್. ಶಿವಶಂಕರ್, ಶಿಬಿರ ನಾಯಕರು, ಶ್ರೀ ಪ್ರಸನ್ನಕುಮಾರ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಕೊರಟಗೆರೆ 96 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಮಾರ್ಚ್ 17 ರಂದು ಶಿಬಿರದ ಸಮಾರೋಪ ಸಮಾರಂಭ ನಡೆಸಲಾಯಿತು.



ಈ ಶಿಬಿರದಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಓಬಳರಾಜ್, ಅಧ್ಯಕ್ಷತೆ ವಹಿಸಿದ್ದರು. ಶ್ರೀ ಚಿನ್ನಸ್ವಾಮಿ ರೆಡ್ಡಿ, ವಯಸ್ಕರ ಸಂಪನ್ಮೂಲ ಆಯುಕ್ತರು (ಸ್ಕೌಟ್) ಬೆಂಗಳೂರು ಇವರು ಆಗಮಿಸಿ ದಳ ರಚನೆ ಮಾಡುವ ಬಗ್ಗೆ ಮಾತನಾಡಿದರು. ಶ್ರೀ ಶಿವಶಂಕರ್, ಎ.ಎಲ್.ಟಿ. ಸ್ಕೌಟ್ ಶಿವಮೊಗ್ಗ, ಶಿಬಿರದ ನಾಯಕರು (ಸ್ಕೌಟ್) ಇವರು ವರದಿ ವಾಚನ ಮಾಡಿದರು. ಗೈಡ್ ವಿಭಾಗಕ್ಕೆ ನಾಯಕಿಯಾಗಿ ಶ್ರೀಮತಿ ಉಮಾದೇವಿ ಎ.ಎಲ್.ಟಿ. ಗೈಡ್ ಕೋಲಾರ ಜಿಲ್ಲೆ ಶ್ರೀಮತಿ ಗೌರಬಾಯಿ ಎ.ಎಲ್.ಟಿ. ಫ್ಲಾಕ್, ಬುಲ್‌ಬುಲ್ ವಿಭಾಗದ ನಾಯಕಿ ಶ್ರೀ ಬಾಬು, ವಿ., ಎ.ಎಲ್.ಟಿ., ಕಬ್ ವಿಭಾಗದ ನಾಯಕರಾಗಿದ್ದರು. ಸ್ಕೌಟ್ ವಿಭಾಗದ ಎರಡನೇ ತಂಡದ ನಾಯಕರಾಗಿ ಶ್ರೀಕರಿಸಿದ್ದಪ್ಪ, ಎ.ಎಲ್.ಟಿ. (ಸ್ಕೌಟ್) ಕಾರ್ಯನಿರ್ವಹಿಸಿದರು. ಈ ಶಿಬಿರದಲ್ಲಿ ಒಟ್ಟು 96 ಶಿಬಿರಾರ್ಥಿಗಳು ಭಾಗವಹಿಸಿದ್ದರು ಶ್ರೀ ಪ್ರಸನ್ನ ಕುಮಾರ ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ವೀರಕ್ಯಾತಪ್ಪ ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀ ಕರಿಸಿದ್ದಪ್ಪ ಟಿ., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಎಲ್ಲರನ್ನು ವಂದಿಸಿದರು.

* ಫೆಬ್ರವರಿ 22 ರಂದು ಶಿರಾ ಸ್ಥಳೀಯ ಸಂಸ್ಥೆ ವತಿಯಿಂದ ನಗರದ ಸರ್ಕಾರಿ ಉರ್ದು ಪ್ರೌಢ ಶಾಲೆಯಲ್ಲಿ ವಿಶ್ವ ಚಿಂತನ ದಿನಾಚರಣೆ ಅಂಗವಾಗಿ ಸಂಸ್ಥೆಯ ಸಂಸ್ಥಾಪಕರಾದ ಲಾರ್ಡ್ ಬೇಡನ್ ಪೋವೆಲ್‌ರವರ ಹಾಗೂ ಅವರ ಶ್ರೀಮತಿಯುವರಾದ ಓಲೇವ್ ಲೇಡಿಬೇಡನ್ ಪೊವೆಲ್‌ರವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶಾಲಾ ಮುಖ್ಯ ಶಿಕ್ಷಕರಾದ ಶ್ರೀ ಶಿವರಾಜ್, ಅಧ್ಯಕ್ಷತೆ ವಹಿಸಿದ್ದರು ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಕರಿಯಣ್ಣ, ಇ.ಸಿ.ಓ. ಶಿಕ್ಷಣಾಧಿಕಾರಿಗಳ ಕಚೇರಿ ಶಿರಾ ಹಾಗೂ ಸಿ.ಆರ್.ಪಿ,. ಭಾಗವಹಿಸಿದ್ದರು.



* ಪಾವಗಡ ಸ್ಥಳೀಯ ಸಂಸ್ಥೆ ಹಾಗೂ ದಳ ಮಟ್ಟದಲ್ಲಿ ಚಿಂತನಾ ದಿನಾಚರಣೆಯನ್ನು ವಿವಿಧ ಕಾರ್ಯಕ್ರಮಗಳನ್ನು ಮಾಡುವ ಮುಖಾಂತರ ಆಚರಣೆ ಮಾಡಲಾಯಿತು.

* ಕೊರಟಗೆರೆ ಸ್ಥಳೀಯ ಸಂಸ್ಥೆ ವತಿಯಿಂದ ಕೊರಟಗೆರೆ ಪಟ್ಟಣದ ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಲಾರ್ಡ್ ಬೇಡನ್ ಪೋವೆಲ್‌ರವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.

## ಮೈಸೂರು

* ಫೆಬ್ರವರಿ 19 ರಂದು ಶ್ರೀ ಜಯಚಾಮರಾಜೇಂದ್ರ ಸ್ಕೌಟ್ ಮತ್ತು ಗೈಡ್ ಕೇಂದ್ರ ಕಛೇರಿ, ಮೈಸೂರು ಇಲ್ಲಿ ಮೈಸೂರು ತಾಲ್ಲೂಕು ಮತ್ತು ಉತ್ತರ ವಲಯ ಸ್ಥಳೀಯ ಸಂಸ್ಥೆ ಮಟ್ಟದ ರ್‍ಯಾಲಿ ಆಯೋಜಿಸಲಾಗಿತ್ತು. ಈ ರ್‍ಯಾಲಿಯಲ್ಲಿ 350 ಸ್ಕೌಟ್ಸ್, ಗೈಡ್ಸ್, ಕಬ್ಸ್, ಬುಲ್‌ಬುಲ್ಸ್ ಸ್ಕೌಟರ್ಸ್ ಮತ್ತು ಗೈಡರ್ಸ್ ಭಾಗವಹಿಸಿದ್ದರು. ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು, ಮೈಸೂರು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ರ್‍ಯಾಲಿಯನ್ನು ಉದ್ಘಾಟಿಸಿದರು. ಮೈಸೂರು ತಾಲ್ಲೂಕು ಮತ್ತು ಉತ್ತರ ವಲಯ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮುಕ್ತಾಯ ಸಮಾರಂಭದಲ್ಲಿ ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು, ಮುಖ್ಯ ಅತಿಥಿಗಳಾಗಿ ಆಗಮಿಸಿ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಮಕ್ಕಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಿದರು. ಶ್ರೀ ಪುಟ್ಟರಾಜು, ಕಾರ್ಯದರ್ಶಿಗಳು, ಮೈಸೂರು ತಾಲ್ಲೂಕು ವಲಯ ಸ್ಥಳೀಯ ಸಂಸ್ಥೆ, ಶ್ರೀಮತಿ ರಾಜಮ್ಮ, ಕಾರ್ಯದರ್ಶಿಗಳು, ಮೈಸೂರು ಉತ್ತರ ವಲಯ ಸ್ಥಳೀಯ ಸಂಸ್ಥೆ, ಶ್ರೀಮತಿ ಅಮೃತಮ್ಮ, ಜಿಲ್ಲಾ ಆಯುಕ್ತರು (ಕಬ್) ಶ್ರೀ ಅಜಯ್ ಕುಮಾರ್ ಜೈನ್, ಜಿಲ್ಲಾ ಆಯುಕ್ತರು (ವ.ಸಂ), ಶ್ರೀಮತಿ ಶಶಿಕಲಾ, ಜಿಲ್ಲಾ ಆಯುಕ್ತರು (ಬುಲ್‌ಬುಲ್), ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಉಮೇಶ್ ಜಿಲ್ಲಾ ಸ್ಥಾನಿಕ ಆಯುಕ್ತರು ಉತ್ತರ ವಲಯ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



* ಫೆಬ್ರವರಿ 22 ರಂದು ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ಜಿಲ್ಲಾ ಮಟ್ಟದ ರ್‍ಯಾಲಿಯನ್ನು ಆಯೋಜಿಸಲಾಗಿತ್ತು. ಈ ರ್‍ಯಾಲಿಯಲ್ಲಿ 1,000 ಸ್ಕೌಟ್ಸ್-ಗೈಡ್ಸ್, ಕಬ್ಸ್-ಬುಲ್‌ಬುಲ್ಸ್, ಸ್ಕೌಟರ್ಸ್ ಮತ್ತು ಗೈಡರ್ಸ್ ಭಾಗವಹಿಸಿದ್ದರು. ಶ್ರೀಪಾಂಡು, ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಮೈಸೂರು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ರ್‍ಯಾಲಿಯನ್ನು ಉದ್ಘಾಟಿಸಿದರು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು, ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



## ಅಭಿನಂದನೆಗಳು

**ಶ್ರೀಮತಿ ಚಂದ್ರಕಲಾ ಎಂ. ಗೂಗಲ್**

(ಫ್ಲಾಕ್ ಲೀಡರ್) ಇವರಿಗೆ

ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾದ ಸೇವೆಯನ್ನು ಗುರುತಿಸಿ

ಕರುನಾಡು ಸೇವಾ ಟ್ರಸ್ಟ್ ವತಿಯಿಂದ

2024ನೇ ಸಾಲಿನ "ಕರುನಾಡು ಶಿವಯೋಗಿಶ್ರೀ"

ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

* ಫೆಬ್ರವರಿ 22 ರಂದು ಮೈಸೂರು ಜಿಲ್ಲೆ ಶ್ರೀರಾಮಪುರ ಸ್ಥಳೀಯ ಸಂಸ್ಥೆ ಮಟ್ಟದ ರ್‍ಯಾಲಿಯನ್ನು ಎಸ್.ಎಸ್.ಇ.ಟಿ. ಶಾಲೆ, ಗುರೂರು ಇಲ್ಲಿ ಆಯೋಜಿಸಲಾಗಿತ್ತು. ಈ ರ್‍ಯಾಲಿಯಲ್ಲಿ 120 ಸ್ಕೌಟ್ಸ್–ಗೈಡ್ಸ್, ಕಬ್ಸ್–ಬುಲ್‌ಬುಲ್ಸ್ ಸ್ಕೌಟರ್ಸ್ ಮತ್ತು ಗೈಡರ್ಸ್ ಭಾಗವಹಿಸಿದ್ದರು. ಶ್ರೀಮತಿ ಲಕ್ಷ್ಮಿ, ಪ್ರಾಂಶುಪಾಲರು, ಎಸ್.ಎಸ್.ಇ.ಟಿ. ಶಾಲೆ, ಗುರೂರು ಮೈಸೂರುರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ರ್‍ಯಾಲಿಯನ್ನು ಉದ್ಘಾಟಿಸಿದರು. ಶ್ರೀ ಎಂ.ವಿ. ಅಮರನಾಥ್, ಜಿಲ್ಲಾ ಸ್ಥಾನಿಕ ಆಯುಕ್ತರು ಅತಿಥಿಗಳಾಗಿ ಆಗಮಿಸಿದ್ದರು. ಶ್ರೀರಾಮಪುರ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



* ಫೆಬ್ರವರಿ 22 ರಂದು ಮೈಸೂರು ಜಿಲ್ಲೆ ನಂಜನಗೂಡು ಸ್ಥಳೀಯ ಸಂಸ್ಥೆ ಮಟ್ಟದ ರ್‍ಯಾಲಿಯನ್ನು ಹಾಗೂ ಲಾರ್ಡ್ ಬೇಡನ್ ಪೊವೆಲ್ ಮತ್ತು ಲೇಡಿ ಬೇಡನ್ ಪೊವೆಲ್ ದಿನಾಚರಣೆಯನ್ನು ಗುರುಭವನ, ನಂಜನಗೂಡು ಇಲ್ಲಿ ಆಯೋಜಿಸಲಾಗಿತ್ತು. ಈ ರ್‍ಯಾಲಿಯಲ್ಲಿ 153 ಸ್ಕೌಟ್ಸ್–ಗೈಡ್ಸ್, ಕಬ್ಸ್–ಬುಲ್‌ಬುಲ್ಸ್, ಸ್ಕೌಟರ್ಸ್–ಗೈಡರ್ಸ್ ಭಾಗವಹಿಸಿದ್ದರು. ಶ್ರೀ ಕೆ.ಜಿ. ಗೋಪಾಲಕೃಷ್ಣ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್) ಮೈಸೂರುರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ರ್‍ಯಾಲಿಯನ್ನು ಉದ್ಘಾಟಿಸಿದರು. ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಪುಷ್ಪ ಜಹಗೀರ್‌ದಾರ್‌ರವರು ಕಾರ್ಯಕ್ರಮದ ಅಧ್ಯಕದ್ಷತೆ ವಹಿಸಿದ್ದರು. ನಂಜನಗೂಡು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸ್ಕೌಟ್ಸ್, ಗೈಡ್ಸ್‌ಗಳಿಗೆ ಮತ್ತು ಕಬ್ಸ್, ಬುಲ್‌ಬುಲ್ಸ್‌ಗಳಿಗೆ ಸಂದೇಶ ರವಾನೆ, ಪ್ರಾರ್ಥನೆ, ಧ್ವಜಗೀತೆ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು.



* ಜಿಲ್ಲಾ ಸಂಸ್ಥೆ ವತಿಯಿಂದ 2022–23ನೇ ಸಾಲಿನಲ್ಲಿ ರಾಜ್ಯ ಪುರಸ್ಕಾರ ಪ್ರಶಸ್ತಿ ಪಡೆದ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್ ಮತ್ತು



ರೇಂಜರ್ಸ್‌ಗಳಿಗೆ ಪ್ರಶಸ್ತಿ ಪತ್ರ ಪ್ರಧಾನ ಸಮಾರಂಭವನ್ನು ಫೆಬ್ರವರಿ 17ರಂದು ಆಯೋಜಿಸಲಾಗಿತ್ತು. ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಪುಷ್ಪಲತಾ ಜಗನ್ನಾಥ್ ಹಾಗೂ ಶ್ರೀಮತಿ ಅನಿತಾ, ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಕಾಯಕ್ರಮದಲ್ಲಿ ಭಾಗವಹಿಸಿದ್ದರು.

## ರಾಯಚೂರು

* ಫೆಬ್ರವರಿ 22 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಸಂಸ್ಥಾಪಕರ ಮತ್ತು ವಿಶ್ವ ಚಿಂತನಾ ಹಾಗೂ ವಿಶ್ವ ಭ್ರಾತೃತ್ವ ದಿನಾಚರಣೆ ಅಂಗವಾಗಿ ಜಿಲ್ಲಾ ಸ್ಕೌಟ್ ಭವನ, ರಾಯಚೂರು ಇಲ್ಲಿ ಸರ್ವಧರ್ಮ ಪ್ರಾರ್ಥನೆಯನ್ನು ಆಯೋಜನೆ ಮಾಡಲಾಯಿತು. ನಂತರ ಧ್ವಜಾರೋಹಣವನ್ನು ನೆರವೇರಿಸಲಾಯಿತು. ನಗರದ ವಿವಿಧ ವೃತ್ತಗಳ ಮೂಲಕ ಕಾಲ್ನಡಿಗೆ ಜಾಥಾವನ್ನು ಮಾಡಲಾಯಿತು. ಶ್ರೀ ಶಶಿಕಾಂತ್ ಶಿವಾಪೂರೆ ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ರಾಯಚೂರು ಇವರು ಹಸಿರು ನಿಶಾನೆ ತೋರಿಸುವ ಮೂಲಕ ಜಾಥಾವನ್ನು ಉದ್ಘಾಟಿಸಿದರು. ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರುರವರ ಅಧ್ಯಕ್ಷತೆಯಲ್ಲಿ ವೇದಿಕೆ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಶ್ರೀ ಪ್ರಾಣೇಶ್ ಉಪನ್ಯಾಸಕರು ರಾಯಚೂರುರವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು, ಮುಖ್ಯ ಅತಿಥಿಗಳಾಗಿ ಶ್ರೀ ಅಶೋಕ್ ಪಾಟೀಲ್ ಅತ್ತಾನೂರು ಮಾಜಿ ಅಧ್ಯಕ್ಷರು ಲಯನ್ಸ್ ಕ್ಲಬ್ ರಾಯಚೂರು ಶ್ರೀ ಪರಶುರಾಮ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ರಾಯಚೂರು, ಜಿಲ್ಲಾ ಜಂಟಿ ಕಾರ್ಯದರ್ಶಿಗಳು (ಸ್ಕೌ) ಆಗಮಿಸಿದ್ದರು. ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಎನ್. ಶೇಖರ್ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರುರವರು ಎಲ್ಲರನ್ನೂ ಸ್ವಾಗತಿಸಿದರು.



* ಮಾರ್ಚ್ 03 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು, ಸಿಂಧನೂರು ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸರ್ಜಾಪುರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುರುಕುಂದ ತಾಲ್ಲೂಕು, ಸಿಂಧನೂರು ವತಿಯಿಂದ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಸ್ಕೌಟ್–ಗೈಡ್‌ಗಳು ಸ್ವಯಂ ಸೇವಕರಾಗಿ ಸೇವೆಯನ್ನು ಸಲ್ಲಿಸಿದರು. ಇದೇ ಸಂದರ್ಭದಲ್ಲಿ



ಶ್ರೀಮತಿ ವಿದ್ಯಾ ಎ.ಎಲ್.ಟಿ.(ಬಿ). ಶ್ರೀಮತಿ ನಳಿನಾ ಗೈಡ್ ಕ್ಯಾಪ್ಟನ್, ಶ್ರೀಮತಿ ವರಲಕ್ಷ್ಮೀ ಗೈಡ್ ಕ್ಯಾಪ್ಟನ್, ಶ್ರೀ ಅಮರೇಶ್ ಕಬ್ ಮಾಸ್ಟರ್ ಹಾಗೂ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್, ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

* ಮಾರ್ಚ್ 02 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸರ್ಜಾಪುರ ವತಿಯಿಂದ "ಪಲ್ಸ್ ಪೋಲಿಯೋ ಜಾಗೃತಿ ಜಾಥಾವನ್ನು" ಆಯೋಜನೆ ಮಾಡಲಾಯಿತು.



* ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನದಂತೆ ಮಾರ್ಚ್ 06 ರಂದು ಜಿಲ್ಲಾ ಸಂಸ್ಥೆ ರಾಯಚೂರು ಸ್ಥಳೀಯ ಸಂಸ್ಥೆ ಲಿಂಗಸಗೂರು ಹಾಗೂ ಎಲ್ಲಾ ಸ್ಥಳೀಯ ಸಂಸ್ಥೆಗಳ ವತಿಯಿಂದ ಮಾನ್ಯ ಶ್ರೀ ಎಲ್. ಚಂದ್ರಶೇಖರ್ ನಾಯಕ, ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಭಾರತ್ ಸ್ಕೌಟ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರುರವರನ್ನು ಭೇಟಿ ಮಾಡಿ ಸ್ಥಳೀಯ ಸಂಸ್ಥೆ ಲಿಂಗಸುಗೂರು ಕಾರ್ಯಾಲಯಕ್ಕೆ ನಿವೇಶನವನ್ನು ನೀಡುವ ಕುರಿತು ಮನವಿಯನ್ನು ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜು ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀಮತಿ ಮಲ್ಲೇಶ್ವರಿ ಜೂಜಾರೆ, ಎ.ಎಸ್.ಓ.ಸಿ., ರೇಂಜರಿಂಗ್ ವಿಭಾಗ, ಕಲ್ಯಾಣ ಕರ್ನಾಟಕ ಉಸ್ತುವಾರಿ, ಶ್ರೀ ಬಸವರಾಜ ಗದಗಿನ, ಜಿಲ್ಲಾ ಕಾರ್ಯದರ್ಶಿಗಳು ಮುಂತಾದವರು ಉಪಸ್ಥಿತರಿದ್ದರು.



* ಮಾರ್ಚ್ 10 ರಂದು ಪ್ರಜಾಪತಿ ಬ್ರಹ್ಮಕುಮಾರಿ ಈಶ್ವರಿ ವಿದ್ಯಾಲಯ, ಕವಿತಾಳ ಇವರ ವತಿಯಿಂದ ಹಮ್ಮಿಕೊಂಡಂತಹ ಅಮರನಾಥ್ ಶೋಭಾ ಯಾತ್ರೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಸ್ಕಿ, UGHPS WATAGAL ಶಾಲೆ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳು ಬ್ರಹ್ಮಕುಮಾರಿ ವಿದ್ಯಾಲಯ ಮುಖ್ಯಸ್ಥರು ಹಾಜರಿದ್ದರು.

## ಶಿವಮೊಗ್ಗ

* ಶಿವಮೊಗ್ಗ ಜಿಲ್ಲಾ ಸಂಸ್ಥೆ ವತಿಯಿಂದ ನೂತನವಾಗಿ ಆಗಮಿಸಿದ ಜಿಲ್ಲಾಧಿಕಾರಿಯವರಾದ ಮಾನ್ಯ ಶ್ರೀ ಗುರದತ್ತ ನಾರಾಯಣ ಹೆಗಡೆ ಇವರನ್ನು ಶಿವಮೊಗ್ಗ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿ, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್, ಜಿಲ್ಲಾ ಖಜಾಂಚಿ ಶ್ರೀ ಚೂಡಾಮಣಿ ಇ. ಪವಾರ, ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರ್, ಜಂಟಿ ಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪ, ಶಿವಮೊಗ್ಗ ಭೇಟಿ ಮಾಡಿ ಜಿಲ್ಲಾ ಸಂಸ್ಥೆಯ ಅಧ್ಯಕ್ಷತೆ ಸ್ಥಾನವನ್ನು ವಹಿಸಿಕೊಂಡು ಸ್ಕೌಟಿಂಗ್ ಗೈಡಿಂಗ್ ಚಟುವಟಿಕೆ, ಮಕ್ಕಳ ಅಭಿವೃದ್ಧಿಯ ಕೆಲಸ ಕಾರ್ಯದಲ್ಲಿ ತಮ್ಮ ಸಲಹೆ, ಸಹಕಾರ, ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸುವಂತೆ ಸ್ಕಾರ್ಫ್ ಹಾಕುವುದರ ಮೂಲಕ ಜಿಲ್ಲಾ ಸಂಸ್ಥೆ ಹಾಗೂ 7 ಸ್ಥಳೀಯ ಸಂಸ್ಥೆಯ ವತಿಯಿಂದ ಸ್ವಾಗತಿಸಲಾಯಿತು.



* ಬೇಡನ್ ಪಾವೆಲ್ ಹಾಗೂ ಲೇಡಿ ಬೇಡನ್ ಪಾವೆಲ್‌ರವರ ಜನ್ಮ ದಿನಾಚರಣೆ ಅಂಗವಾಗಿ ಬೆಳಿಗ್ಗೆ ಸರ್ವಧರ್ಮ ಪ್ರಾರ್ಥನೆಯನ್ನು ಶ್ರೀಮತಿ ಭಾರತಿ ಡಾಯಸ, ಎ.ಎಸ್.ಓ.ಸಿ.ರವರ ಮುಂದಾಳತ್ವದಲ್ಲಿ ನೆರವೇರಿತು ತದ ನಂತರ ಶಿವಮೊಗ್ಗ ಸಿಟಿಯಲ್ಲಿ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ರ್‍ಯಾಲಿಯ ಉದ್ಘಾಟನೆಯನ್ನು ಹಿರಿಯ ಸ್ಕೌಟರ್ ಜಿಲ್ಲಾ ಜಂಟಿ ಕಾರ್ಯದರ್ಶಿಯವರಾದ ಶ್ರೀ ವೈ.ಆರ್. ವೀರೇಶಪ್ಪರವರು ಹಸಿರು ನಿಶಾನೆ ತೋರಿಸುವುದರ ಮೂಲಕ ಉದ್ಘಾಟಿಸಿ ಎಲ್ಲರಿಗೂ ಶುಭ ಕೋರಿದರು. ಜಿಲ್ಲಾ ಕಾರ್ಯದರ್ಶಿ, ಜಿಲ್ಲಾ ಖಜಾಂಚಿ, ಜಿಲ್ಲಾ ಸಂಪರ್ಕಾಧಿಕಾರಿ, ಜಿಲ್ಲಾ ತರಬೇತಿ ಆಯುಕ್ತರುಗಳು, ಹಿರಿಯ ಸ್ಕೌಟರ್ಸ್-ಗೈಡರ್ಸ್‌ಗಳು, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಹಾಗೂ ಒಟ್ಟು 300 ಸ್ಕೌಟ್ಸ್ ಗೈಡ್ಸ್‌ಗಳು ಹಾಜರಿದ್ದರು.




ನಂತರ ಜಿಲ್ಲಾ ಸ್ಕೌಟ್ ಭವನದಲ್ಲಿ ನಡೆದ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್‌ರವರು ಸ್ಕೌಟ್ಸ್-ಗೈಡ್ಸ್ ಕಬ್-ಬುಲ್‌ಬುಲ್‌ಗಳಿಗೆ ಪ್ರಮಾಣ ಪತ್ರವನ್ನು ವಿತರಿಸಿದರು.

ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರರವರು ಮಾತನಾಡುತ್ತಾ "ಬೇಡನ್ ಪಾವೆಲ್ ಹಾಗೂ ಲೇಡಿ ಬೇಡನ್ ಪೊವೆಲ್‌ರವರು

ಸ್ಕೌಟಿಂಗ್–ಗೈಡಿಂಗನ್ನು ಹುಟ್ಟು ಹಾಕಿ ಅವರು ದೇಶಾದ್ಯಂತ ಪರ್ಯಟನ ಮಾಡಿ ಶ್ರಮಪಟ್ಟು ಈ ಚಳುವಳಿಯನ್ನು ಬೆಳೆಸಿರುತ್ತಾರೆ" ಎಂದು ನುಡಿದರು.

ಸಂಸ್ಥಾಪಕರ ದಿನಾಚರಣೆ ಹಾಗೂ ಜಿಲ್ಲಾ ಪುರಸ್ಕಾರದ ಪ್ರಶಸ್ತಿ ಪ್ರಧಾನ ವಿಷಯವಾಗಿ ಶಿವಮೊಗ್ಗ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ರಾಜೇಶ ಅವಲಕ್ಕಿರವರು ಸವಿಸ್ತಾರವಾಗಿ ತಿಳಿಸಿದರು. ಸ್ವಾಗತವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರ ನೇರವೇರಿಸಿದರು, ವಂದನೆಯನ್ನು ಸ್ಥಾನಿಕ ಆಯುಕ್ತರಾದ ಶ್ರೀ ಕೆ. ರವಿ ರವರು ನೇರವೇರಿಸಿದರು ನಿರೂಪಣೆಯನ್ನು ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಭಾರತಿ ಡಾಯಸ್‌ರವರು ನೇರವೇರಿಸಿದರು.

ಇದೇ ಸಂದರ್ಭದಲ್ಲಿ ತಾಲ್ಲೂಕಿನ ಹಿರಿಯ ಸ್ಕೌಟರ್, ಗೈಡರ್‌ಗಳನ್ನು ಸನ್ಮಾನಿಸಲಾಯಿತು. ಈ ಸಮಾರಂಭದಲ್ಲಿ ಜಿಲ್ಲಾ ಖಜಾಂಚಿ ಶ್ರೀಮತಿ ಚೂಡಾಮಣಿ ಇ. ಪವಾರ, ಜಿಲ್ಲಾ ಸಹಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪ ಮುಂತಾದವರು ಹಾಜರಿದ್ದರು.




* ಜಿಲ್ಲಾ ಮಟ್ಟದ ಹಿಮಾಲಯ ವೃಕ್ಷಮಣಿಧಾರಕರ ಸಮಾವೇಶ 24 ಹಾಗೂ 25 ಫೆಬ್ರವರಿ 2024 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ ನಡೆಯಿತು. ಉದ್ಘಾಟನಾ ಸಮಾರಂಭದಲ್ಲಿ ರಾಜ್ಯ ಸಂಸ್ಥೆಯ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ ಭಟ್ ರವರು ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ಎಸ್.ಓ.ಸಿ.ರವರು ಹೂಕುಂಡಕ್ಕೆ ನೀರು ಹಾಕುವುದರ ಮೂಲಕ ಹಿಮಾಲಯ ವೃಕ್ಷಮಣಿಧಾರಕರ ಸಮಾವೇಶವನ್ನು ಉದ್ಘಾಟಿಸಿ, ಹಿಮಾಲಯ ವೃಕ್ಷಮಣಿಧಾರಕರ ಕರ್ತವ್ಯ ಹಾಗೂ ಜವಾಬ್ದಾರಿಯ ಬಗ್ಗೆ ಮಾತನಾಡಿದರು.

ಈ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿ ರವರು ವಹಿಸಿದ್ದರು. ಪ್ರಾಸ್ತಾವಿಕವಾಗಿ ಜಿಲ್ಲಾ ಜಂಟಿ ಕಾರ್ಯದರ್ಶಿಯವರು ಶ್ರೀ ವೈ.ಆರ್. ವೀರೇಶಪ್ಪರವರು ಮಾತನಾಡಿದರು. ಸ್ವಾಗತವನ್ನು ಜಿಲ್ಲಾ ಕಾರ್ಯದರ್ಶಿಯವರು ನೇರವೇರಿಸಿಕೊಟ್ಟರು, ವಂದನೆಯನ್ನು ಡಿ.ಟಿ.ಸಿ. ಶ್ರೀ ಹೆಚ್. ಶಿವಶಂಕರ್‌ರವರು ನೇರವೇರಿಸಿದರು. ನಿರೂಪಣೆಯನ್ನು ಎ.ಎಸ್.ಓ.ಸಿ. ಶ್ರೀಮತಿ ಭಾರತಿ ಡಾಯಸ್‌ರವರು ನೇರವೇರಿಸಿದರು.




## ಶಿರಸಿ

* ಮಾರ್ಚ್ 19 ರಿಂದ 27ರ ವರೆಗೆ ಶಿರಸಿಯಲ್ಲಿ ನಡೆದ ಶ್ರೀ ಮಾರಿಕಾಂಬಾ ಜಾತ್ರಾ ಸೇವಾ ಶಿಬಿರದಲ್ಲಿ ಶಿರಸಿ, ಕಾರವಾರ, ಹಾವೇರಿ, ಗದಗ, ವಿಜಯಪುರ, ಧಾರವಾಡ, ದಕ್ಷಿಣ ಕನ್ನಡ, ತುಮಕೂರು, ಕೋಲಾರ, ಹಾಸನ, ಶಿವಮೊಗ್ಗ, ದಾವಣಗೆರೆ ಜಿಲ್ಲೆಗಳಿಂದ ಸುಮಾರು 220 ಸ್ಕೌಟ್ಸ್ ಮತ್ತು ಗೈಡ್ಸ್‌ನ ರೋವರ್ಸ್–ರೇಂಜರ್‌ಗಳು ಭಾಗವಹಿಸಿದ್ದರು.

ಈ ಸೇವಾ ಶಿಬಿರವು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ, ಜಿಲ್ಲಾ ಮುಖ್ಯ ಆಯುಕ್ತ ವಿ.ಎಚ್. ಭಟ್ಕಳ ಅವರ ಮಾರ್ಗದರ್ಶನದಲ್ಲಿ ಸಹಾಯಕ ರಾಜ್ಯ ಸಂಘಟನಾ ಆಯುಕ್ತ ವಿರೇಶ್ ಮಾದರ ಅವರ ನೇತೃತ್ವದಲ್ಲಿ ನಡೆಯಿತು.

ಮಾರ್ಚ್ 25ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಶಿಬಿರಕ್ಕೆ ಭೇಟಿ ನೀಡಿ ಸೇವಾ ಕಾರ್ಯದಲ್ಲಿ ತೊಡಗಿರುವ ಎಲ್ಲಾ ರೋವರ್ಸ್–ರೇಂಜರ್ಸ್‌ಗಳಿಗೆ ಶುಭ ಹಾರೈಸಿದರು. ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ ಭಟ್, ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.











## ವಿಜಯಪುರ

* 2023-24ನೇ ಸಾಲಿನ ಜಿಲ್ಲಾ ಮಟ್ಟದ ಸೇವಾ ಶಿಬಿರವನ್ನು ಶ್ರೀ ಪುಂಡಲಿಂಗೇಶ್ವರ ದೇವಸ್ಥಾನ ಗೋಳಸಾರ ತಾ. ಇಂಡಿ ಇಲ್ಲಿ ನಡೆಸಲಾಯಿತು. ಜನವರಿ 25 ರಿಂದ 29 ರ ವರೆಗೆ ನಡೆದ ಈ ಶಿಬಿರದಲ್ಲಿ 107 ರೋವರ್ಸ್ ಮತ್ತು ರೇಂಜರ್ಸ್ ಹಾಗೂ ದಳ ನಾಯಕರು ಜಿಲ್ಲೆಯ ವಿವಿಧ ಕಾಲೇಜುಗಳಿಂದ ಭಾಗವಹಿಸಿದರು. ಶ್ರೀ ಮಠದಲ್ಲಿ ನಡೆದ ಶ್ರೀ ಶ್ರೀ ಶ್ರೀ ಸದ್ಗುರು ಚಿನ್ಮಯ ಮೂರ್ತಿತ್ರಿಮೂರ್ತಿ ಮಹಾ ಶಿವಯೋಗಿಗಳ 30 ನೇ ಜಾತ್ರಾ ಮಹೋತ್ಸವದ ನಿಮಿತ್ಯವಾಗಿ ಆಯೋಜಿಸಲಾದ ದೀಪೋತ್ಸವ, ಉಚಿತ ಸಾಮೂಹಿಕ ವಿವಾಹ, ಉಚಿತ ಆರೋಗ್ಯ ಶಿಬಿರ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸೇವೆ ಸಲ್ಲಿಸಿ ಶ್ರೀಗಳ ಕೃಪೆಗೆ ಪಾತ್ರರಾದರು.



ಜನವರಿ 29 ರಂದು ನಡೆದ ಶಿಬಿರದ ಮುಕ್ತಾಯ ಹಾಗೂ ರೋವರ್ಸ್/ ರೇಂಜರ್ಸ್‌ಗಳಿಗೆ ಅಭಿನಂದನಾ ಸಮಾರಂಭದ ದಿವ್ಯ ಸಾನಿಧ್ಯವನ್ನು ಶ್ರೀ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಸದ್ಗುರು ಅಭಿನವ ಪುಂಡಲಿಂಗೇಶ್ವರ ಮಹಾರಾಜರು ವಹಿಸಿಕೊಂಡಿದ್ದರು. ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶ್ರೀ ಅಭಿನವ ಶಿವಲಿಂಗೇಶ್ವರ ಮಹಾಸ್ವಾಮಿಗಳು, ವಿರಕ್ತಮಠ ರೋಡಗಿ ಇವರು ರೋವರ್ಸ್ ಮತ್ತು ರೇಂಜರ್ಸ್ ಕಾರ್ಯವನ್ನು ಶ್ಲಾಘಿಸಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರರವರು ಮಾತನಾಡಿ ಕಳೆದ 12 ವರ್ಷಗಳಿಂದ ಪ್ರತೀ ವರ್ಷ ಸದ್ಗುರು ಅಭಿನವ ಪುಂಡಲಿಂಗೇಶ್ವರ ಮಹಾರಾಜರು ಸ್ಕೌಟ್ ಮತ್ತು ಗೈಡ್ಸ್‌ಗಳಿಗೆ ಸೇವೆಗೆ ಅವಕಾಶ ನೀಡುತ್ತಿರುವುದು ನಮ್ಮ ಜಿಲ್ಲಾ ಸಂಸ್ಥೆಯ ಪರವಾಗಿ ಶ್ರೀಗಳಿಗೆ ನಮನಗಳನ್ನು ಸಲ್ಲಿಸುತ್ತೇನೆ" ಎಂದರು. ಜಿಲ್ಲಾ ತರಬೇತಿ ಆಯುಕ್ತ ಶ್ರೀ ಎಸ್.ಎಸ್ ಬೊಮ್ಮನಹಳ್ಳಿ, ಶ್ರೀ ರಾಜಶೇಖರ ಖೇಡಗಿ, ಎಸ್.ಜಿ.ವಿ. ವಿಜಯಪುರ ಇವರುಗಳು ಉಪಸ್ಥಿತರಿದ್ದರು. ರೇಂಜರ್ ಕು॥ ಸಾಕ್ಷಿ ಜಮಖಂಡಿ, ಕು॥ ಮುಕ್ತುಂಬಿ ನಾಯ್ಕೋಡಿ ಸೇರಿದಂತೆ ಹಲವಾರು ರೋವರ್ಸ್ / ರೇಂಜರ್ಸ್ ಮಾತನಾಡಿ 5 ದಿನಗಳ ಶಿಬಿರದ ಅನುಭವವನ್ನು ಹಂಚಿಕೊಂಡರು. ರೋವರ್ಸ್ ಮತ್ತು ರೇಂಜರ್ಸ್ ಮಕ್ಕಳ ಸೇವೆಯನ್ನು ಮೆಚ್ಚಿ ಶ್ರೀ ಶ್ರೀ ಶ್ರೀ ಸದ್ಗುರು ಅಭಿನವ ಪುಂಡಲಿಂಗ ಮಹಾರಾಜರು ಶಿಬಿರದಲ್ಲಿ ಭಾಗವಹಿಸಿದ 107 ರೋವರ್ಸ್/ ರೇಂಜರ್ಸ್ ಮಕ್ಕಳಿಗೆ ಶಾಲು ಹೊದಿಸಿ ಸನ್ಮಾನಿಸಿ ಆಶೀರ್ವದಿಸಿದರು. ಸಮಾರಂಭವನ್ನು ಸ್ಕೌಟ್ ಮಾಸ್ಟರ್ ಶ್ರೀ ರವೀಂದ್ರ ಆಲೂರರವರು ನಿರೂಪಣೆ ಮಾಡಿದರು.



* ಜನವರಿ 30 ರಂದು ಮಾತಾ ಭಾಗೀರಥಿ ಶಿಕ್ಷಣ ಸಂಸ್ಥೆ ಹಾಗೂ ಸಮಾಜ ಕಲ್ಯಾಣ ಇಲಾಖೆ, ಇಂಡಿರವರ ಸಹಯೋಗದಲ್ಲಿ ಸುಕ್ಷೇತ್ರ ಗೋಳಸಾರದಲ್ಲಿ ಜಿಲ್ಲಾ ಮಟ್ಟದಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಮಕ್ಕಳಿಂದ ಹುತಾತ್ಮ ದಿನಾಚರಣೆ ಪ್ರಯುಕ್ತವಾಗಿ ಸರ್ವಧರ್ಮ ಪ್ರಾರ್ಥನೆಯನ್ನು ಮಾಡಲಾಯಿತು. ಕಾರ್ಯಕ್ರಮದಲ್ಲಿ ವಿವಿಧ ಕಾಲೇಜುಗಳ ರೋವರ್ಸ್ ಮತ್ತು ರೇಂಜರ್ಸ್ ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ವಿಜಯಕುಮಾರ ಮಠಪತಿ, ಶ್ರೀಮತಿ ಶ್ವೇತಾ ಘಂಟಿ, ಶ್ರೀಮತಿ ಮಲ್ಲಮ್ಮ ಎಂಟಮಾನ, ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರೀ ರಾಜಶೇಖರ ಖೇಡಗಿ, ಎಸ್.ಜಿ.ವಿ. ವಿಜಯಪುರ ಇವರು ನಿರೂಪಣೆ ಮಾಡಿದರು.

* ಫೆಬ್ರವರಿ 17 ರಿಂದ 19ರ ವರೆಗೆ ವಾಸಂತಿಬಾಯಿ ಜಿಗಜಿನಿ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಹಾಗೂ ಶಿಬಿರ ಕೇಂದ್ರ, ಬುರಣಾಪುರ, ತಾ.ಜಿ. ವಿಜಯಪುರ ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ತೃತೀಯ ಸೋಪಾನ (ಜಿಲ್ಲಾ ಪುರಸ್ಕಾರ) ಪರೀಕ್ಷಾ ಶಿಬಿರವನ್ನು ನಡೆಸಲಾಯಿತು. ಶಿಬಿರದಲ್ಲಿ ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಜಗದೀಶ ಬೋಳಸೂರ, ಎ.ಎಲ್.ಟಿ (ಸ್ಕೌಟ್) ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ. ಪಾರ್ವತಿ ಎಂ. ಪೂಜಾರಿ, ಪ್ರೀ-ಎ.ಎಲ್.ಟಿ (ಗೈ)ರವರು ಶಿಬಿರವನ್ನು ಮುನ್ನಡೆಸಿದರು. ಜಿಲ್ಲೆಯ ವಿವಿಧ ಶಾಲೆಗಳಿಂದ 195 ಸ್ಕೌಟ್ಸ್ ಮತ್ತು 178 ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. ಮೂರು ದಿನಗಳ ಕಾಲ ನಡೆದ ಶಿಬಿರ ಫೆಬ್ರವರಿ 19 ರಂದು ಮುಕ್ತಾಯಗೊಂಡಿತು. ಶಿಬಿರದ ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಸಿದ್ದಣ್ಣ ಎಂ. ಸಕ್ರೀರವರು ವಹಿಸಿದ್ದರು. ಅತಿಥಿಗಳಾಗಿ ಶ್ರೀಮತಿ. ವಿದ್ಯಾವತಿ ಅಂಕಲಗಿ, ಜಿಲ್ಲಾ ಆಯುಕ್ತರು (ಗೈಡ್), ಶ್ರೀಮತಿ ಡಿ.ಎಲ್. ಪಿಂಜಾರ್, ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀ ಎಸ್.ಎಸ್. ಬೊಮ್ಮನಹಳ್ಳಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು. ಎರಡೂ ಶಿಬಿರದ ನಾಯಕರು ಶಿಬಿರದ ವರದಿಯನ್ನು ಪ್ರಸ್ತಾಪಿಸಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಶಿಬಿರದ ಅನುಭವವನ್ನು ಹಂಚಿಕೊಂಡರು. ಕಾರ್ಯಕ್ರಮವನ್ನು ಶ್ರೀ ಎಸ್.ಜಿ.ವಿ. ರಾಜಶೇಖರ ಖೇಡಗಿರವರು ನೆರವೇರಿಸಿದರು.



* 2022-23ನೇ ಸಾಲಿನ ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ರಾಜ್ಯ ಪುರಸ್ಕಾರ ಪ್ರಮಾಣ ಪತ್ರ ವಿತರಣಾ ಸಮಾರಂಭವನ್ನು ಫೆಬ್ರವರಿ 19 ರಂದು ವಾಸಂತಿಬಾಯಿ ಜಿಗಜಿನಿ ಜಿಲ್ಲಾ ತರಬೇತಿ ಹಾಗೂ ಶಿಬಿರ ಕೇಂದ್ರ, ಬುರಣಾಪುರ, ತಾ.ಜಿ. ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರರವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ಕೌಟ್-ಗೈಡ್ ಧ್ಯೇಯೋದ್ಧೇಶಗಳ ಕುರಿತು ವಿವರಿಸುತ್ತಾ ಜಿಲ್ಲಾ ಸಂಸ್ಥೆ ನಡೆದುಬಂದ ಹೆಜ್ಜೆಗಳನ್ನು ಗುರುತಿಸಿದರು. ಮುಖ್ಯ ಅತಿಥಿಗಳಾಗಿ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ಟಿ. ಭೂಬಾಲನ್, ಐ.ಎ.ಎಸ್.ರವರು ಆಗಮಿಸಿದ್ದರು. ಜಿಲ್ಲೆಯ 134 ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್, ರಾಜ್ಯ ಪುರಸ್ಕಾರ ಪಡೆದ ಮಕ್ಕಳಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ



ಟಿ. ಭೂಬಾಲನ್‌ರವರು "ನಾನು ರಾಷ್ಟ್ರಪತಿ ಸ್ಕೌಟ್" ಎಂದು ತಮ್ಮ ಸ್ಕೌಟ್–ಗೈಡ್ ಅನುಭವವನ್ನು ಹಂಚಿಕೊಂಡರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಸಿದ್ದಣ್ಣ ಎಂ. ಸಕ್ರೀರವರು ಜಿಲ್ಲಾ ತರಬೇತಿ ಕೇಂದ್ರಕ್ಕೆ ಮೂಲ ಸೌಕರ್ಯ ಕಲ್ಪಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.ಈ ಸಂದರ್ಭದಲ್ಲಿ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ವಿದ್ಯಾವತಿ ಅಂಕಲಗಿ, ಜಿಲ್ಲಾ ಕೋಶಾಧ್ಯಕ್ಷರಾದ ಶ್ರೀ ಸಹಜಾನಂದದಂಧರಗಿ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ ಎಸ್‌ಕುಂಬಾರ, ಜಿಲ್ಲಾ ಪದಾಧಿಕಾರಿಗಳು ಮತ್ತುಗ್ರಾಮ ಪಂಚಾಯತ್ ಪದಾಧಿಕಾರಿಗಳು ಮುಂತಾದವರು ಉಪಸ್ಥಿತರಿದ್ದರು.

* ಫೆಬ್ರವರಿ 20 ರಿಂದ 22ರ ವರೆಗೆ ವಾಸಂತಿಬಾಯಿ ಜಿಗಜಿನಿ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಹಾಗೂ ಶಿಬಿರ ಕೇಂದ್ರ ಬುರಣಾಪುರ, ತಾ.ಜಿ. ವಿಜಯಪುರ ಇಲ್ಲಿ ಜಿಲ್ಲೆಯ ರೋವರ್ಸ್ ಮತ್ತು ರೇಂಜರ್ಸ್ ಮಕ್ಕಳಿಗೆ 2023–24ನೇ ಸಾಲಿನ ನಿಪುಣ್ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದಲ್ಲಿ ರೋವರ್ ವಿಭಾಗದ ನಾಯಕರಾಗಿ ಡಾ. ಅನೀಲ ನಾಯಕ್ ಹಾಗೂ ರೇಂಜರ್ ವಿಭಾಗದ ನಾಯಕಿಯಾಗಿ ಡಾ. ಉಷಾದೇವಿ ಹಿರೇಮಠರವರು ಶಿಬಿರವನ್ನು ಮುನ್ನಡೆಸಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ದಿನಾಚರಣೆಯನ್ನು ಸಂಸ್ಥಾಪಕರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಆಚರಿಸಲಾಯಿತು. ಜಿಲ್ಲಾ ಅಧ್ಯಕ್ಷರಾದಡಾ. ಸತೀಶ ಜಿಗಜಿನ್ನಿರವರು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಪ್ರಾಸ್ಥಾವಿಕವಾಗಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರ್‌ರವರು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ಜೀವನ ಹಾಗೂ ಸಾಧನೆಯನ್ನು ವಿವರಿಸಿದರು. ಶಿಬಿರದ ಸಮಾರೋಪ ಸಮಾರಂಭವನ್ನು ಫೆಬ್ರವರಿ 22 ರಂದು ನಡೆಸಲಾಯಿತು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಅಧ್ಯಕ್ಷರಾದ ಡಾ. ಸತೀಶ ಜಿಗಜಿನ್ನಿರವರು ವಹಿಸಿಕೊಂಡು ಮಾತನಾಡಿ "ರೋವರ್ಸ್ ಮತ್ತು ರೇಂಜರ್ಸ್ ಮಕ್ಕಳ ಧ್ಯೇಯ ವಾಕ್ಯ ಸೇವೆ ಎಂಬುದಾಗಿದ್ದು, ತಾವೆಲ್ಲ ನಿರಂತರವಾಗಿ ದೇಶದ ಸೇವೆ ಮತ್ತು ಸಮಾಜದ ಸೇವೆ ಮಾಡುತ್ತ ಸದೃಢ ಸಮಾಜ ನಿರ್ಮಿಸಲು ಮುಂದಾಗಬೇಕು" ಎಂದು ಮಾರ್ಗದರ್ಶನ ನೀಡಿದರು. ಜಿಲ್ಲಾ ಕೋಶಾಧ್ಯಕ್ಷರಾದ ಶ್ರೀ ಸಹಜಾನಂದ ದಂಧರಗಿರವರು ಮಾತನಾಡಿ "ಶಿಸ್ತು, ಸಂಯಮತೆ, ದೇಶಪ್ರೇಮ ಇವು ಸ್ಕೌಟ್–ಗೈಡ್ ನಮಗೆ ಕಲಿಸುತ್ತದೆ. ನಾವು ಶಿಸ್ತಿನಿಂದ ಜೀವನ ಸಾಗಿಸಬೇಕು" ಎಂದುಕರೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರ್, ರೋವರ್ ಲೀಡರ್ಸ್ ಡಾ. ಅಶೋಕ ಜಾಧವ, ಡಾ. ಅನೀಲ ನಾಯಕ, ರೇಂಜರ್ ಲೀಡರ್ ಡಾ. ಉಷಾದೇವಿ ಹಿರೇಮಠ ಮುಂತಾದವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಕ್ವಾರ್ಟರ್ ಮಾಸ್ಟರ್ ಶ್ರೀ ಎ.ಕೆ. ಮುಲ್ಲಾರವರ ನಿರಂತರ ಸೇವೆಗೆ ಜಿಲ್ಲಾ ಸಂಸ್ಥೆಯಿಂದ ಸನ್ಮಾನಿಸಿ ಅಭಿನಂದನೆ ಸಲ್ಲಿಸಲಾಯಿತು. ಜಿಲ್ಲಾ ಸಂಘಟಕರಾದ ಶ್ರೀ ರಾಜಶೇಖರ ಖೇಡಗಿರವರು ಸರ್ವರನ್ನೂ ಸ್ವಾಗತಿಸಿ ವಂಧಿಸಿದರು.



## ನಮ್ಮ ಸ್ಕೌಟ್; ನಮ್ಮ ಗೈಡ್

– ಡಾ. ಎಫ್.ಡಿ. ಗಡ್ಡಿಗೌಡರ
ಸಾಹಿತಿಗಳು ಮತ್ತು ವಿಮರ್ಶಕರು, ಬೈಲಹೊಂಗಲ

ನಮ್ಮ ಸ್ಕೌಟ್ ನಮ್ಮ ಗೈಡ್
ಭಾರತಾಂಬೆಯ ಹೆಮ್ಮೆಯು
ಮುಂದೆ ಮುಂದೆ ಮತ್ತೆ ಮುಂದೆ
ಕನಸು ಹೊತ್ತು ಸಾಗಿದೆ ॥ಪಲ್ಲವಿ॥

ಎಲ್ಲರನ್ನು ಒಂದು ಮಾಡಿ
ದೇಶ ಪ್ರೇಮ ಬೆಳೆಸಿದೆ ॥ಅನುಪಲ್ಲವಿ॥

ಜಾತಿ ಮತದ ಭೇದ ತೊರೆದು
ವರ್ಣ ವರ್ಗ ಭಾವ ಅಳಿದು
ಶೋಷಣೆ ಎಲ್ಲ ಮೆಟ್ಟಿ ನಿಂತು
ಪ್ರೇಮ ಒಂದೇ ಬಯಸಿದೆ.
ಮಕ್ಕಳೆದೆಯ ಮನಸ್ಸಿನಲ್ಲಿ
ದೇಶ ಪ್ರೇಮ ತುಂಬಿ
ಶಿಸ್ತು ಸಂಯಮ ಬಾಳ್ವೆ ಕಲಿಸಿ
ಮುಂದೆ ಮುಂದೆ ನಡೆಸಿದೆ ॥ಪಲ್ಲವಿ॥

ನೀಲಿ ಬಣ್ಣದ ವಸ್ತ್ರ ಸಂಹಿತೆ
ತೆರೆದ ಮನಸ್ಸಿನ ವಿಶಾಲತೆ
ಎದೆಯ ಬಿಲ್ಲೆ, ಬೂದು ಬಣ್ಣ
ಕೊರಳ ಪಟ್ಟಿಗೆ ಶೋಭಿತೆ
ಸೊಂಟ ಪಟ್ಟಿ ಟೊಂಕ ಕಟ್ಟಿ
ನ್ಯಾಯ ನೀತಿ ತತ್ವ ಕಲಿಸಿ
ನಿಪುಣ ಪರೀಕ್ಷೆಗೆ ಸಿದ್ದಗೊಳಿಸಿ
ಗೆಲ್ಲುವ ಬಲವ ತುಂಬಿದೆ ॥ಪಲ್ಲವಿ॥

ನನ್ನದು ಎಂಬ ಭಾವ ಬಿಡಿಸಿ
ಎಲ್ಲ ಎಲ್ಲರ ಜೊತೆಗೆ ಬೆರೆಸಿ
ಚಾರಣ ಶಿಬಿರ ಸಾಹಸ ಮಾಡಿಸಿ
ಪ್ರಕೃತಿ ಪ್ರೇಮ ಬೆಳೆಸಿದೆ
ದೇಶ ಪ್ರಮೇದ ಕಿಚ್ಚು ಹಚ್ಚಿಸಿ
ಕಾಯಕದಲ್ಲಿ ದೇವರ ಮೆಚ್ಚಿಸಿ
ಸೇವಾ ಭಾವನೆ ನಿತ್ಯ ಮೂಡಿಸಿ
ಶಾಂತಿ ಮಂತ್ರವ ಕಲಿಸಿದೆ ॥ಪಲ್ಲವಿ॥

## ಎಪ್ರಿಲ್ 2024ರ ಮಾಹೆಯ ಮಕ್ಕಳ ಮತ್ತು ವಯಸ್ಕ ನಾಯಕರ ಕಾರ್ಯಕ್ರಮ ಮತ್ತು ಚಟುವಟಿಕೆಗಳು

1) ಡಾ॥ ಅಂಬೇಡ್ಕರ್ ಜನ್ಮ ದಿನಾಚರಣೆಯ ಆಚರಣೆಯನ್ನು ದಿನಾಂಕ: 14–04–2024 ರಂದು ಎಲ್ಲಾ ಹಂತಗಳಲ್ಲಿ ನಿರ್ವಹಿಸುವುದು.

2) ಬೇಸಿಗೆ ಶಿಬಿರ: ಎಲ್ಲಾ ದಳಹಂತಗಳಲ್ಲಿ ನಿರ್ವಹಿಸುವುದು.

3) ಓ.ವೈ.ಎಂ.ಎಸ್: ನೊಂದಾವಣಿ ಪ್ರಕ್ರಿಯೆ ಮುಂದುವರೆಯುವುದು

4) ಸ್ಕೌಟ್ಸ್–ಗೈಡ್ಸ್ ಹಾಗೂ ರೋವರ್ಸ್–ರೇಂಜರ್ಸ್‌ಗಳಿಗೆ ಜಿಲ್ಲಾ ಮಟ್ಟದ ತೃತೀಯ ಸೋಪಾನ ಮತ್ತು ನಿಪುಣ್ ಪರೀಕ್ಷೆಗಳನ್ನು ನಡೆಸುವುದು.

5) ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ಪರೀಕ್ಷಾ ಶಿಬಿರಗಳು – ಜಿಲ್ಲಾ ಮಟ್ಟದಲ್ಲಿ ನಿರ್ವಹಣೆ.

6) 2024–25ನೇ ಸಾಲಿನ ವಾರ್ಷಿಕ ಯೋಜನೆ ಪೂರ್ವ ಸಿದ್ದತಾ ಸಭೆಗಳು.

7) ಸ್ಥಳೀಯ ಮತ್ತು ಜಿಲ್ಲಾ ಮಟ್ಟದಲ್ಲಿ ಸೇವಾ ಶಿಬಿರಗಳ ಸಂಘಟನೆ ನಡೆಸುವುದು.

8) ವಿಶ್ವ ಆರೋಗ್ಯ ದಿನಾಚರಣೆಯನ್ನು (World Health Day) ದಿನಾಂಕ: 07.04.2024 ರಂದು ಎಲ್ಲಾ ಹಂತಗಳಲ್ಲಿ ನಿರ್ವಹಿಸುವುದು.

9) ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳ ಚಾರ್ಟರ್ – ವಾರೆಂಟ್ ಹೊಂದದೇ ಇರುವವರ ಅರ್ಜಿಗಳನ್ನು ರಾಜ್ಯ ಸಂಸ್ಥೆಗೆ ಕಳುಹಿಸುವುದು.

10) 5, 10, 15, 20, 25 ವರ್ಷಗಳು ಸೇವೆ ಸಲ್ಲಿಸಿದವರುಗಳ ಸೇವಾ ವಿವರಗಳನ್ನು ಅವರುಗಳು ಸೇವಾಪದಕಗಳನ್ನು ಹೊಂದುವಲ್ಲಿ ಅರ್ಜಿಗಳನ್ನು ಸಲ್ಲಿಸುವುದು.

## ವಿವಿಧ ಜಿಲ್ಲೆಗಳಲ್ಲಿ ನಡೆದ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ ಸ್ಕೌಟ್ಸ್–ಗೈಡ್ಸ್, ಕಬ್ಸ್–ಬುಲ್‌ಬುಲ್ಸ್‌ಗಳು


ಯಾದಗಿರಿ


ರಾಯಚೂರು


ಬಳ್ಳಾರಿ



ದಕ್ಷಿಣ ಕನ್ನಡ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಎನ್.ಆರ್.ಚೌಕ, ಬೆಂಗಳೂರು-560 002



## ಬಿಬಿಎಂಪಿ 24/7 ಉಚಿತ ಸಹಾಯವಾಣಿ 1533

(ಮೊದಲಿದ್ದ ಸಂಖ್ಯೆ 1912)

**Press 1** ಕೋವಿಡ್-19 ಸಹಾಯವಾಣಿ

**Press 2** ಬಿಬಿಎಂಪಿ ಕುಂದುಕೊರತೆ

## ಬೆಂಗಳೂರಿನ ನಾಗರಿಕ ಬಂಧುಗಳೆ,

ಸಾರ್ವಜನಿಕ ಕುಂದುಕೊರತೆಗಳ ನಿವಾರಣೆ ಈಗ ದೂರವಾಣಿ ಕರೆಯಷ್ಟು ಸರಳ-ಸುಲಭ. ಕೆಳಗೆ ತಿಳಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಸಹಾಯ ಅಥವಾ ದೂರುಗಳ ಕ್ಷಿಪ್ರ ಪರಿಹಾರಕ್ಕಾಗಿ ಬಿಬಿಎಂಪಿ 24/7 ಉಚಿತ ಸಹಾಯವಾಣಿ ಸಂಖ್ಯೆ: 1533ಕ್ಕೆ ಕರೆಮಾಡಿ.

- ಕೋವಿಡ್ ಪರೀಕ್ಷೆ
- ಮನೆಯಲ್ಲೆ ಪ್ರತ್ಯೇಕವಾಗಿರುವುದು
- ಕೋವಿಡ್ ಆರೈಕೆ ಕೇಂದ್ರ
- ಆಸ್ಪತ್ರೆ
- ಲಸಿಕೆ
- ಘನತ್ಯಾಜ್ಯ ನಿರ್ವಹಣೆ
- ರಸ್ತೆ ನಿರ್ವಹಣೆ
- ಒಳಚರಂಡಿಗಳು
- ರಸ್ತೆಗುಂಡಿ ದೂರುಗಳು
- ಬೀದಿ ದೀಪಗಳ
- ಕೀಟ ನಿಯಂತ್ರಣ
- ಪಶುಸಂಗೋಪನೆ ಕಲ್ಯಾಣ
- ಅರಣ್ಯ ಮತ್ತು ತೋಟಗಾರಿಕೆ
- ಚಿತಾಗಾರ
- ಆಸ್ತಿ ತೆರಿಗೆ ಸಮಸ್ಯೆಗಳು
- ವ್ಯಾಪಾರ ಪರವಾನಗಿ
- ಜನನ/ಮರಣ/ಖಾತಾ ಪ್ರಮಾಣಪತ್ರಗಳು
- ಕಟ್ಟಡ ನಕ್ಷೆ ಅನುಮೋದನೆ

**ರಾಕೇಶ್ ಸಿಂಗ್,** ಭಾ.ಆ.ಸೇ.
ಆಡಳಿತಗಾರರು, ಬಿಬಿಎಂಪಿ

ಮಾಸ್ಕ್ ಧರಿಸಿ | ಸುರಕ್ಷಿತವಾಗಿರಿ | ಆರೋಗ್ಯದಿಂದಿರಿ

**ತುಷಾರ್ ಗಿರಿನಾಥ್,** ಭಾ.ಆ.ಸೇ.
ಮುಖ್ಯ ಆಯುಕ್ತರು, ಬಿಬಿಎಂಪಿ

# ಶ್ರದ್ಧಾಂಜಲಿ



## ಶ್ರೀಮತಿ ನಾಗಮ್ಮ ಕೇಶವಮೂರ್ತಿ

ಕರ್ನಾಟಕ ಸರ್ಕಾರದ ಮಾಜಿ ಸಚಿವರು ಹಾಗೂ ದಾವಣಗೆರೆ ಜಿಲ್ಲೆಯ ಮಾಜಿ ಜಿಲ್ಲಾ ಗೈಡ್ಸ್ ಆಯುಕ್ತರು ಹಾಗೂ ಜಿಲ್ಲೆ ಮತ್ತು ರಾಜ್ಯ ಸಂಸ್ಥೆ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ.

ಮಾರ್ಚ್ 16, 2024 ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು. ಇವರಿಗೆ 90 ವರ್ಷ ವಯಸ್ಸಾಗಿತ್ತು.

ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ದಾವಣಗೆರೆ ಜಿಲ್ಲೆ ಮಾಯಕೊಂಡ ವಿಧಾನಸಭಾ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿ, ಎರಡು ಬಾರಿ ಮಂತ್ರಿಯಾಗಿ, ಒಮ್ಮೆ ಉಪ ಸ್ಪೀಕರ್‌ಆಗಿ ಕಾರ್ಯನಿರ್ವಹಿಸಿದ್ದಾರೆ.

ಇವರು ತಮ್ಮ ಪುತ್ರ ಡಾ॥ ಸಿ.ಕೆ. ಜಯಂತ್ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



ಜಿಲ್ಲಾ ಸಂಸ್ಥೆ ಬಾಗಲಕೋಟೆಯ ಜಿಲ್ಲಾ ಕಾರ್ಯದರ್ಶಿಗಳಾದ
ಶ್ರೀ ಎಸ್.ಎಸ್. ದಳವಾಯಿ ರವರ ಮಾತೃಶ್ರೀರವರಾದ
**ಶ್ರೀಮತಿ ಶಾಂತವ್ವ ಸಿದ್ದಪ್ಪ ದಳವಾಯಿ ರವರು**
ಮಾರ್ಚ್ 24, 2024ರಂದು ದೈವಾದೀನರಾದರು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ



ಮಾರ್ಚ್ 16ರಂದು ಮೈಸೂರಿನಲ್ಲಿ ನಡೆದ 'ಮೈಸೂರು ವಿಭಾಗ ಮಟ್ಟದ ರೋವರ್ಸ್–ರೇಂಜರ್ಸ್ ಮೀಟ್ 2024 ಹಾಗೂ ಸುಸ್ಥಿರ ಅಭಿವೃದ್ಧಿ ಯೋಜನೆಗಳ ಬಗ್ಗೆ ಕಿರು ನಾಟಕ ಸ್ಪರ್ಧೆ' ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಡಾ. ವಿಜಯಲಕ್ಷ್ಮಿ, ಎ.ಎಚ್.ಎಂ., ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶ್ರೀ ರಾಮಕೃಷ್ಣರಾವ್, ಸಂಪನ್ಮೂಲ ವ್ಯಕ್ತಿ, ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಗುಂಡಪ್ಪ ಗೌಡ, ಗೌರವ ಅಧ್ಯಕ್ಷರು, ವಿದ್ಯಾವರ್ಧಕ ಸಂಘ, ಮೈಸೂರು, ಜಿಲ್ಲಾ ಪದಾಧಿಕಾರಿಗಳಾದ ಡಾ. ಕೆ.ಬಿ. ಗುರುಮೂರ್ತಿ, ಶ್ರೀ ಅಬ್ದುಲ್ ಜಮೀಲ್, ಎ.ಎಸ್.ಓ.ಸಿ, ಶ್ರೀಮತಿ ಮಲ್ಲೇಶ್ವರಿ ಜುಜಾರೆ ಇತರರು ಚಿತ್ರದಲ್ಲಿದ್ದಾರೆ.



ಮಾರ್ಚ್ 15 ರಂದು ಚಿತ್ರದುರ್ಗ ಜಿಲ್ಲಾ ಸಂಸ್ಥೆಯ ನೂತನ ಕಟ್ಟಡದ ಉದ್ಘಾಟನೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳಾದ ಶ್ರೀ ಬಿ.ಎ. ಲಿಂಗಾರೆಡ್ಡಿ, ಶ್ರೀ ಎಸ್. ನಾಗಭೂಷಣ್, ಶ್ರೀ ಪರಮೇಶ್ವರಪ್ಪ, ಡಾ. ರಹಮತ್ ಉಲ್ಲ, ಶ್ರೀ ಜಿ.ಎಸ್. ಉಜ್ಜನಪ್ಪ, ಶ್ರೀಮತಿ ಸವಿತಾ ಶಿವಕುಮಾರ್, ಶ್ರೀ ಅನ್ವರ್ ಪಾಷ, ಶ್ರೀ ವಿ.ಎಲ್. ಪ್ರಶಾಂತ್ ಇತರರು ಉಪಸ್ಥಿತರಿದ್ದರು.



ಮಾರ್ಚ್ 19 ರಿಂದ 27ರ ವರೆಗೆ ಶಿರಸಿಯಲ್ಲಿ ನಡೆದ ಶ್ರೀ ಮಾರಿಕಾಂಬ ಜಾತ್ರಾಮಹೋತ್ಸವದ ಸೇವಾ ಶಿಬಿರದ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭೇಟಿ ನೀಡಿ ರೋವರ್ಸ್–ರೇಂಜರ್ಸ್‌ಗಳಿಗೆ ಶುಭಹಾರೈಸಿದರು. ಈ ಸಂಧರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತ ಶ್ರೀ ವಿ.ಎಚ್. ಭಟ್ಕಳ್, ರಾಜ್ಯ ಸಂಘಟನಾ ಆಯುಕ್ತ ಶ್ರೀ ಎಂ. ಪ್ರಭಾಕರ್‌ಭಟ್, ಶ್ರೀ ಟಿ.ಕೆ. ನಾಯ್ಕ, ಶ್ರೀ ಹರ್ಷಪ್ರಭು, ಶ್ರೀ ಕಿರಣ್ ಫರ್ನಾಂಡಿಸ್, ಶ್ರೀ ವಿರೇಶ್ ಮಾದರ್, ಶ್ರೀ ಬಿ.ಎನ್. ವಿನಯಕುಮಾರ್, ಶ್ರೀ ಜಶ್ವಂತ್ ಕುಮಾರ್ ಹಾಗು ಇತರರು ಭಾಗವಹಿಸಿದ್ದರು.

RNI No: 13348/1959. Title Code: KARBIL00285. MAG No. MAG(3)/NPP/184/2021-2022
Postal Regd. No. KA/BGGPO/2580/2021-23. Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 36)

SHAHEEN
GROUP OF INSTITUTIONS

# Admissions Open

## COURSES OFFERED

- **PUC (Science)** Integrated with NEET/JEE
- **NEET Long Term** Repeaters Batch
- **PUC (Arts)** Integrated with UPSC/CLAT
- **PUC (Commerce)** Integrated with CA Foundation
- **B.A, B.Sc, B.Com BBA & BCA** Integrated with UPSC
- **Pre Cum Mains UPSC for Graduates** One Year Exclusive UPSC Course
- **MSc (Maths)**

Head Office: Shaheen Nagar, BIDAR - 585403.
www.shaheengroup.org | Toll Free: 1800 121 6235



**If not delivered, please return to :**
**THE EDITOR, Karnataka Scout & Guide**
**State Headquarters, Shanthi Gruha**
**#39, Palace Road, Bengaluru - 560 001**
**Ph.: 080-22260017, 22267470**
**e-mail.: info@bsgkarnataka.org**
**shanthigruha@scout.org.in**
**www.bsgkarnataka.org**

Published by: K. Gangappa Gowda, Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Road, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001. Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru 560 026
Editor: K. Gangappa Gowda